ಯಕ್ಷಗಾಯನ

# ರೋಹಿಣಿ ಶಕಟ ಶನಿ ಮಹಾ ಪುರಾಣ

ಅರ್ಥಾತ್

# ಮಹಾಂದಾತ ಚರಿತ್ರೆ

ಶ್ರೀ ಮೃತ್ಯುಂಜಯ ಪ್ರಕಾಶನ, ದಾವಣಗೆರೆ ಸಿಟಿ.

|| ಓಂ ||

ಶ್ರೀ ಶನೇಶ್ವರಾಯನಮಃ

ಮಹಂಡಾತ ಚಕ್ರವರ್ತಿಯನ್ನು ದ್ವಾದಶವರ್ಷ ಪೀಡಿಸಿದ

ಯಕ್ಷಗಾಯನ

# ರೋಹಿಣೀ-ಶಕಟ ಶನಿಮಹಾ ಪುರಾಣ

ದ್ಯಾಮಪ್ಪನಹಳ್ಳಿ ಬ್ರಹ್ಮತೀರ್ಥಾಶ್ರಮನಿವಾಸಿಗಳಾದ

ಪಂಡಿತ ಶ್ರೀ ರೇವಣ್ಣ ಕವಿಗಳಿಂದ ರಚಿಸಲ್ಪಟ್ಟಿದೆ.


ಪ್ರಕಾಶಕರು :

**ಶ್ರೀ ಮೃತ್ಯುಂಜಯ ಪ್ರಕಾಶನ,**

**ದಾವಣಗೆರೆ.**



(ಈ ಪುಸ್ತಕದ ಸ್ವಾಮಿತ್ವವು ಪ್ರಕಾಶಕರದು.)



ತೃತೀಯ ಮುದ್ರಣ ೧೯೬೫.

ದೊರೆಯುವ ಸ್ಥಳ:

ಶ್ರೀ ಹಾಲೇಶ ಬುಕ್ ಡಿಪೊ, ದಾವಣಗೆರೆ ಸಿಟಿ.

ಬೆಲೆ: ೧ ರೂಪಾಯಿ.

# ಕವಿಯ ಹರ್ಷೋದ್ಗಾರ....

ಕಾಡುವ ವಿಧಿಯನ್ನು ಹಿಂದೂಡುವ ಶನಿಪಾರಾಯಣವು ಸಕಲರಿಗೂ ಗೊತ್ತಿರುವ ಸಂಗತಿಯಷ್ಟೆ. ಈ ಹಿಂದೆ ವಿಕ್ರಮಾರ್ಕ ಶನಿಮಹಾಪುರಾಣವನ್ನು ಬರೆದು ಶ್ರೀ ಮೃತ್ಯುಂಜಯ ಪ್ರಕಾಶನದವರಿಂದ ಪ್ರಚಾರಗೊಳಿಸಲ್ಪಡಲು ಅದನ್ನೋದಿದ ಮಹನೀಯರು ಸಂತೋಷಭರಿತರಾಗಿ ಮಹಾಂದಾತ ಶನಿಮಹಾಪುರಾಣವನ್ನು ಬರೆಯಬೇಕೆಂದು ಹಲವರು ಹಂಬಲಿಸಿದಪ್ರಯುಕ್ತ ಸಕಲ ಶಾಸ್ತ್ರಾಧಾರಮೂಲಕ ಈ ರೋಹಿಣಿ-ಶಕಟ ಶನಿಮಹಾತ್ಮೆಯನ್ನು ಸ್ವಯಂ ಕವಿತಾಶಕ್ತಿಯಿಂದ ಬರೆಯಲಾಯಿತು.

ಕನ್ನಡ ನಾಡಿನ ಬಹುಭಾಗದಲ್ಲಿ ನನ್ನಿಂದ ರಚಿಸಲ್ಪಟ್ಟ ಅಡಿಗೆ ಮನೆ ವೈದ್ಯ. ರೇವಣಸಿದ್ಧ ಯೋಗತಂತ್ರ, ಹನುಮಸಂಜೀವಿನಿ, ವ್ರತಕಲ್ಪವೈದ್ಯ ಇತ್ಯಾದಿ ಯಂತ್ರ-ಮಂತ್ರ ವೈದ್ಯ ಗ್ರಂಥಗಳು ಘನಕೀರ್ತಿಯಿಂದ ಮೊಳಗುತ್ತಿರುವವು ಎಂದರೆ ಯಾರಿಗತಾನೇ ಹರ್ಷವಾಗಲಿಕ್ಕಿಲ್ಲ. ಅಸ್ತು ಈ ಮಹಾಂಡಾತ ಮಹಾರಾಜ ರೋಹಿಣಿ-ಶಕಟ ಶನಿಮಹಾಪುರಾಣವನ್ನು ಪಾರಾಯಣ ಮಾಡುವದರಿಂದ ರೋಗ. ದಾರಿದ್ರ, ಕಷ್ಟ-ನಷ್ಟಗಳು ತೊಲಗಿ ಸುಖ-ಸಂಪತ್ತುಗಳುಂಟಾಗಲು ಅನೇಕ ರೀತಿಯಿಂದ ಶನಿಸ್ಮರಣೆ ಕ್ರಮಗಳನ್ನು ವಿವರಿಸಲಾಗಿರುವುದಲ್ಲದೆ ಬೆಳಗಿನ ಬ್ರಾಹ್ಮೀಮುಹೂರ್ತಕ್ಕೆ ಸರಿಯಾಗಿ ನವಗ್ರಹ ಪೂಜೆಯನ್ನು ವೇದೋಕ್ತ ರೀತಿಯಿಂದ ಸರ್ವರೂ ಮಾಡಿ ತೀರ್ಥಪ್ರಸಾದಗಳನ್ನು ಸೇವಿಸಿ, ತಮ್ಮ ತಮ್ಮ ಪತ್ನೀ-ಪುತ್ರರಿಂದ ಗೃಹವನ್ನು ಸೇರಿದರೆಂದರೆ ಶ್ರೀ ಶನಿದೇವರು ಅವರೆಲ್ಲರಿಗೂ ಸುಖ-ಸಂಪತ್ತುಗಳನ್ನು ಅನುಗ್ರಹಿಸಿ ಕಾಪಾಡುವನೆಂಬುದರಲ್ಲಿ ಅಡ್ಡಿಯಿಲ್ಲ.

ನನ್ನೀ ಉಭಯ ಶನಿಮಹಾಪುರಾಣ ಪಾರಾಯಣವು ಕರ್ನಾಟಕಾಂಧ್ರ ಪ್ರದೇಶದ ಮಹಾನುಭಾವರ ಪ್ರತಿ ಮನೆಗಳಲ್ಲೂ ಭಕ್ತಿಪೂರ್ವಕವಾಗಿ ಪೂಜೆಗೊಂಡು ಅವರ ಕಷ್ಟ-ನಷ್ಟಗಳೆಲ್ಲ ತೊಲಗಿ ಸರ್ವಸೌಖ್ಯ ಉಂಟಾಗಲೆಂದು ಫಾಲಲೋಚನ ಸದ್ಬ್ರಹ್ಮಲಿಂಗನನ್ನು ಆತ್ಮಪೂರ್ವಕವಾಗಿ ಧ್ಯಾನಿಸುತ್ತೇನೆ.

ಇತಿ.

—ಗ್ರಂಥಕರ್ತ.

॥ ಪರಬ್ರಹ್ಮಣೇ ನಮಃ ॥

ಯಕ್ಷಗಾಯನ

# ರೋಹಿಣಿ-ಶಕಟ ಶನಿ-ಮಹಾಪುರಾಣ

★★★

## ಶ್ರೀ ವಿಘ್ನೇಶ್ವರ ಸ್ತುತಿ

ರಾಗ-ಜಂಪೆ

ಪಾರ್ವತೀಪತಿಪುತ್ರ । ಪಾವನಾ ಗಣನಾಥ ।
ಸರ್ವಕಾಲದಿ ನನ್ನ । ರಕ್ಷಿಸೋ ದೇವಾ ॥ ೧ ॥
ಹವ್ಯಕವ್ಯದದಾತಾ । ಕಾವ್ಯಕರ್ಮದ ಪ್ರೀತಾ ।
ಭವದ ಬಂಧನ ಕಳೆವ ! ಸ್ವಾಮಿ ಗಣನಾಥ ॥ ೨ ॥
ಸುರಮುನಿ ಗಣವೃಂದ । ಸರಸ್ವತೀ ಅತಿಪ್ರೀತಾ ।
ಹರಿಹರಾ ಅಜಸೇವಾ । ದೇವ ಗಣನಾಥ ॥ ೩ ॥

**ವಚನ॥** ಈ ಪ್ರಕಾರವಾಗಿ ಪ್ರಮಥಗಣರೊಡೆಯನಾದ ವಿಘ್ನೇಶ್ವರನನ್ನು ಪ್ರಾರ್ಥಿಸಿ, ಮುಂದೆ ವಿದ್ಯಾವಿಶಾರದೆಯಾದ ಸರಸ್ವತೀದೇವಿಯನ್ನು ಸ್ತುತಿಪೆಂ.

**ರಾಗ—ಏಕತಾಳ**

ವಾಣಿ ಬ್ರಹ್ಮನರಾಣಿ ವೀಣಾಂಕವೇಣಿಯೆ । ಪಾಣಿ ಪುಸ್ತಕ ಶ್ರೇಣಿ ಪರಮ ಕಲ್ಯಾಣಿ ॥ ೧ ॥ ಸುರನರಸರಸ್ವತಿ ಪರಮವಿಶಾರದೆ । ಹರಿಹರ ಅಜ ಗುರುಸ್ಮರಿಪವಿಖ್ಯಾತೆ ॥ ೨ ॥ ವಿದ್ಯಾವಿಶಾರದೆ ಬುದ್ಧಿಯ ಪ್ರಬಲಿಸಿ । ಶುದ್ಧಿ ಈ ಕಾವ್ಯವ ಬರೆಸಮ್ಮ ದೇವೀ ॥ ೩ ॥

**ವಚನ**। ಈ ರೀತಿಯಾಗಿ ಬುದ್ಧಿ ವಿದ್ಯಾಪ್ರಧಾನಳಾದ ಸರಸ್ವತಿದೇವಿಯನ್ನು ಸ್ಮರಿಸಿ ಮುಂದೆ ದೇವಾನುದೇವತೆಗಳನ್ನು ನುತಿಸುತಿರ್ಪಂ

**ರಾಗ—ತ್ರಿಹುಡಿ**

ಹರಿ-ಹರಾ ಅಜ-ರುದ್ರ ಇಂದ್ರರು । ಸುರ ಸರಸ್ವತಿ ಲಕ್ಷ್ಮಿ ಪಾರ್ವತಿ । ವರಮುನಿ ಕವಿಕಾವ್ಯಕರ್ತರು । ಎನ್ನ ಪಾಲಿಸಲಿ ॥೧॥ ಸೋಮಸೂರ್ಯಾಗ್ರಹಗಳೆಲ್ಲರು ! ಸಾಮವೆದ ಪುರಾಣ ಶಾಸ್ತ್ರವು । ಕಾಮಿತಾರ್ಥವಕೊಟ್ಟು ಸಲಹಲಿ । ಎಲ್ಲಕಾಲದೊಳು ॥ ೨ ॥ ಹಿರಿಯ ಕಿರಿಯಾ ದೇವರೆಲ್ಲರು । ಪೊರೆದು ಪಾಲಿಸಿ ಸಲಹಲೆಮ್ಮನು । ಕರಮುಗಿದು ನಾಂ ಬೇಡಿಕೊಂಜೆನು । ಸರ್ವಕಾಲದೊಳು ॥ ೩ ॥

**ವಚನ**॥ ಸರ್ವ ದೇವಾನುದೇವತೆಗಳನ್ನು ಪ್ರಾರ್ಥಿಸಿ, ತಾನಾರಾಧ್ಯಮೂರ್ತಿಯಾದ ಆಧ್ಯಾತ್ಮ ಸದ್ಗುರು ಬ್ರಹ್ಮಲಿಂಗಸ್ವಾಮಿಯನ್ನು ಗ್ರಂಥಕರ್ತನಾದ ಪಂಡಿತ ರೇವಣ್ಣಕವಿಯು ಪ್ರಾರ್ಥಿಸುತಿರ್ದನದೆಂತೆನೆ

**ರಾಗ—ಯಾಲಪದ**

ಮಠವಭೂಮಿ ಬಿಲ್ವಾವನವು ನೋಟಕಾಶ್ಚರಿಯಾಗಿತೋರ್ಪ। ದಿಟವು ಧ್ಯಾನಮೌನಳ್ಳಿಸಿವಾಸನು । ಓಂ ಬ್ರಹ್ಮಾಲಿಂಗ । ಶ್ರೇಷ್ಠ ಜ್ಞಾನವ ಕೊಟ್ಟು ಪಾಲೀಸು ॥ ೧ ॥ ಅಲ್ಪಮತಿಯಾಲಿಂದಾನಾನು । ಹಲವು ಕೃತಿಯಾ ಲಿಖಿಸಿ ನಿನಗೆ । ಸ್ವಲ್ಪ ಸ್ವಲ್ಪ ಎಡೆಯಾ ಮಾಡಿರುವೆ । ಓಂ ಬ್ರಹ್ಮಾಲಿಂಗಾ । ಪಾಲಿಸೆನ್ನ ಗುರುವೇ ನೀನಿನ್ನು ॥ ೨ ॥ ರೋಹಿಣೀಯು ಶಕಟಾ ಶನಿಯು । ದೇಹಿಯೆಂದು ಸ್ಮರಿಸಿ ಮುಂದೆ ಏಹಿಏಹಿ ಕಥೆಯಾ ಪೇಳೂವೆ । ಓಂ ಬ್ರಹ್ಮಾಲಿಂಗ ಸಿಹಿ ನುಡಿಯಾ ಕೊಟ್ಟು ಪಾಲೀಸು ॥ ೩ ॥

**ವಚನ**॥ ಇಂತೆಂದು ತನ್ನಿಷ್ಟಮೂರ್ತಿಯಾದ ಬ್ರಹ್ಮಲಿಂಗ ಮಹಾಸ್ವಾಮಿಯು ಧ್ಯಾನಿಸಿ ಮುಂದೆ ಕಥಾ ವಿಸ್ತಾರವಂ ಪೇಳುತಿರ್ದನದೆಂತೆನೆ

**ರಾಗ—ತ್ರಿಹುಡಿ**

ಕಲಿಯುಗದಿ ಋತ್ವಿಜರು ಪೇಳಿದ । ಬಾಲೆ ರೋಹಿಣಿ ಶಕಟಶನಿಯಾ।

ಲೀಲವೈಭವ ಪೇಳುತಿರುವೆನು । ಕೇಳಿ ನೀವೆಲ್ಲಾ ॥ ೧ ॥ ಭಾನು ಸುತ ಶನಿ ಬ್ರಹ್ಮ ಬರಹದ । ಮುನ್ನ ವಿಧಿರೂಪದಲಿ ಜಗವನು । ಉನ್ನಿಯಂವದಿ ಮಾಡಿ ತೆರಳಿದ । ಶ್ರೇಷ್ಠ ಶನಿಕಥೆಯಾ ॥ ೨ ॥ ಯಕ್ಷಗಾಯನ ಕುಕ್ಷಿವರಿಯುವ। ಶಿಕ್ಷೆ ಶನಿ ರಕ್ಷೆಯನು ಕೊಡುವನು । ಮೋಕ್ಷದಾಯಕ ಇಕ್ಷುವಂಶಕ । ದೇವ ಶನಿ ರಾಜಾ ॥ ೩ ॥

**ವಚನ॥** ಬ್ರಹ್ಮನ ದಿನವೊಂದರ ಹಗಲಲ್ಲಿ ಸ್ವಾಯಂಭೂವಾದಿ ಹದಿನಾಲ್ಕು ಮನ್ವಂತರಗಳಾಗುವವು. ಒಂದೊಂದು ಮನ್ವಂತರದಲ್ಲಿ ಎಪ್ಪತ್ತೊಂದು ಮಹಾಯುಗಗಳಾಗುವವು. ಒಂದೊಂದು ಮಹಾಯುಗದ ಪ್ರಮಾಣ ನಲವತ್ತೊಂರು ಲಕ್ಷ ಇಪ್ಪತ್ತು ಸಾವಿರವಾಗುವದು. ಭೂ-ಸೃಷ್ಟ್ಯಾದಿ ಈ ವರೆಗಿನಿಗೂ ಆರು ಮನ್ವಂತರಗಳು ಕಳೆದು ಏಳನೆಯದಾದ ವೈವಸ್ವತ ಮನ್ವಂತರದಲ್ಲಿ ೨೭ ಮಹಾಯುಗಗಳು ಕಳೆದು ೨೮ ನೇ ಮಹಾಯುಗದ ಪ್ರಥಮಪಾದ ಕೃತಯುಗಾದಿ-ಕಲಿಯಾಂತ್ಯ ಜಗತ್ತಿನ ಜನರನ್ನು ಕಾಡುವ ಶನಿದೇವರ ಜನನವನ್ನು ಆತನ ಪರಿವಾರವು ಸೃಷ್ಟ್ಯಾದಿಯನ್ನು ಹೇಗಾಯಿತೆಂದು ಕಾಮ್ಯಕ ವನದಲ್ಲಿ ಧೌಮ್ಯ ಋಷಿಗಳನ್ನು ರಾಜರ್ಷಿ ಧರ್ಮರಾಜ ಕೇಳಲು ಅದಕ್ಕೆ ಮುನೀಶ್ವರನಿಂತೆಂದನು.

### ಭಾಮಿನೀ ಪದ್ಯ

ಅಂಡಪಿಂಡ ಬ್ರಹ್ಮಾಂಡನಾಯಕ ।
ಗಂಡುಗಲಿ ನವಬ್ರಹ್ಮ ಸೃಷ್ಟಿಯ ।
ಮೃಡನಕರುಣದಿ ಮಾಡಿಸಲಿಸಿದ ಹಿಂದೆ ತಾನಿನ್ನೂ ॥
ಹಿಂಡು ತನುಜೆಯರಾಗಿ ದಕ್ಷಗೆ ।
ಹೆಂಡರಾದರು ನೌವಿ ಬ್ರಹ್ಮಗೆ ।
ಅಂಡ ಪಿಂಡಗಳಾಗಿ ಜನಿಸಿದರಿನ್ನು ಮರ್ತ್ಯದಲೀ ॥

ಇಂತೆಂದು ಬ್ರಹ್ಮಾಂಡದ ಅಧೋಭಾಗದಲ್ಲಿ ಜಲವು ತುಂಬಿರುವದು. ಅದರ ಮೇಲೆ ಆದಿಕೂರ್ಮನೂ, ಕೂರ್ಮನ ಮೇಲೆ ಶೇಷನೂ, ಶೇಷನ ಮೇಲೆ

ದಿಗ್ದಂತಿಗಳು, ದಿಗ್ದಂತಿಗಳ ಮೇಲೆ ಭೂಮಿಯೂ, ಈ ಭೂಮಿಯ ಮಧ್ಯದಲ್ಲಿ ಒಂದರ ಮೇಲಿರುವ ಭರಣಿಗಳಂತೆ, ಪಾತಾಳದಿ ಏಳು ಲೋಕಗಳಿರುವವು. ಭರಣಿಯಂತಿರುವ ಈ ೭ ಲೋಕಗಳ ಮೇಲೆ ಮುಚ್ಚಳದಂತೆ ಭೂಮಂಡಲವಿರುವದು. ಅದರ ಮಧ್ಯದಲ್ಲಿ ಸುವರ್ಣ ಲಿಂಗದಂತೆ ಮಹಮೇರು ಪರ್ವತವಿರುವದು [ ಮೊದಲು ಆದಿಬ್ರಹ್ಮನು ತನ್ನ ಸಂಕಲ್ಪದಿಂದ ಅತ್ರಿ ಮರೀಚಿ ಅಂಗೀರಸ, ಪುಲಸ್ತ್ಯ ಪುಲಹ, ಕೃತು, ಭೃಗು, ವಶಿಷ್ಠ, ದಕ್ಷರೆಂಬ ನವಬ್ರಹ್ಮರನ್ನು ಸೃಷ್ಟಿಸಿದನು. ಬಳಿಕ ದಕ್ಷಬ್ರಹ್ಮನು ಅಸಿಕೆ ಎಂಬ ಪತ್ನಿಯಿಂದ ನೂರಾರು ಹೆಣ್ಣುಮಕ್ಕಳನ್ನು ಪಡೆದು, ಈಶ್ವರಾದಿ ಸಕಲರಿಗೂ ಕೊಟ್ಟು ಲಗ್ನವಂ ಮಾಡಿದನು. ಚಂದ್ರನಿಗೆ ೨೭, ಕಶ್ಯಪ ಬ್ರಹ್ಮನಿಗೆ ೧೩, ತನ್ನ ಸಹಜಾತರಾದ ಅತ್ರಿ, ಮರೀಚಿ, ಅಂಗೀರಸ, ಪುಲಸ್ತ್ಯ, ಪುಲಹ, ಕೃತು, ಭೃಗು, ವಶಿಷ್ಟರಿಗೆ ಒಬ್ಬೊಬ್ಬರು ಮತ್ತು ಕೃಶಾಶ್ವನಿಗೆ ಇಬ್ಬರು ಈ ರೀತಿ ಹೆಣ್ಣುಮಕ್ಕಳನ್ನು ಧಾರೆಯೆರೆದು ಕೊಟ್ಟನು. ಇವರಲ್ಲಿ ಧರ್ಮನ ಸತಿಯರಲ್ಲಿ ಅರುಂಧತಿಗೆ ಕಿನ್ನರರೂ, ಯಾಮಿಗೆ ನಂದಿಯೂ. ಲಂಬೆಗೆ ಸಿಡಿಲು ಮಿಂಚು, ಮರುತ್ವತಿಗೆ ಮರುತ್ತಗಳೂ, ಸುಖಾನವಿಗೆ ಸಿದ್ಧರೂ, ಸಂಕಲ್ಪೆಗೆ ಸಂಕಲ್ಪರೂ, ಮುಹೂರ್ತೆಗೆ ಮುಹೂರ್ತರು, ಸಾಧ್ಯನಿಗೆ ಸಾಧ್ಯರೂ, ವಿಶ್ವೆಗೆ ವಿಶ್ವದೇವರೂ, ವಸುವಿಗೆ ಅಷ್ಟವಸುಗಳೂ ಜನಿಸಿದರು. ಕಶ್ಯಪನ ೧೩ ಸತಿಯರಲ್ಲಿ ಅದಿತಿಗೆ ದ್ವಾದಶಾದಿತ್ಯರೂ, ದಿತಿಗೆ ದೈತ್ಯರೂ ದನುವಿಗೆ ದಾನವರೂ ಜನಿಸಿದರು ] ದೇವದೈತ್ಯರ ಕದನವಾಗಿ ಸಮುದ್ರವನ್ನು ಮಥನಮಾಡಲು ಅದರಲ್ಲಿ ಕಾಮಧೇನು, ಕಲ್ಪವೃಕ್ಷ, ಐರಾವತವೆಂಬ ಬಿಳಿ ಆನೆಯೂ, ಧನ್ವಂತರೀ, ಲಕ್ಷ್ಮೀ ನವನಿಧಿಗಳೇ ಮುಂತಾಗಿ ಅಷ್ಟೈಶ್ವರ್ಯಗಳು ಹುಟ್ಟಿದವು. ಈ ಐಶ್ವರ್ಯವನ್ನು ದೇವತೆಗಳು ಮೊದಲು ಅನುಭವಿಸಿ ನಂತರ ಭೂ-ನಿವಾಸಿಗಳಿಗೆ ದಯಪಾಲಿಸಿದರು. ಮಾನವರು ಕಿಂಚಿತ್ಕಷ್ಟವಿಲ್ಲದೆ ಸುಖವಾಗಿ ಐಶ್ವರ್ಯವನ್ನನುಭವಿಸುತ್ತಿರ್ದರವೆಂತೆನೆ.

### ರಾಗ—ಏಕತಾಳ

ಧರ್ಮದೇವನು ತಾನು ಒಂದು ದಿನದಿ ಮರ್ತ್ಯ | ಕುರಿತು ಬಂದನು ಭಿಕ್ಷೆ ಬೇಡಲು ಆಗ ‖ ೧ ‖ ಸುಖದಿಂದ ಮೈಮರೆತ ಸುಖವುಳ್ಳ ಪ್ರಜೆಗಳು |

ಧಿಃಕಾರ ಮಾಡಿವರು ಸೊಕ್ಕಿ ತಾವುಗಳೂ ॥ ೨ ॥ ಕರುಣವಿಲ್ಲದ ಜನರು ಶರ ಣೆಂಬ ದೀನರಿಗೆ। ಪರಿಪರಿ ವಂಚಿಸಿ ಕರಿಪಾತನಾಡಿ ॥ ೩ ॥ ಮರಣಮಾರಿ ಗಳಿಲ್ಲ ದುರಿತ ದೋಷಗಳಿಲ್ಲ। ಕರಕರೆ ಕೊಡುವ ರೋಗ ಇನ್ನಿಲ್ಲ ಜಗದಿ ॥೪॥ ಬಡತನ ಬರಲಿಲ್ಲ ಸುಡುವ ಬಂದಾನವಿಲ್ಲ। ಸಡಗಾರದಿಂದ ಪ್ರಜೆಯು ಮಿಕ್ಕಿ ಮೆರೆಯುತ್ತಾ ॥ ೫ ॥

**ವಚನ॥** ಇಂತೆಂದು ಒಂದಾನೊಂದು ದಿವಸ ಧರ್ಮದೇವನು ಮರ್ತ್ಯ ಲೋಕವಂ ಕುರಿತು ಬಂದು ಪ್ರಜೆಗಳಲ್ಲಿ ಭಿಕ್ಷೆಬೇಡಲು ಸಂಪತ್ತಿನಿಂದ ಮೈಮರೆತು ಮೆರೆಯುತ್ತಿದ್ದಾ ಜನರು, ಈತನನ್ನು ಉದಾಸೀನ ಭಾವದಿಂದ ಅನೇಕ ವಿಧವಾಗಿ ನಿಂದಿಸಲು, ಆದಕ್ಕಾಗಿ ಧರ್ಮದೇವನು ಚಿಂತಾಕ್ರಾಂತನಾಗಿ ದೇವಲೋಕಕ್ಕೆ ಹೋಗಿ ಏನೆನ್ನುತಿರ್ದನದೆಂತೆನೆ

## ರಾಗ—ಝಂಪೆ

ಕೇಳಿರೈ ದೇವತರೆ। ಕೇಳಿರೈ ನೀವೆಲ್ಲಾ। ಬಾಳುಗೆಟ್ಟರಿ ನೀವು। ಖೂಳ ಜನರಿಂದಲಿ। ದುಃಖವಿಲ್ಲದ ಪ್ರಜೆಯು। ಮಿಕ್ಕಿ ಮೆರೆಯುತಲಿಹರು। ದಿಕ್ಕಿಲ್ಲ ದೀನರಿಗೆ। ಇನ್ನು ಮರ್ತ್ಯದಲೀ ।೨। ಲಕ್ಷ್ಮಿಗರ್ವವು ಮುಸುಕಿ। ನಿರ್ಲಕ್ಷತನ ದಲಿ ಜನರೂ। ಭಿಕ್ಷುಗಳ ಜರಿದಾಡಿ। ಸೊಕ್ಕಿ ಕುಣಿಯುವರೂ ।೩। ಇಲಿ ಬೆಕ್ಕು ಕರಿ-ಸಿಂಹ। ಹುಲಿ ಗೋವು ವೈರಿಗಳೂ। ಇಲ್ಲದಾ ಮೇಲಿನ್ನು।ಛಲಿಲೆ ಯಿನ್ನುವವು ।೪। ಮಾನವಗೆ ಮೃತ್ಯುವೈರಿ। ದೀನದಾರಿದ್ರಗಳೂ। ಅನಿಷ್ಟ ಜರೆ ಮರಣಗಳು ಇಲ್ಲದಾಮೇಲೆ ।೫। ಹವ್ಯ ಕವ್ಯಗಳಿಲ್ಲ। ಪಿತೃದೇವಗಳಿಲ್ಲ। ಭುವನ ಭಾಗ್ಯಕೆ ಇನ್ನು। ಸರಿಯೆ ದೇವತರೂ ।೬।

**ವಚನ॥** ಧರ್ಮದೇವರು ದೇವಲೋಕದಲ್ಲಿ ಹೇಳಿದ ಮರ್ತ್ಯಲೋಕದ ವಿವರ ವನ್ನೆಲ್ಲಾ ದೇವತೆಗಳು ಕೇಳಿ, ಹರಿ-ಹರ-ಬ್ರಹ್ಮಾದಿಗಳಲ್ಲಿ ಬಿನ್ನೈಸಿ ಕೊಳ್ಳಲು, ಆದಕ್ಕಾಗಿ ಹರಿ-ಹರರು ಬ್ರಹ್ಮನಿಗೆ ವಿಧಿ ನೇಮಗಳನ್ನು ನಿರೂಪಿಸಲು ಬ್ರಹ್ಮದೇವರು ನಿಧಿಗೆ-ವಿಧಿ ನೇಮಗಳನ್ನು ಸೃಷ್ಟೀಕ ರಣ ಮಾಡುತಿರ್ದನದೆಂತೆನೆ

## ರಾಗ— ಆಟತಾಳ

ಧರ್ಮದೇವನ ಕರೆದು ಬ್ರಹ್ಮನು । ಕರ್ಮಕಾಯಕನೆನಗೆ ಧರಿಸುನು । ಮರ್ಮಮಾಯೆಯ ಮಾಡಿ ಸಲಹುವ ಕರ್ಮದೇವತರಾ।೧। ನಿನ್ನ ಉದರದಿ ಜನಿಸಿ ಅರ್ಕನ । ಸೂನು ಶನಿ ಬೆಂಬಲದಿ ಧಾತ್ರಿಯ । ಜನರ ಕಾಡುವರೂಪು ರೇಖೆಯ ಇನ್ನು ನಿರ್ಮಿಸುವೆ ।೨। ಬ್ರಹ್ಮಬರಹಾ ಮೀರಲಸದಳ । ಹನ್ನ್ಮನಾ ಜನತಿಳಿದು ನೋಡಲಿ । ಬ್ರಹ್ಮ ಸೂತ್ರವೆನಿಧಿಯು ಶನಿಯು । ಎಂದತಾನಾಗ।

**ವಚನ॥** ಇಂತೆಂದು ಬ್ರಹ್ಮನು ಧರ್ಮನಿಗೆ ಕರ್ಮಕಾಂಡಗಳುದಿಸುವಂತೆ ಅನುಗ್ರಹವಂ ಕೊಟ್ಟು ಕಳುಹಿಸಲು, ವಿಧಿಕರ್ಮಗಳುದಿಸಲನುವಾದುವು. ಹೇಗೆಂದರೆ — ಧರ್ಮನಿಗೆ ಮೃಷೆ ಎಂಬುವ ಪತ್ನಿಯಲ್ಲಿ ಡಂಬನೂ, ಮಾಯೆಯೂ ಜನಿಸಿದರು. ಈ ಮಾಯೆಗೂ-ನಿರುತಿಗೂ ಲೋಭ-ನಿಕೃತಿಗಳು ಹುಟ್ಟಿದವು. ಲೋಭಕ್ಕೆ ಭೂಮಿ ಎಂಬುವಳಲ್ಲಿ ಕ್ರೋಧವೂ ಹುಟ್ಟಿತು, ನಿಕೃತಿಗೆ ಹಿಂಸೆ ಎಂಬುವಳು ಜನಿಸಿದಳು. ಕ್ರೋಧಕ್ಕೂ ಹಿಂಸೆಗೂ ದುರುಕ್ತಿಯುದಯಿಸಿದಳು. ಕಲಿ-ದುರುಕ್ತಿಗಳಿಗೆ ಭಯವೆಂಬ ಮಗನೂ, ಮೃತ್ಯುವೆಂಬ ಮಗಳೂ ಹುಟ್ಟಿದರು. ಇವರೀರ್ವರಿಂದ ನಿರಯ (ನರಕ) ಎಂಬ ಮಗನೂ, ಯಾತನೆ ಎಂಬ ಮಗಳೂ ಜನಿಸಿದರು. ಇವರಿಂದ ದುರ್ನೀತಿ, ದುರ್ಮಾರ್ಗ, ಕಪಟ, ಕುತ್ಸಿತ, ಮಹಾದ್ರೋಹ, ತಸ್ಕರ, ತವುಳಿ, ವಂಚನೆ, ದುರ್ಜನತ್ವ, ಸಂಯುಗ, ವಿಕೃತಿ, ರೋಗ, ಸಂತಾಪ, ಬಲ್ಮನಿಸು, ಹಾನಿ ಇವುಗಳೆಲ್ಲ ಉದಯಿಸಿದವು ಇದಿಷ್ಟು ಧರ್ಮಬ್ರಹ್ಮನ ಸೃಷ್ಟಿಯಾಯಿತುಬಳಿಕ ಕೃಶಾಶ್ವ-ಅರ್ಚಿಯವರಿಗೆ ಧೂಮಕೇತ್ವಾದಿಗಳು ಸಂಭವಿಸಿದವು. ಇವೆಲ್ಲಾ ತಾಪತ್ರಯಗಳತಂಡವು ಶನಿದೇವರಿಗೆ ಸೈನ್ಯವರ್ಗವಾಗಿ ನಿಂತಿತು. ಸೂರ್ಯನಿಗೆ ಛಾಯಾದೇವಿ ಎಂಬ ಪತ್ನಿಯಲ್ಲಿ ಯಮನೂ ಶನಿಯೂ ಜನಿಸಿದರು. ಯಮನಿಗೆ ಶಾಮಲೆಯೆಂಬ ಪತ್ನಿಯಲ್ಲಿ ಗುಳಿಕನೆಂಬ ಕಾಲರಾಹು ಜನಿಸಿದನು. ಈ ಗುಳಿಕನು ಶನಿಗೆ ದತ್ತಪುತ್ರನಾದನು. ಧರ್ಮ ವಂಶದ ಕನಿಷ್ಟ ಪರಂಪರಗಳೆಲ್ಲ ಈ ಶನಿದೇವರಿಗೆ ಸೈನಿಕ ವರ್ಗವಾಗಿ ನಿಧಿ-ನಿಕ್ಷೇಪಗಳಿಂದ ಮೈಮರೆತು ಕುಣಿಯುತ್ತಿದ್ದ ಪ್ರಜೆಗಳನ್ನು ಪೀಡಿಸಿ ಅವರಿಗೆ ಸದ್ಬುದ್ಧಿ ಬರುವಂತೆ ಪ್ರಯತ್ನ ಮಾಡಲನುವಾದರು. [ಶನಿಗೆ ಮಾತ್ರ

ಗರ್ಭವಾದ ಮಾನವನ ಛಾಯೆ(ನೆರಳು)ಯಲ್ಲಿಯೇ ಈ ಶನಿ ತಂಡವೆಲ್ಲ ಅಡ ಗಿದ್ದು ಕಾಲಾನುಕಾಲ ಸಾಧಿಸಿ ಒಮ್ಮಾನೊಂದುದಿವಸ ನಿಧಿಗೆ ವಿಧಿರೂಪವಾಗಿ ಬೆನ್ನು ಹತ್ತುವದು. ಇದೇ ಶನಿಕಾಟವು. ಸೃಷ್ಟ್ಯಾದಿಯಲ್ಲಿ ಮೊದಲು ಸ್ವಾಯಂಭುವ ಮನವು ತನ್ನ ಮಗನಾದ ಪ್ರಿಯವ್ರತನಿಗೆ ಸಕಲ ಸಾಮ್ರಾಜ್ಯ ಪಟ್ಟವನ್ನು ಕಟ್ಟಿದನು. ಅವನು ರಥಾರೂಢನಾಗಿ ಸುರಗಿರಿಯನ್ನು ಏಳು ಬಾರಿ ಸುತ್ತು ಹಾಕಲು, ಆ ರಥದ ಗಾಲಿಯು ಹಾಯ್ದುದರಿಂದ ಜಂಬು, ಪ್ಲಕ್ಷಾದಿ ಸಪ್ತದ್ವೀಪಗಳೂ, ಲವಣ, ಇಕ್ಷ್ವಾದಿ ಸಪ್ತಸಮುದ್ರ ಗಳೂ ಉಂಟಾದವು. ಸುವರ್ಣ ಭೂಮಿಯು ಲೋಕಾಲೋಕ ಪರ್ವತವೂ ಮಹಾಂಧಕಾರ ಭೂಮಿಯೂ. ಈ ಮೇರು ಪರ್ವತದ ಒತ್ತಿನಲ್ಲಿಯೇ ಇರು ವವು. ಭೂಮಂಡಲದ ಮಧ್ಯದಲ್ಲಿರುವ ಮಹಾಮೇರು ಪರ್ವತದ ಮೇಲೆ ಎರಡನೆಯದಾದ ಭುವರ್ಲೋಕವಿರುವದು. ಅದಕ್ಕೆ ಸೂರ್ಯನು ಒಡೆ ಯನು. ಅಲ್ಲಿಂದಾಚೆಗೆ ಚಂದ್ರತಾರಕ, ಬುಧ, ಶುಕ್ರ, ಮಂಗಳ, ಗುರು, ಶನಿ, ಸಪ್ತ ಋಷಿಮಂಡಲ, ಧೃವಾದಿಗ್ರಹ ನಕ್ಷತ್ರಗಳಿರುವವು. ಇವುಗಳನ್ನು ದಾಟಿ ಮೂರನೆಯದಾದ ಸ್ವರ್ಗಲೋಕವಿರುವದು. ಧೃವನಕ್ಷತ್ರದಿಂದಾಚೆ ನಾಲ್ಕನೆಯದಾದ ಮಹಾಲೋಕವಿರುವದು. ಇಲ್ಲಿಂದಾಚೆಗೆ ಐದನೆಯದಾದ ಜನರ್ಲೋಕವಿರುವದು., ಅಲ್ಲಿಂದಾಚೆಗೆ ಆರನೆಯದಾದ ತಪೋರ್ಲೋಕವಿರು ವದು, ಇದರಿಂದಾಚೆಗೆ ಏಳನೆಯದಾದ ಸತ್ಯಲೋಕವಿರುವದು. ಅದರಾಚೆಗೆ ನಿರಾಕಾರವಾದ ಆಕಾಶವಿರುವದು. ಮತ್ತು ಮೂವತ್ತು ವರ್ಷಕೊಂದಾವರ್ತಿ ನಕ್ಷತ್ರ ತಾರಾಮಂಡಲದಲ್ಲಿರುವ ರೋಹಿಣೀ ತಾರಾಮಂಡಲದಲ್ಲಿ ಶನಿ ಸಂಪರ್ಕ ಬೆಳೆಯುವದರಿಂದ ಜಗತ್ತಿನಲ್ಲಿ ಹಾಹಾಕಾರವೂ ರೋಗೋಪದ್ರವ ಗಳೂ ಉಂಟಾಗುವವು. ವೈವಸ್ವತ ಮನುವಿನ ಪುತ್ರಿಯಾದ ಇಳೆ ಎಂಬಾಕೆಗೆ ಚಂದ್ರನ ಮಗನಾದ ಬುಧನಿಂದ ಪುರೋರವ (ಮಂಗಳ) ನೆಂಬುವನು ಜನಿಸಿ ಶನಿಗೆ ಸಹಾಯಕನಾದನು. ಮತ್ತು ಕಶ್ಯಪ ಬ್ರಹ್ಮನ ಆರನೇ ಪತ್ನಿ ಸಂಹಿತೆಗೆ ರಾಹು ಮೊದಲಾದ ನಾಲ್ವರು ಮಕ್ಕಳಾದರು. ಅವರೊಳಗೆ ರಾಹುವೆಂಬು ವನು ಶಾಂಭವಿಯ ಮಹಾಶಕ್ತಿಯಿಂದ ಮೋಹಿನೀ ರೂಪವನ್ನು ತಾಳಿದ ವಿಷ್ಣುವಿನಿಂದ ಶಿರಚ್ಛೇದನವಾದವನಾದರೂ ಅಮೃತಪ್ರಾಶನ ಬಲದಿಂದ ರಾಹು ಕೇತುಗಳೆನಿಸುವ ಎರಡು ಪ್ರಕಾರದ ದೇಹಿಗರಾಗಿ ತಮೋಮಯರೆನಿಸಿ ಭೂ

ಛಾಯದೊಳಡಗಿರ್ದ ಶನಿಗೆ ಬೆಂಬಲಿಗರಾದರು. ಆದಿಬ್ರಹ್ಮನಿಗೆ ವಿಧಿ, ವಿಧಿರೂಪಿಗಳಾದ ಧಾತೃ-ವಿಧಾತೃವೆಂಬಿಬ್ಬರು ಮಕ್ಕಳು ಆವದೀಲೋಕ ಪಾಪ ಪುಣ್ಯಗಳನ್ನು ನಡೆಸುತ್ತಿರುವರು. ಅವರಿಗೆ ಲಕ್ಷ್ಮಿಯಿಂದಲೂ, ಜ್ಯೇಷ್ಠಾದೇವಿಯಿಂದಲೂ, ಇಬ್ಬರು ಹುಟ್ಟಿದರು. ಅವರೊಳಗೆ ಲಕ್ಷ್ಮಿಗೆ ಜಾಣ್ಮೆಗಳು ಜನಿಸಿದವು ಜ್ಯೇಷ್ಠಾದೇವಿಗೆ ಶತ್ರುಗಳೆಂಬ ಮಗಳಾದಳು. ಆ ಕೆಗೆ ಗೌಂಡಿ, ಪೈಷ್ಟಿ, ಮಾಧ್ವಿಯರೆಂಬ ಮೂರು ತೆರದ ಸುರೆ ಹುಟ್ಟಿತು. ಆ ಸುರೆಯಿಂದ ಅಧರ್ಮ ಜನಿಸಿದನು. ಆತನಿಗೆ ಭಯ, ಮಹಾಭಯ, ಅಂತಕರೆಂಬ ಮೂವರು ಮಕ್ಕಳು ಮತ್ತೆ ಕೆಲವು ಪುತ್ರರೂ ಹುಟ್ಟಿದರು. ಅವರಿಂದ ಕ್ರೌಂಚ, ಕಾಗೆ, ಹದ್ದು, ಗಿಡಗ; ಚಕ್ರವಾಕಾದಿ ನಾನಾ ಪಕ್ಷಿಜಾತಿ ಹುಟ್ಟಿ ಶನಿದೇವರಿಗೆ ಬೆಂಗಲಿಗರಾದರು, ಇವರೆಲ್ಲರೂ ಮಾನವನಿಗೆ ನಾನಾ ರೀತಿಯಿಂದ ಹಿಂಸೆಯನ್ನು ಕೊಡುವರು. ಶನಿದೇವರು ಜಗತ್ತಿನ ಅಹಂಕಾರವನ್ನು ನೋಡಿ, ಅಹಂಕಾರಾದಿ ದೇವತೆಯಾದ ಲಕ್ಷ್ಮಿಯನ್ನು ಮೊದಲು ಗರ್ವಹರಣ ಮಾಡಿ ತದನಂತರ ಮರ್ತ್ಯಲೋಕದವರ ಗರ್ವವನ್ನು ಮುರಿಯುವೆನೆಂದು ಆಲೋಚಿಸಿ ವೈಕುಂಠಲೋಕವಂ ಕುರಿತು ತೆರಳಲು, ಇತ್ತ ಮಾನವಲೋಕದ ಮಹಾಂಧಾತ ಚಕ್ರವರ್ತಿ ಕಥಾ ವಿಸ್ತಾರವನ್ನು ಹೇಳುತಿರ್ಪೆನದೆಂತೆನೆ.

### ರಾಗ— ಏಕತಾಳ

ಸಪ್ತಮನ್ವಂತರದಿ ಇಪ್ಪತ್ತೆಂಟನೆಯುಗವು । ಒಪ್ಪುದಾವುದನ್ನ ಭೂಲೋಕದೊಳಗಿನ್ನು ॥ ೧ ॥ ಅಂಬರೀಷಾನ್ವಯಾಂತ ಕುಂಭಿಯನಾಳುತೆ । ಇಂಬುಗೊಡದು ವಿಧಿಗೆ ಸಂಭ್ರಮದಾ ನಿಧಿಯು ॥ ೨ ॥ ವಂಶಾನು ವಂಶವು ಸಂಶವು ತಿರುಗುತ । ಸಂಶಯ ಪಡುತ್ತಿದ್ದ ಯುವನಾಶ್ವ ದೊರೆಯು ॥೩॥ ಮಕ್ಕಳಿಲ್ಲದೆ ಶೋಕ ಸಂತಾಪಪಡುತ್ತಿದ್ದ । ಮುಕ್ಕಣ್ಣ ಕೊಟ್ಟನು ಮಾಂಧಾತ ಮಗನ ।

**ವಚನ॥** ಇಂತೆಂದು ಕೃತಯುಗದಾದಿಯಲ್ಲಿ ವೈವಸ್ವತಮನುವಿನ ಇಕ್ಷ್ವಾಕು ವಂಶವೃದ್ಧ ಅಂಬರೀಷನ ವಂಶಾನುಕ್ರಮವಾಗಿ ಸೇನಜಿತ್ತು ದೊರೆಗೆ ಯುವನಾಶ್ವದೊರೆಯುದಿಸಿದನು, ಈತನಿಗೆ ಮಕ್ಕಳಿಲ್ಲದ್ದರಿಂದ ಪುತ್ರಕಾಮೇಷ್ಟಿಯಾಗವನ್ನು ಋಷಿಮುಖ್ಯರಿಂದ ಮಾಡಿಸಲು ಪ್ರಾರಂಭಿಸಿದನು. ಒಂದಾನೊಂದು ದಿನ ರಾತ್ರಿ ಯುವನಾಶ್ವ ದೊರೆಗೆ

ಬಾಯಾರಿಕೆಯಾಗಿ, ಯಜ್ಞಶಾಲೆಯಲ್ಲಿಟ್ಟಿದ್ದ ಮಕ್ಕಳ ಫಲ ಮಂತ್ರ ತೀರ್ಥವನ್ನು ನೀರೆಂದು ಕುಡಿದುದರಿಂದ ಯುವನಾಶ್ವನೇ ಗರ್ಭವಂ ಧರಿಸಿ, ಆ ವ ನ ಬಲಹೊಟ್ಟೆಯಿಂದ ಗಂಡುಮಗುವು ಜನಿಸಿತು, (ಮುನಿಗಳ ಮಂತ್ರೋದಕದಿಂದ ಯುವನಾಶ್ವನ ಹೊಟ್ಟೆ ಒಡೆದಿದ್ದರೂ ಅದು ಮೊದಲಿನಂತಾಗಿ ರಾಜನು ಸುಖವಾಗಿದ್ದನು) ಜನಿಸಿದ ಶಿಶುವು ಮೊಲೆಹಾಲಿಲ್ಲದೆ ಅಳುತ್ತಿರಲು, ಆ ಯಜ್ಞಾಧಿಪತಿಯಾದ ಇಂದ್ರನೇ ಆ ಮಗುವಿಗೆ ಇಂತೆಂದನು ಎಲೈ ಮಗುವೇ ಅಳಬೇಡ (ಮಾಂದಾತ. ಅಂದರೆ, ನನ್ನನ್ನು ಪಾನಮಾಡು) ಎಂದು ತನ್ನ ಹೆಬ್ಬೆರಳನ್ನು ಮಗುವಿನ ಬಾಯಲ್ಲಿಟ್ಟು ಆ ಮೂಲಕ ಅಮೃತಪಾನವಂ ಮಾಡಿಸಿ ದನು, ಈ ಮಗುವೇ ಮುಂದೆ ಕ್ರಮವಾಗಿ ಮಹಾಂದಾತನೆಂದು ಪ್ರಸಿದ್ಧಿಗೊಂಡು ಅನೇಕ ಬಲಿಷ್ಠ ಶತ್ರುಗಳನ್ನು ಜೈಸಿ, ದೇವೇಂದ್ರ ನಿಂದ ತ್ರಸದ್ದಸ್ಯುವೆಂಬ ಬಿರುದನ್ನು ಪಡೆದನು (ಈ ಬಿರುದಿನ ಅರ್ಥ ವೇನೆಂದರೆ: ಆರು ರಾಯರ ಗಂಡ, ಮೂರು ರಾಯರ ಮಿಂಡ, ಧರ ಣಿಯೊಳು ಏಧಿಮಿಂಡ ಮಹಾಂದಾತ ಭೂಪ) ಹೀಗೆಂಬ ಬಿರುದಿನ ಮುತ್ತಿನ ಪೆಂಡೆಯನ್ನು ಧರಿಸಿ. ಪ್ರಾಪ್ತವಯಸ್ಕನಾದ ಮೇಲೆ ಶತ ಬಿಂದುವಿನ ಮಗಳಾದ ಬಿಂದುಮತಿಯನ್ನು ಲಗ್ನವಾಗಿ, "ಅಖಂಡ ಸಾಮ್ರಾಜ್ಯ ಸಾರ್ವಭೌಮ ಮ ಹಾ ಂ ದಾ ತ ಚ ಕ್ರ ವ ರ್ತಿ" ಎಂದು ಖ್ಯಾತಿಗೊಂಡು ರಾಜ್ಯಭಾರವಂ ಮಾಡುತ್ತಿರಲು, ಇತ್ತ ವೈಕುಂಠಲೋಕದಲ್ಲಿ ಶನಿಯು ಲಕ್ಷ್ಮಿಯನ್ನು ಕುರಿತು ಏನೆನ್ನುತಿ ರ್ದನದೆಂತೆನೆ

## ರಾಗ—ತ್ರಿಹುಡಿ

ಎಲೆಲೆಲಕ್ಷ್ಮಿಯೆ ಕೇಳುನಿನ್ನಗೆ | ಬಲವು ಯಾರದು ನೋಡಿಕೊಳ್ಳುವೆ ಕಾಲಪುರುಷಗೆಸರಿಯೆ ನಿನ್ನಯ ಗರ್ವ ಜಗದೊಳಗೇ ||೧|| ಧರೆ ಜನರ ಗರ್ವ ದಲಿ ಮುಳುಗಿಸಿ | ಸುರರಧ್ಯಾನವ ತೊರೆಸಿಮರೆಸಿಹೆ | ಹರನ ಭಕ್ತಿಯ ಅರಿದು ನಿಂತಿಯೆ ಇಲ್ಲಿನೀನಿನ್ನೂ || ೨ || ಸರಿಯೆ ವಿಧಿಗೇ ಸಿಥಿಯು ಜಗದಲಿ | ಸರಿಯೆ ನನ್ನಗೆನೀನುಲೋಕದಿ|ಮೆರೆಯುವಾ ಶನಿ ಹೆಚ್ಚು ಎನ್ನುತ ಜೊಗಳು ಬಾಯಲ್ಲಿ|

**ವಚನ॥** ಇಂತೆಂದು ಶನಿ-ದೇವನು ರೋಚ್ಚಿ ನಿಂದಾಡಿದ ಮಾತಿಗೆ ಅಟ್ಟಹಾಸದಿಂದ ಕುಳಿತಿರ್ದ ಲಕ್ಷ್ಮಿಯು ಶನಿಗ ಏನೆನ್ನುತಿರ್ದಳೆಂತೆನೆ.

### ರಾಗ—ಅಟತಾಳ

ಏನೋ ಶನಿ ಪ್ರೋ ಧಮನೀನೀಗ । ಕೂನುವರಿಸುವೆ ಬಂದು ಬೊಗಳುವಿ ಭಾನುವಿನ ತಬ್ಬಲಿಯು ಕುಮರನ ಬಲ್ಲೆ ನಾನಿನ್ನು ॥೧॥ ಅನ್ನನೀರಿಗೆ ಅಲೆದು ತಿರುಗುವ । ಕುನ್ನಿ ಶನಿ ಪೌರುಷವ ಪೇಳುವೆ । ಇನ್ನು ಇಲ್ಲಿರಕೂಡದೆಂದಳು ಲಕ್ಷ್ಮಿ ತಾನಿನ್ನು ॥ ೨ ॥ ಸರಿಯೆ ನಿಧಿಗೇ ವಿಧಿಯು ಜಗದೊಳು । ಸರಿಯೆ ನನ್ನಗೆ ನೀನು ಹುಚ್ಚನೆ । ತೆರಳು ಆಕಡೆ ಮೂರ್ಖನೆಂದಳು ಲಕ್ಷ್ಮಿ ತಾನಾಗ ಲಕ್ಷ್ಮಿ ಎಂದಾ ನುಡಿಗ ಶನಿಯು । ನಿರ್ಲಕ್ಷ್ಯತನವನು ತಾಳಿ ಕೋಪದಿ। ಪಕ್ಷಿಗಮನನ ಮಡದಿಗೇತಂ ಮತ್ತೆ ಇಂತೆಂದಾ ॥ ೪ ॥ ಕಳವು ಸುಲಿಗೆ ಮೋಸ ಡಂಭವು । ಇಳೆಗೆ ಕಲಿಸಿ ಮೆರೆಯುತಿರುವೆಯ । ಬಾಳುಗೆಡಿಸಿವೆ ದೇವ ಭಕ್ತಿಯ ಮರ್ತ್ಯಲೋಕದಲೀ ॥೫॥ ಭೋಗಭಾಗ್ಯವ ಕಳೆದು ಧರೆಯನು ! ಸೊಗಸು ಅಡಗಿಪೆ ಜನರಗರ್ವವ ಬಿಗಿಹಿಡಿದು ಪಾಲಿಸುವ ಶಕ್ತಿಯ ನೋಡ್ವೆ ನಿನ್ನೊಳಗೇ ॥ ೬ ॥ ಮಾನಮರ್ಯಾದೆಗಳ ತೊಲಗಿಸಿ । ಶಾನೆ ತೋರುವೆ ನನ್ನ ಶೌರ್ಯವ। ನೀನು ಕಾಯುವ ಶಕ್ತಿಯಿದ್ದರೆ ಕಾಯಬೇಕಿನ್ನು॥ ಶನಿಯು ಆಡಿದ ಮಾತುಕೇಳಿ ಕನ್ಯೆಲಕ್ಷ್ಮಿಯು ಸಿಟ್ಟಿನಿಂದಲಿ । ಶ್ವಾನನಂತೆ ಬೊಗಳುತಿರುವೆಯ ಖೂಳ ಶನಿಯೆಂದೂ ॥ ೮ ॥ ತಿರುಪೆ ತಿರುಕನೆ ಕೇಳು ನಿನ್ನಯ । ಹರಕು ಮಾತುಗಳೆನಗೆ ಸಾಟಿಯೆ ! ಪೋರಪೋಕರಿ ಎಂದು ತಿಳಿಯುವೆ ನಿನ್ನ ನಾನಿನ್ನು ॥೯॥ ಬೀದಿ ಕೂಳಿಗೆ ಬಿಕ್ಷೆಬೇಡುವ । ಆದಿಮೂಲನೆ ಬಲ್ಲೆ ನಿನ್ನಯ । ಭೇದಬುದ್ಧಿಯಬಿಟ್ಟು ಮುಂದಕೆ ತೆರಳು ನೀನಿನ್ನು ॥೧೦॥ ಹೀಗೆ ಶನಿ-ಲಕ್ಷ್ಮಿಯರ ಕದನವು। ಬೇಗೆಹತ್ತೀ ಬೆಯ್ಯುತಿರಲು। ಆಗ ದೇವತರೆಲ್ಲ ಬಂದರು ಅಲ್ಲಿಗೇ ತಾವು ॥ ೧೧ ॥

**ವಚನ॥** ಇಂತೆಂದು ಶನಿ-ಲಕ್ಷ್ಮಿಯರು ನಾನುಹೆಚ್ಚು ತಾನುಹೆಚ್ಚು ಎಂದು ಜಗಳವಾಡುತ್ತಿರುವ ಸಮಯದಲ್ಲಿ ದೇವತೆಗಳು ಬಂದು ಏನೆನ್ನುತಿರ್ದರದೆಂತೆನೆ.

## ರಾಗ–ದ್ವಿಪದಿ

ಶಿರಿಹೆಚ್ಚು–ಶನಿಹೆಚ್ಚು ಅರಿಯರೂ ದೇವತರೂ| ಪರಿಪರಿಯ ಜಗಳದಲಿ ತೊಡಗಿ ನೀವಿನ್ನೂ ॥ ೧ ॥ ಹರಿಹರಾ ಅಜಸುರರು ಹಿರಿದು ಕಿರಿದೆನ್ನುತಲೀ| ಕೊರಗಿಹೋದರು ಹಿಂದೆ ದೇವಯುಗದಲ್ಲೀ ॥ ೨ ॥ ಮೀರಿದಾಶನಿ-ಲಕ್ಷ್ಮಿ ಮಾರಿಮುಸಣಿಯರಾಗಿ | ಕಾರಣವ ತೋರಿಪದು ಇಲ್ಲಿ ನೀವಿನ್ನೂ ॥ ೩ ॥

**ವಚನ॥** ಇಂತೆಂದು ದೇವತೆಗಳು ಶನಿ-ಲಕ್ಷ್ಮಿ [ವಿಧಿ-ನಿಧಿ] ಯರಿಗೆ ಕಾರಣ ತೋರಬೇಕೆಂದು ಕೇಳುವಷ್ಟರಲ್ಲಿ ನಾರದ ಮಹಾಮುನೀಶ್ವರ ಬಂದು ಏನೆನ್ನುತಿರ್ದರವೆಂತೆನೆ.

## ರಾಗ— ಏಕತಾಳ

ಶನಿ-ಲಕ್ಷ್ಮಿ ಕೇಳಿರಿ | ನಾನೆಚ್ಚು ತಾನೆಚ್ಚು | ಎನ್ನೂವ ಬಗೆಯನ್ನು | ಅರಿಯಲು ನೀವು ॥ ೧ ॥ ಸುರರಾಯರಗಂಡ | ಮೂರುರಾಯರ ಮಿಂಡ| ಧರೆಯೊಳು ವಿಧಿವಿಂಡ ಮಹೇಂದ್ರಾತಭೂಪ ॥ ೨ ॥ ಧರೆಯಲ್ಲಿ ಧಾತ್ರಿಯ | ಪುರವನ್ನು ಪಾಲಿಪ | ಹಿರಿಯ ಮುಕ್ತಿನಪೆಂಡೆ ಧರಿಸಿ ತಾನಿನ್ನೂ ॥೩॥ ಅತನಲ್ಲಿಗೆಹೋಗಿ | ಹಿರಿದುಕಿರಿದೆನ್ನುವ | ನೂತನ ಮಾತನ್ನು| ಕೇಳಿರಿ ನೀವ್ನೂ ॥

**ವಚನ॥** ಇಂತೆಂದು ನಾರದಮಹಾಮುನಿಗಳು ಹೇಳುತ್ತಿರುವ ಸಮಯದಲ್ಲಿ ಪ್ರಮಥಗಣರುದ್ರರು ಬಂದು ಸರ್ವರನ್ನು ಕುರಿತು ಇಂತೆಂದರು. ಓ ದೇವತೆಗಳೇ ! ಆಯುರಾರೋಗ್ಯ, ಕುಲ, ಬಲ, ಪರಾಕ್ರಮ, ರೂಪು, ಯೌವನ, ವಿದ್ಯಾ, ಕೀರ್ತಿ ಸಂಪದಾದಿ ಸಕಲ ಸೌಭಾಗ್ಯದೊಳೊಂದೂ ಕೊರತೆ ಇಲ್ಲದ ಸಪ್ತಸಮುದ್ರಾಧೀಶ್ವರನಾದ ಸಾರ್ವಭೌಮನಿಗೆ ಸರ್ವ ನರರಿಗಿಂತಲೂ ನೂರ್ಮಡಿ ಸುಖವು ಅದಕ್ಕಿಂತ ನೂರ್ಮಡಿ ಮನುಜಗಂಧರ್ವ ಸುಖವೂ, ಅದಕ್ಕಿಂತ ನೂರ್ಮಡಿ ದೇವಗಂಧರ್ವರ ಸುಖವೂ ಅದಕ್ಕಿಂತ ನೂರ್ಮಡಿ ಪಿತೃಗಳಸುಖವು, ಅದಕ್ಕಿಂತ ನೂರ್ಮಡಿ ದೇವತಾಕನಿಷ್ಟ, ಮಧ್ಯಮ ಉತ್ತಮರ ಸುಖವು, ಹೀಗಿರುವಲ್ಲಿ ಸುಖಸಂಪದವು ಸರ್ವತ್ರ ಹರಡಿಕೊಂಡು ಅಹಂಕಾರದಿಂದ ಭಕ್ತಿ ಶೂನ್ಯವಾಗಿರುತ್ತದೆ ಈ ಸಮಯದಲ್ಲಿ ಗ್ರಹಗಳಿಗೆ ಸರ್ವಾಧಿಕಾರ ಕೊಟ್ಟು, ಗ್ರಹಮಂಡಲಕ್ಕೂ,

ಎಡಬಲದಿ ಬಿಡದಿರಿಸಿ ಅವುಗಳ| ಅಡಗುವಂದದಿರತ್ನಗಂಬಳಿ | ಮಡಗುವಂ
ಇದು ಸೂಕ್ತವೆಂದರು ಮಂತ್ರಿಗಳು ತಾವು ||೫|| ಅವರವರು ಕುಳಿತಿರುವ
ಭಾವದಿ| ಅವರವರ ತಿಳಿದಿನ್ನು ತೆರಳಲಿ | ಸಾವುನೋವಹೇಳಲು ಬಾರದೆಂದರು
ಸರ್ವ ಮಂತ್ರಿಗಳು ||೬||

**ವಚನ||** ಈ ರೀತಿಯಾಗಿ ಮಂತ್ರಿ ಪುಂಡರೀಕನು ಮಾಂಧಾತ ಚಕ್ರವರ್ತಿಗೆ ಸಾಸನದಿನ ಒಂದು ಬಂಗಾರದ ಮಂಚ, ಒಂದು ಕಬ್ಬಿಣದ ಮಂಚ, ಎರಡನ್ನೂ ತಯಾರಿಸಿ ರಾಜಾಸ್ಥಾನದಲ್ಲಿ ಎಡಬಲದಲ್ಲಿಟ್ಟು, ಅವುಗಳ ಮೇಲೆ ಒಂದೇ ತೆರನಾದ ರತ್ನಗಂಬಳಿಯನ್ನು ಹೊದಿಸಬೇಕು. ಸೂಜಿಗಲ್ಲು ಸೂಜಿ ಎಳೆಯುವಂತೆ, ಆಯಾಯ ಕಾರಕಸಂಬಂಧವಾಗಿ ಶನಿ-ಲಕ್ಷ್ಮಿಯರು ಕುಳಿತುಕೊಳ್ಳುವರು ಆಗಲವರನ್ನು ನೀವು ಕುಳಿತಿರುವ ಜಾಗದಿಂದಲೆ ನಿಮ್ಮ ನಿಮ್ಮ ಹೆಚ್ಚು ಕಡಿಮೆ ಎಂಬುವನ್ನು ತಿಳಿದುಕೊಳ್ಳಿ ಎಂದರೆ ಉಭಯರ ಕೋಪಕ್ಕೆ ರಾಜನು ಪಾತ್ರನಾಗುವದಿಲ್ಲ. ಈ ಉಪಾಯವು ಸರ್ವ ಸಮ್ಮತವೆಂದು ಹೇಳಲು, ಸರ್ವರು ಒಪ್ಪಿ ಅದರಂತೆ ಭಂಗಾರ ಮತ್ತು ಕಬ್ಬಿಣದ ಮಂಚಗಳನ್ನು ತಯಾರಿಸುತಿರ್ದರವೆಂತೆನೆ.

### ಭಾಮಿನೀ ಷಟ್ಪದ

ಯಾರುರೋಹಿಣಿಶಕಟಶನಿಯ | ಸಾರಪಾರಾಯಣವಮಾಡಲು |
ಘೋರಕಂಟಕಹರಿದು ಅವರಿಗೆ ಸುಖವು ಲಭಿಸುವದೂ ||
ಮೆರೆವದ್ಯಾಮಾನಹಳ್ಳಿ ಪ್ರವರ | ಉರಗಧರತಾ ಬ್ರಹ್ಮಲಿಂಗನ |
ಸ್ಮರಿಸಿಲಿಖಿಸಿದ ರೇವಣಾಕವಿ ಶನಿಯಮಹಿಮೆಯನೂ ||೧||

ಇತಿ ಹರಿಹರವರ ಪರಾಯಣಪಯಃ ಪಾರಾವಾರಾರಾಕಾ ಸುಧಾಕರಾಯ
ಮಾನ ದ್ಯಾಮಾನಹಳ್ಳಿ ಬ್ರಹ್ಮತೀರ್ಥಾಶ್ರಮನಿವಾಸಿಗಳಾದ ಜೋತಿಷ
ರಮಲ ದೈವಜ್ಞ ಕವಿ ಪಂಡಿತ ಶ್ರೀ ರೇವಣ್ಣಯೋಗೀ ಕೃತ
ರೋಹಿಣಿ-ಶಕಟ ಶನಿಮಹಾಪುರಾಣದಲ್ಲಿ ಪ್ರಥಮ ಸಂಧಿ
ಪರಿ ಸಮಾಪ್ತಾಯಾಂ. ಶ್ರೀ ಶ್ರೀ ಶ್ರೀ

**ಅಂತು ಸಂಧಿ ೧ಕ್ಕಂ ಪದನೂ ೭೫ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ**

# ಎರಡನೇ ಸಂಧಿ ಪ್ರಾರಂಭಃ

## [ಶನಿ ರೋಹಿಣಿ-ಶಕಟವನ್ನು ಪ್ರವೇಶಮಾಡುವದು]

★★

ಶೋಭಿಕಾಪದ್ಯ॥ ಭಾನುತನಯನೆ ಪಾಲಿಸೆನ್ನನು ।
ನಿನು ಅರಿಯದೆ ಲಿಖಿಸಿಪೇಳುವೆ ।
ಮನುಮುನೀಂದ್ರರ ಬಾಧೆಗೊಳಿಸಿದ ತಂದೆಶನಿದೇವಾ
ಕನಸುಮನಸಿಲಿ ಧ್ಯಾನಗೈಯುತ ।
ವಿನಯದಿಂ ನಾ ಬೇಡಿಕೊಂಬುವೆ ।
ಘನಮತಿಯು ನೀಕೊಟ್ಟು ರಕ್ಷಿಸು ದೇವಶನಿರಾಜಾ ॥

ಕಾಮ್ಯಕವನದಲ್ಲಿ ಶನಿಪೀಡಿತನಾದ ಧರ್ಮರಾಜನು, ರಾಜ್ಯಭ್ರಷ್ಟತೆಯೂ ಪ್ರಜಾಕ್ಷೋಭೆಯೂ, ಮಹಾ ಕಾಡಾಟವೂ, ಹೇಗಾಗುವದೆಂದು ಋಷಿವರರಾದ ಧೌಮ್ಯಋಷಿಗಳನ್ನು ಕೇಳಲು, ಅದಕ್ಕಾ ಮುನೀಶ್ವರನಿಂತೆಂದನು ಧರ್ಮಜಾ! ಆಕಾಶದ ತಾರಾಮಂಡಲದಲ್ಲಿರುವ ರೋಹಿಣಿ ಶಕಟವನ್ನು ಶನಿ ಪ್ರವೇಶಮಾಡೋಣವೇ, ರಾಜಾಧಿರಾಜ ಸಾರ್ವಭೌಮನನ್ನು, ರಾಜ್ಯಭ್ರಷ್ಟತೆ ಹಾಗೂ ಪ್ರಜಾಕ್ಷೋಭೆಯನ್ನುಂಟುಮಾಡುವನು. ಅವನು ಆವಾಗ ಯಾವ ಯಾವ ದೇಶವಮೇಲೆ ದೃಷ್ಟಿಯನ್ನು ಹಾಕುವನೋ ಆಯಾಯ ದೇಶಗಳಲ್ಲಿ ಹಾಹಾಕಾರವುಂಟಾಗುವದು. ಮಾನವನಿಗೆ ೧೨-೧-೨ನೇ ಶನಿಯು ಜನ್ಮ ರಾಶಿಗೆ ಬರೋಣವೇ ಏಳುವರೆವರ್ಷದ [ಸಾಡೇಸಾತ] ಶನಿಯಾಗಿ ಅನಂತ ರೂಪದಿಂದ ಕಾಡುವನು. ಇದರಂತೆ ೪-೫-೭-೮-೧೦ ನೇ ಶನಿ ಸಹಾ ಅನಂತ ದುಃಖಗಳನ್ನುಂಟುಮಾಡುವನು (ಯುಧಿಷ್ಠಿರ ಕೇಳು, ಶನಿದೇವರು ಗಗನದಲ್ಲಿರುವ ತಾರಾಮಂಡಲದ ಒಂದೊಂದು ತಾರೆಯನ್ನು ಒಂದುವರ್ಷ ಒಂದು ತಿಂಗಳು, ಹತ್ತು ದಿನದಲ್ಲಿ ಪೂರೈಸುತ್ತಾ ಸರ್ವ ಸಾಮಾನ್ಯವಾಗಿ ೩೦—೬೦....೯೦—೧೦೦ ವರ್ಷಗಳ ಸುಮಾರಿಗೆ ಸಂಪೂರ್ಣವಾಗಿ ಶನಿ ಗುರು ಮೀನರಾಶಿಯಲ್ಲಿ ಸೇರುತ್ತಲೇ ಶನಿಯು ರೋಹಿಣಿಶಕಟ ಪ್ರವೇಶಮಾಡಲು ಸಿದ್ಧನಾದನೆಂದು ತಿಳಿಯಬೇಕು. ಮೀನ, ಮೇಷ, ವೃಷಭ, ಮಿಥುನ, ಕರ್ಕ

ಈ ಐದು ರಾಶಿಗಳ ಸಂಚಾರಕ್ರಮ ಪೂರೈಸುವ ವೇಳೆಗೆ ಹನ್ನೆರಡೂವರೆವರ್ಷ ರಾಜಪ್ರಜೆಗಳು ಅಸಂತಘೋರವಾದ ಕಷ್ಟವನ್ನನುಭವಿಸುವರು ಸೊಕ್ಕಿನಿಂದ ಮೀರಿ ನಡೆಯುವ ರಾಜರನ್ನು ಶನಿ ರೋಹಿಣಿ-ಶಕಟವನ್ನು ಪ್ರವೇಶಮಾಡದ ಹೊರತು ಅವರನ್ನು ಪೀಡಿಸಲು ಸಾಧ್ಯವಾಗಲಾರದು. ಏಕೆಂದರೆ ಅಂತರಿಕ್ಷದ ಬಹುದೂರದಲ್ಲಿ ಶನಿಗ್ರಹವಿದ್ದು ಮಂದಗತಿಯಿಂದ ಸಂಚಾರಮಾಡುವ ಪ್ರಯುಕ್ತ ಭೂಮಂಡಲದ ಮೇಲೆ ಆತನ ಪ್ರಕಾಶವು ಕಡಿಮೆ ಪ್ರಮಾಣದಲ್ಲಿ ಬೀಳುವುದು. ರೋಹಿಣೀತಾರಾಮಂಡಲ ಮಧ್ಯದಲ್ಲಿ ಶನಿಪ್ರಕಾಶ ಸಂಪೂರ್ಣವಾಗಿ ಭೂಮಂಡಲದ ಮೇಲೆ ಬೀಳುವುದರಿಂದ ಎಂಥ ದುರ್ಘಟಕರನ್ನಾದರೂ ಕೊಂದುಬಿಡುವನು ಹೇಳುವುದೇನು. ದೇವಾನುದೇವತೆಗಳನ್ನು ಅಡವಿಪಾಲು ಮಾಡಿ ಬಿಡುವನು. ಧರ್ಮಜ ! ಶನಿ ರೋಹಿಣಿಶಕಟ ಪ್ರವೇಶ ಮಾಡುತ್ತಲೆ ಮಹಾಂದಾತ ಚಕ್ರವರ್ತಿಯನ್ನು ಪೀಡಿಸಲು ಪ್ರಾರಂಭಿಸಿದನು. ಮರುದಿನ ಸೂರ್ಯೋದಯವಾಗುವುದರೊಳಗಾಗಿ ಮಾಂದಾತ ರಾಜಸ್ಥಾನದಲ್ಲಿ ಭಂಗಾರದ ಮತ್ತು ಕಬ್ಬಿಣದ ಮಂಚಗಳನ್ನಿಟ್ಟು, ಅದರ ಮೇಲೆ ರತ್ನಗಂಬಳಿಯನ್ನು ಹೊದಿಸಿ ಆಸ್ಥಾನವನ್ನು ಅನಂತ ಅಲಂಕಾರಾದಿಗಳಿಂದ ಶೃಂಗರಿಸಲ್ಪಟ್ಟು ರಾಜದರ್ಬಾರವನ್ನು ಮಂತ್ರಿಮಂಡಳಿಯಿಂದ ನಡೆಸುತಿರ್ದನೆಂತೆನೆ

## ರಾಗ—ತ್ರಿಪುಡಿ

ದೇವಲೋಕದ ಶನಿಯು-ಲಕ್ಷ್ಮಿಯು । ಭುವನಲೋಕಕೆ ಬಂದರು । ಹವಣತಿಳಿಯದೆ ರಾಜಸ್ಥಾನದಿ ಕುಳಿತುಕೇಳಿದರೂ ॥೧॥ ಸಿರಿಯು ಶನಿಯು ಮೇಲ್ಪ್ರ ಹೇಳಲು। ದೊರೆಗೆ ಬಿನ್ನಹ ಮಾಡಿಕೊಂಡರು । ಭರದಿಪೇಳಿದರಾಜ ಸಾಗಳಿ ಕುಳಿತು ವಿವರದಲೀ ॥೨॥ ತೆಗೆದುನೋಡಿರಿ ನಿಮ್ಮ ಸ್ಥಾನದ । ಹಗೆಯಗಳಿಸಲು ನನಗೆ ಸಾಲದು । ನಗೆಮುಖದಿನೀವಿನ್ನು ನಿಮ್ಮಯ ನ್ಯಾಯ ತಿಳಿಕೊಳ್ಳೀ ॥೩॥ ಎಂದು ಪೇಳಿದರಾಜನಮಾತಿಗೆ । ಮುಂದ ಲಕ್ಷ್ಮಿಯು ತೆಗೆದು ನೋಡಲು । ಕುಂದಣಕೆ ಸಿರಿ ಲೋಹಮಂಚಕೆಶನಿಯು ತಾವುಗಳು॥ ಕಾರಕತ್ವದಿ ಕುಳಿತ ವಿವರವ।ಸೂರಶನಿ ನೋಡಿದನು ತನ್ನಯ। ಇರುವಜಾಗದ ಲೋಹಮಂಚವ ಪಿಡಿದು ಇಂತೆಂದಾ ॥೪॥ ಕೇಳು ರಾಜನೆ ಹಾಳುಮಾಡುವೆ ಪೊಳ್ಳುಲಕ್ಷ್ಮಿಯು ನಿನ್ನಪ್ರೀತಿಯಲಿ । ಕಳ್ಳತನದಲಿ ಸುಳ್ಳು ಬೊಗಳಿದೆ ಲಕ್ಷ್ಮೀ

ಬೆಂಬಲದೀ ||೬|| ಪೋರ ಶನಿ ಕೇಳೆನ್ನ ವಚನವ | ಘೋರವಾತುಗಳಾಡ ಬಾರದು| ಸರಿಯೆ ನ್ನನಗೆ ನೀನು ಎಂದಳು ಲಕ್ಷ್ಮಿ ತಾಸಾಗ ||೭|| ಉಭಯು ಕೋಪವ ಕೇಳಿರಾಜನು | ಅಭಯುಬೇಡಿವ ಲಕ್ಷ್ಮಿ ಶನಿಯುರ | ತಬ್ಬಲೀಯಾ ದೆನ್ನ ರಕ್ಷಣೆ ನಿಮ್ಮ ಕೂಡಿಹುದು ||೮|| ನೋಡಿಕೊಳ್ಳುವೆ ಲಕ್ಷ್ಮಿ ಪೌರುಷ| ನೋಡಿಕೊಳ್ಳುವೆ ಶನಿಯುಪೌರುಷ| ಆಡುತಾಗಲೆ ಹೊರಟುಹೋದರು ತಮ್ಮ ತಾಸ್ಥಳಕ್ಕೆ ||೯||

**ವಚನ**|| ಇಂತೆಂದು ಶನಿ-ಲಕ್ಷ್ಮಿಯರು ಒಬ್ಬರಿಗೊಬ್ಬರು ವಾಗ್ವಾನವನ್ನು ಮಾತುತ್ತಾ ಹೊರಟು ಹೋಗಲು ಸಾಂವಾಜ್ಯ ಚಕ್ರವರ್ತಿ ಮಂತ್ರಿ ಮಾಂಡಲೀಕರನ್ನು ಕುರಿತು ಏನನ್ನು ತಿರ್ದನವೆಂತೆನೆ

### ರಾಗ–ಜಂಪೆ

ಶನಿಕಾಟಕಗುಲಿತು|ಶನಿಸನುಮಾಡುವನೋ| ಅನುವು ಕಾಣದು ಸೆಸಗೆ ಯೆಂದತಾರಾಜಾ ||೧|| ಮಂತ್ರಿಸಂಪ್ರವಬಲ್ಲ | ರಾಜಪುರೋಹಿತರೇ | ಚಿಂತೆ ಹರಿಯುವಬಗೆಯು ಪೇಳಿರಿವಿನ್ನೂ ||೨|| ಒಲ್ಲ ಪುರೋಹಿತರು ಉಲ್ಲಸದಿತಾ ವಿನ್ನು | ಫಾಲಲೋಚನಸಶನಿಯ | ಲೀಲೆಪೇಳುವರೂ ||೩|| ಅರಿತು ಹರಸನು ಭಜಿಸಿ| ಅರಿತುಆದಿಯುಹಿಡಿಸು| ಅರಿತರಿತುಮನವನ್ನು ಶಾಂತಗೊಳಿಸುತಲೀ|| ಕಾಮಕ್ರೋಧನತಡೆದು | ಪ್ರೇಮವನು ಸಾಧಿಸಲು | ಆ ಮಹಾ ಶನಿರಾಯು| ತಾನೆಪ್ರೀತಿಸುವ ||೫|| ಕಳವುವಂಚನೆಮೋಸ | ಇಳೆಯೊಳೆಸಗದಅವನೇ | ಸುಳಿವು ಕಾಣದು ಶನಿಯು ಇಳೆಯಾಣ್ಮ ಕೇಳು ||೬||

**ವಚನ||** ಇಂತೆಂದು ರಾಜಪುರೋಹಿತರು ಹೇಳಿದ ಮಾತಂ ಕೇಳಿ ರಾಜನು ಸಂತೋಷವಂ ಪಟ್ಟು ಆ ದಿನದ ರಾಜಸಭೆಯಂ ಮುಗಿಸಿ, ರಾತ್ರಿ ರಾಣಿ ವಾಸವಂ ಸೇರಿದನದೆಂತೆನೆ.

### ರಾಗ–ಏಕತಾಳ

ಬಿಂದುಮತಿಪತ್ನಿಯೊಡನೆ ಸಂದೇಹಪೇಳುತ್ತಾ | ಮುಂದಾಗಮುನ ಕೋಪಬಂದೀತು ನಮಗೆ ||೧|| ಸಿರಿಯು ಪೊರೆಯುವನೆಂದು ಭರವಸೆಇತ್ತಳು ಪರೀಕ್ಷೆನಡೆಸಲು ಅವರು ಬರುವರು ಇನ್ನೂ || ೨ || ಇಲ್ಲಿರಬಾರದು ಎಲ್ಲಿಗಾದರು ಪೋಗಿ| ಪುಲ್ಲನಾಭನಧ್ಯಾನಗೈಯ್ಯುತ್ತ ನಾವು ||೩|| ಹೀಗೆಂದ ಮಾತಿಗೆ

ಬಿಂದುಮತಿಯುತ್ತಾನು | ಚಂದಾಯಿತೆಂದಳು | ಇಂದುಮುಖಿ ಆಗಾ ||೪|| ವದಗಿಬಂದಾಪತ್ತು | ಎದುರಿಸಿನಾವಿನ್ನು | ಸಿದ್ಧಿ ಧಿಪ್ರೇಮವ | ಗಳಿಸುವುದುಚಿತ ಸುಖದಿಬಾಳೋಣವೆಂದು | ಅಕ್ಕರದಬಿಂದುಮತಿ | ಗಕ್ಕನೆಪೇಳಿದಳು | ಪತಿಗೆ ತಾನಿನ್ನೂ ||೬|| ತುಂಬಿದ ಬಸುರೊಳು | ಸಂಭ್ರಮದಿ ಪೇಳಿದಳು | ಶುಂಭಿಸೀಪತಿ | ಮಾಂದಾತೃ ರಾಜನಿಗೇ ||೭||

ವಚನ|| ಈ ರೀತಿಯಾಗಿ ರಾತ್ರಿ ರಾಜದಂಪತಿಗಳು ಪರ್ಯ್ಯಾಲೋಚಿಸಿ ಶನಿ ಕಾಟ ಪರಿಹಾರವಾಗುವವರೆಗೂ ಕೆಲವು ಕಾಲ ಅರಣ್ಯವಾಸದಲ್ಲಿರುವುದು ಮೇಲೆಂದು ತಿಳಿದು. [ಖರ್ಚಿಗೆ ಬೇಕಾಗುವ ಹೊನ್ನು ಪಂಹಗಳ ಗಂಟು ಕಟ್ಟಿಕೊಂಡು] ಯಾರಿಗೂ ಹೇಳದೆ-ಕೇಳದೆ ಬೆಳಗಾಗುವುದರೊಳಗಾಗಿ ಬಹುದೂರ ನಡೆದು ಹೋಗುತ್ತಿರುವಷ್ಟರಲ್ಲಿ ಪೂರ್ವಾದ್ರಿಗಿರಿಯಲ್ಲಿ ಸೂರ್ಯನುದಯಿಸುತ್ತಿರ್ದನದೆಂತೆನೆ.

## ರಾಗ–ಯಾಲಪದ

ಮೂಡಲೊಳಗೇ ಮೋಡಾದಲ್ಲಿ | ಮೂಡುತಿಹನೂ ರವಿಯುತಾನು| ಅಡವಿಯೊಳಗೇಪ್ರೊಡವೀಪತಿಯನ್ನು | ನೋಡಾಲುತಾನು | ಕಡಲನಡುವೇ ಉದಿಸಿಬಂದಾನು |೧| ಮುಗನಕಾಟಾಮುಸುಗೀತಾನು | ವಿಗಡನಾಗಿಕೆಟ್ಟಾ ರವಿಯು | ಆಗಸಾದಿ ಮೂಡಿನೋಡ್ಯಾನು | ಓಂ ರವಿರಾಯನು | ಜಗದ ಪಾಪಾಪುಣ್ಯಾನೋಡುತಾ |೨| ಪತ್ನಿಪತಿಯಾರೊಂದುಗೂಡಿ | ಯುತ್ನ ಕಾಣದೆ ತಿರುಗೀತಿರುಗಿ | ಸುತ್ತಮುತ್ತ ಅಲೆದಾಡುತಲಿನ್ನು | ಓಂ ರ: ರಾಯನೆ | ತುತ್ತುಕೊಟ್ಟು ಸಲುಹಬೇಕಯ್ಯಾ |೩|

ವಚನ || ಇಂತೆಂದು ಮಾಂದಾತೃಮಹಾರಾಜನು ಬಿಂದುಮತಿಪತ್ನಿ ಗರ್ಭವತಿಯೊಡನೆ ದಟ್ಟಡವಿಯನ್ನು ಸುತ್ತುತಿರಲೂ, ಮಗನ ಮಹಿಮೆಯನ್ನು ನೋಡಬೇಕೆಂದು ಪೂರ್ವಾದ್ರಿಯಲ್ಲಿ ಭಾನುವು ಕೆಂಬಣ್ಣದಿಂದುದಯಿಸಿ ಮೇಲೇರಲು ಸಮೀಪದಲ್ಲಿಯೇ ಶನಿ ಮಾಯದಿಂದ ಅಪಾರವಾದ ನದಿಯು ಮೇರೆದಪ್ಪಿ ಹರಿಯುತ್ತಿರಲು ಮಾಯಾಕಾರ ಶನಿಯು ನಾವಿಕನಾಗಿ ಸಣ್ಣದೊಂದು ದೋಣಿಯನ್ನು ನಡೆಯಿಸುತ್ತಾ, ಅವರಿರುವ ದಡದಹತ್ತಿರ ಬಂದು ನಿಂತಿರ್ದನದೆಂತೆನೆ.

## ರಾಗ–ದ್ವಿಪದಿ

ಏನಯ್ಯನಾವಿಕನೆ ನಮ್ಮನ್ನು ನೀನೀಗ ಅನುವರಿತು ಆಡಡಕೆ ತೆರಳಿಸಾ ಬೇಕು |೧| ಹೀಗೆಂದು ದೊರೆಕೇಳೆ ಆಗಲಾಶನಿರಾಯ | ಸಾಗಿಸಲು ಈರ್ವರಿಗೆ ಜಾಗವುಂಟೆಂದು |೨| ಗಂಟುಮೂಟೆಯಬಿಟ್ಟು | ಈರ್ವರೂ ಬರಬಹುದೂ | ಗಂಟುತಂದರೆ ನೀವು ಒಬ್ಬರೂ ಬನ್ನಿ |೩| ಆಚೆಗೊಯ್ದೀದಾಮೇಲೆ ಈಚೆಗೆ ಬರಲಾರೆ | ಸಾಚ ಇದ್ದರೆ ನೀವು ಬನ್ನಿರಿಬೇಗಾ |೪| ಹೀಗೆಂದು ಶನಿ ಪೇಳೆ | ತೂಗಿನೋಡಿದರಾಜಾ | ಭೋಗವಿದ್ದರೆ ಮುಂದೆ | ಗಂಟುಗಳಿಸುವೆವು ||೫|| ಗಂಟುಮೂಟೆಯ ಬಿಟ್ಟು | ನಾವೆಬರುವೆವು ಕೇಳು | ತಂಟೆ ಬ್ಯಾಡವುಯೆಂದು | ಹೊರಟರೂ ಆಗಾ ||೬|| ತುಂಟಶನಿತಾನಿನ್ನು | ಗಂಟು ಕಳೆವೆನುಯೆಂದು | ಒಂಟೀಲಿನಗುನಗುತ | ಹಡಗನಡೆಸಿದನು ||೭|| ದಡವು ಬಂದಿತು ಆಗ | ದಡುಕುತನದಲಿ ಶನಿಯು | ಹಡಗಳಿಸಿ ಹಿಂದಕ್ಕೆ ತಿರುಗಿ ನೋಡಿದನು ||೮|| ಲಕ್ಷ್ಮಿದೇವಿಯು ನಿಂತು | ಪ್ರತ್ಯಕ್ಷ ನುಡಿದಳು ಶನಿಗೆ | ಶಿಕ್ಷೆನಾಡುವೆನೆಂದು | ಗಂಟೆತ್ತಿಪೋಗೇ ||೯||

**ವಚನ||** ಇಂತೆಂದು ಶನಿದೇವನು ನಾವಿಕನ ವೇಷದಿಂದ ಗಂಟನ್ನು ಬಿಟ್ಟು ಹಡಗಿನಲ್ಲಿ ದಂಪತಿಗಳೀರ್ವರನ್ನು ಆಚೆಗೆ ಸಾಗಿಸಿ. ಹಿಂದಕ್ಕೆ ತಿರುಗಿ ನೋಡಲು, ಹಣದಲ್ಲಿ ಅಡಗಿದ್ದ ಲಕ್ಷ್ಮಿಯು ಪ್ರತ್ಯಕ್ಷವಾಗಿ, ಎಲೋ ಖೂಳ ಶನಿಯೆ! ನಿನ್ನ ಸಾಹಸ ಎಷ್ಟಿದ್ದರೂ ನೋಡಿಕೊಳ್ಳುತ್ತೇನೆಂದು ಹೇಳಿ ಮಾಯವಾಗಲು, ಶನಿದೇವರು ದೋಣಿಯನ್ನು ನಡೆಸಿಕೊಂಡು ಮುಂದೆ ಹೋಗಲು, ಇತ್ತ ರಾಜದಂಪತಿಗಳು ಅನ್ನ-ನೀರಿಲ್ಲದೆ ಕೊರಗುತ್ತಾ ಮುಂದೆ ಕಾಣುವ ಬೇಡರ ಪಾಳೆಯಕ್ಕೆ ತೆರಳುತಿರ್ದರದೆಂತೆನೆ

## ರಾಗ–ಯಾಲಪದ

ನಡೆಯಲಾರೇ ಅಡವೀಯಲ್ಲಿ | ಪ್ರೌಢವಿರತಿಯೆ ಕೇಳು ನಾನು | ಅಡಿ ನಡೆದುಯೆರಡಾಗಿರುವವು || ಓ ಪತಿದೇವನೆ | ಪಡಲಕೂಸು ಬಡಿದಾಡು ವಾವು ||೧|| ಅನ್ನ ನೀರು ಮೊದಲೇ ಇಲ್ಲಾ | ಮುನ್ನ ದಾರಿ ಕಾಣದಯ್ಯೋ| ಇನ್ನು ನಮಗೆ ಗತಿಯಾರೆಂದಾಳು || ಓ ಪತಿದೇವನೆ ಶನಿಮಹಿಮೇ ತಿಳಿಯಾ

ದೋಯಿತು ॥೨॥ ಸತಿಯಳಾಡಿದಮಾತಾಕೇಳಿ । ಪತಿಯುಳಿಗಾ ಉಸುರಿದಾನು । ಪಥಿಕರಾದ ನಮಗೇ ಮುಂದಿನ್ನು ॥ ಓಂ ದೇವರೆಗತಿ । ನುತಿಯು ಮಾಡಿ ಬಮುಕಾಬೇಕಿನ್ನೂ ॥೩॥

ವಚನ ಇಂತೆಂದು ದಂಪತಿಗಳಿಬ್ಬರು ಅನೇಕ ವಿಧವಾಗಿ ಪಶ್ಚಾತ್ತಾಪಪಡುತ್ತಾ ಮುಂದಿರುವ ಬೇಡರ ಹಳ್ಳಿಯನ್ನು ಸೇರಿ, ಅವರಲ್ಲಿ ತಮ್ಮ ಬೇಡಿಕೆಯನ್ನು ಹೇಳುತಿರ್ದರದೆಂತೆನೆ-

**ರಾಗ— ವಿ ಕತಾಳ**

ಕೇಳಿರೈಬಂಧುಗಳೆ ಕೇಳಿರಿನಮ್ಮಾಯು । ಹಾಳುಬಾಳುವೆ ಪೇಳ್ವೆ ಕೇಳಿರಿ ನೀವು ॥೧॥ ಹಡವತಂದೆಗಳಂತೆ ಬಿಡದೆಮ್ಮಪಾಲಿಸುವ । ಸಡಗರನಿಮ್ಮದು ತಂದೆ-ತಾಯಿಗಳೇ ॥೨॥ ಹಿಂದಿನಸಿರಿಯನ್ನು ತಂದುಹೇಳುವುದೇನು । ಬಂದಿರುವಫಲವನ್ನು ಅನುಭವಿಸಬೇಕು ॥೩॥ ಕಷ್ಟಕಾರ್ಪಣ್ಯವ ನೋಡಿದೊಬ್ಬವ ತಂದೆ। ಶ್ರೇಷ್ಟವಿದ್ಯೆಯ ಕಲಿಸಿದವನೊಬ್ಬ ತಂದೆ ॥೪॥ ಅನ್ನನೀರಿಕ್ಕಿದತಾಯಿ ಯೊಬ್ಬಳುಮನಕೆ । ಕನ್ಯಾದಾನಕೊಟ್ಟ ಅವಳೊಬ್ಬ ತಾಯಿ ॥೫॥ ಆಪತ್ತ ನೀಗಿಪ ಅವನೊಬ್ಬ ಅಣ್ಣನು । ತಾಪಕಳೆವಾತ ತಮ್ಮ ಜಗದಿಕೇಳಿನ್ನು ॥೬॥ ಕಂಕೆಟ್ಟುಬಂದಿರುವ ನಮ್ಮನ್ನು ನೀವಿನ್ನು । ಕಂಗೋಳಪತೆರವಂತೆ ಕಾಪಾಡಬೇಕು ॥೭॥ ಬಸುರೀನಬಾಲೆಯು ಹಸುವಿನಂದನಿನೋಡು। ಕೂಸುಬಾಣಂತಿಯುರ ಕಾಪಾಡಿರಯ್ಯ ॥೮॥

**ವಚನ॥** ಈ ಪ್ರಕಾರವಾಗಿ ಆ ಅಡವಿ ಬೇಡರ ಪಡೆಯನ್ನು ಕುರಿತು ರಾಜ-ದಂಪತಿಗಳು ಪರಿಪರಿಯಾಗಿ ಬೇಡಿಕೊಳ್ಳಲು, ಅದಕ್ಕವರು ಏನನ್ನುತಿರ್ಪರದೆಂತೆನೆ.

**ರಾಗ—ಝಂಪೆ**

ದಾರಿಹೋಕರೆನೀವು । ದಾರಿತೋರುವನಾವು । ಮೀರಿದಪರಾಧವನು ಮಾಡಿದರೆ ನಮಗೇ ॥೧॥ ಕೇಡುಬರುವದು ಸಹಜ । ರೂಢಿಯೊಳು ಇದು ಸತ್ಯ । ಮೂಢಮಾನವರೆಲ್ಲ । ತಿಳಿಯುಬೇಕಿನ್ನೂ ॥೨॥ ಹೆದರಿಬಂದವನನ್ನು ಬೆದರಿಬಂದವನನ್ನು । ಬಂಧಾನಕ್ಕೊಳಗಾಗಿ ಬಂದವನನ್ನೂ ॥೩॥ ಬಾಲಬಸುರಿಯನ್ನೂ । ಶೀಲಸುಗುಣೆಯರನ್ನೂ । ಕಾಲಕರ್ಮಕೆಬಿಸ್ತು ಸಾಯು

ನಾನಿನ್ನು ॥ ೪ ॥ ಪಾಲಿಸಲು ಮಾನ್ಯನನು । ಲೋಲನಾಗಿರಬೇಕು । ಆಲಿಸಿ ಕೇಳಿನ್ನು । ದಾರಿಹೋಕರದೇ ॥೫॥ ನಮ್ಮ ಹಳ್ಳಿಯಲಿದ್ದು । ನಿಮ್ಮಗೇ ಸುಖಬಂದು । ಉಮ್ಮಯದಿ ನೀವಿನ್ನು । ಮುಂದೆಸಾಗುವದು ॥ ೬ ॥

**ವಚನ॥** ಈ ಪ್ರಕಾರವಾಗಿ ಆ ಕಾಡು-ಬೇಡರಾಡಿದ ಮಾತಿಗೆ ರಾಜದಂಪತಿಗಳು ಸಂತೋಷಪಟ್ಟು, ಹಾ ದೈವವೇ! ಕಾಡುನಿವಾಸಿಗಳಾದ ಇವರಲ್ಲಿಯೂ ಕೂಡಾ ಎಷ್ಟು ಅಂತಃಕರುಣವಿದೆಯಲ್ಲ ಎಂದು ವಿಸ್ಮಯಗೊಂಡು ಅವರು ಕೊಟ್ಟ ಒಂದು ಹುಲ್ಲುಚಾವಣಿಯಲ್ಲಿ ಸುಖವಾಗಿ ಇರುತ್ತಿರಲು, ರಾಣಿಗೆ ನವಮಾಸ ತುಂಬಿ ಜನನವಾಗುತಿರ್ದಳದೆಂತೆನೆ.

### ರಾಗ— ಏಕತಾಳ

ಕಷ್ಟದೊಳು ಮಹಾಕಷ್ಟ । ಹೆಣ್ಣಿಗೆ ಅತಿಕಷ್ಟ । ಸೃಷ್ಟಿಯೊಳ್ಹೆಂಗೆಯು ಬಲುಕಷ್ಟಾ ಜಗದೀ ॥ ೧ ॥ ಸೂರದೊಳು ಮರನುಟ್ಟೆ । ಪರಮಪುರುಷಾರ್ಥವ । ತೋರುವ ಹೆಣ್ಣಿಗೆ । ಸರಿಯೆ ಜನರಿನ್ನು ॥ ೨ ॥ ನಡೆನುಡಿಮುಡಿಯಿಂದ । ತುಡುಗುತನವ ಕಳೆದು । ಮೃಡಭಕ್ತಿ ಮಡದಿಯ ಕಾಪಾಡಿತಾಯಿನ್ನು । ಬನ್ನಿರಿ ತಾಯಿಗಳಿ । ಬನ್ನಿರಿ ಬಂಧುಗಳಿ । ಭಿನ್ನವಿಲ್ಲದೆ ನೀವು ಚನ್ನಾಗಿ ನೋಡಿ । ಮುರವೈರಿ ಮಾಧವ । ಮಾರಮರ್ದನದೇವ । ಸುರಗುರು ಮುನಿವೃಂದವೆಲ್ಲ ಕಾಪಾಡಿ ॥೩॥ ನನ್ನ ಬಸುರಲಿಬರುವ । ಚನ್ನಿಗಬಾಲರ ಮುನ್ನ ಕಾಪಾಡುವದು । ನಿಮ್ಮ ಕರ್ತವ್ಯ ॥ ೪ ॥ ಹೀಗೆಂದು ನುಡಿಯಲ್ಕೆ । ಸಾಗಿಬಂದಾವು ಕೂಸು । ಬೇಗಬೇಡಾರ ಜನರು ಕೂಡಿ ತಾವುಗಳು ॥ ೫ ॥ ರಾಣಿಕೂಸುಗಳಿಗೆ ಮಾಣದೆ ನೀರೆರೆದು । ಕ್ಷೋಣಿಯಾಳುವ ದೊರೆಗೆ । ಹೇಳಿದರಿನ್ನು । ಗಂಡೆರಡು ಮಕ್ಕಳು । ಕಂಡವು ದೊರೆಗಿನ್ನು । ಗಂಡುಗಲಿ ಮಾಂಧಾತ್ರ ಹರುಷ ತಾಳಿದನು॥ ೬ ॥

**ವಚನ॥** ಈ ಪ್ರಕಾರವಾಗಿ ಅವಳಿ-ಜವಳಿ ಗಂಡೆರಡು ಮಕ್ಕಳನ್ನು ಮಾಂಧಾತೃಚಕ್ರವರ್ತಿ ನೋಡಿ ಸಂತೋಷಪಟ್ಟು ಅವರಿಗೆ ಪುರುಕುತ್ಸ-ಅಂಬರೀಷರೆಂದು ನಾಮಕರಣಮಾಡಿ ತೊಟ್ಟಿಲಲ್ಲಿ ಹಾಕಿ, ಬೇಡ ಕುಸುಮಾಂಗಿಯರು ಜೋಗುಳವಂ ಪಾಡುತಿರ್ದರದೆಂತೆನೆ.

## ರಾಗ—ಜೋಗುಳ ಪದ

ಜೋಯೆನ್ನಿ ಜೋಕಂದ ಜೋಯೆನ್ನಿ ಬನ್ನಿ । ಜೋಜೋ ಮಹಾ-ದಾತ್ರ ಪುತ್ರರಿಗಿನ್ನು । ಜೋ ಬಿಂದುಮತಿತಾಯಿ ಹಡೆದಮಕ್ಕಳಿಗೆ । ಜೋಯೆಂದ ತೂಗಿರಿನಲಿಸಲಿದಾಡಿ ಜೋಜೋ ॥ ೧ ॥ ಕುಸುಮಗಂಧಿಯರೆಲ್ಲ ಹಸನಾಗಿ ಬಂದು । ವಸುದೀಶಮಾಂದಾತೃಪುತ್ರರಿಗಿನ್ನು । ಯೆಸೆವಮಂಗಲಶುಭದಾರತಿ ಯೆತ್ತಿ । ಕೇಶವಗತಿಯೆಂದು ನುತಿಸುತ್ತ ಜೇಗಾ ಜೋಜೋ ॥ ೨ ॥

**ವಚನ॥** ಈ ಪ್ರಕಾರವಾಗಿ ನವಕುಸುಮಾಂಗಿಯರು ಜೋಗುಳವಂಪಾಡಿ ತಮ್ಮ ತಮ್ಮ ಮನೆಗಳಿಗೆ ಹೋಟುಹೋಗಲು ರಾಜಾ-ರಾಣಿಯರು ಮಕ್ಕಳನ್ನು ಪಾಲಿಸುತ್ತ ಐದುವರ್ಷ ಕಳೆಯಲು ಇತ್ತ ಶನಿಯು ನೋಡ ಬಂದನದೆಂತೆನೆ.

## ರಾಗ—ತ್ರಿಹುಡಿ

ಪ್ರೊಡವಿಪಾಲರನೋಡಬಂದನು । ಹಡಗುಮರಳಲ್ಲಿ ಹೊತ್ತು ನಿಂತದೆ । ದುಡ್ಡು ಕೂಲಿಯಕೊಡುವೆನೆನುತಲಿ । ಶನಿಯು ತಾಬಂದಾ ॥೧॥ ನೂತನಾ ನಾವಿಕನ ವೇಷದಿ । ಪ್ರೀತಿಯಿಂದಲಿ ಬೇಡರಳ್ಳಿಗೆ । ಕಾತುರದಿ ಕರೆಯುತ್ತ ನಿಂತನು । ಕೂಲಿಯಾಜನರಾ ॥ ೨ ॥ ಹೊತಹಡಗನು ನೂಕೆ ಮುಂದಕೆ । ಜಾತಕೂಲಿಯಕೊಂಡುಬನ್ನಿರಿ । ನಾಥ ಶನಿನುಡಿಯುತ್ತ ನೋಡಿದ । ರಾಜ ರಾಣಿಯರಾ ॥ ೩ ॥ ಮಕ್ಕಳಾಡುವದನ್ನು ನೋಡುತ । ದುಃಖಮರೆತರು ರಾಜರಾಣಿಯು । ಸೊಕ್ಕುಮುರಿಯುವೆ । ಮಕ್ಕಳಗಲಿಸಿ । ಎನುತ ಶನಿಯು ತಾನೂ ಇನಸುತನಪ್ರೇರಣೆಯೊಳಾಗ । ಕನ್ಯಮಣಿತಾ ಬಿಂದುಮತಿಗೆಯು । ಹೊನ್ನು ಕೂಲಿಯು ಕೊಡುವೆ ಕೆಲಸಕೆ । ಇನ್ನು ಪೋಗುವೆನೂ ॥೪॥ ದುಡ್ಡು ದೊಡ್ಡದು ಜನರ ನಡೆಯಲಿ । ದುಡ್ಡು ದೊಡ್ಡಪ್ಪಾಗಿ ಮೆರೆವದು । ದುಡ್ಡು ಹೆಡ್ಡನ ಸುಗುಣಿಯೆನಿಪ್ಪುದು । ಇನ್ನು ಜಗದೊಳಗೇ ॥ ೬ ॥ ಹಣದ ಮರೆಯಲಿ ಕುಣಿವಜಗವಿದು । ಹಣವೆ ಅಹಂಕಾರದಲಿ ಕುಣಿವದು । ಹಣಮರಣ ಹೆಣನೆಂದು ತಿಳಿವರು । ಜ್ಞಾನಿಯಾಜನರೂ ॥ ೭ ॥ ಹೊನ್ನು ಚನ್ನಿಗನಾಗಿ ಮೆರೆವುದು । ಹೊನ್ನು ಇಲ್ಲದ ಮನುಜಕುನ್ನಿಯು । ಹೊನ್ನು ಜ್ಞಾನಕೆ ದೂರವಿರುವದು । ಆತ್ಮ ಬಲ್ಲವಗೇ ॥ ೮ ॥

**ವಚನ||** ಈ ರೀತಿಯಾಗಿ ಬಿಂದುಮತಿಯು ಗಂಡನಿಗೆ ಹಣದ ಮಹತ್ವವನ್ನು ತಿಳಿಸಿ ತನ್ನ ಕುಟುಂಬ ಮಕ್ಕಳುಮರಿಗಳೊಂದಿಗೆ ಹೆಚ್ಚಿರುವ ಪ್ರಯುಕ್ತ ಜೀವನಾಧಾರವಾದ ಕೂಲಿಯ ಕೆಲಸಕ್ಕೆ ಹೋಗಿ ನಾಲ್ಕು ಹಣವನ್ನು ಸಂಪಾದಿಸಿ ಈ ಕುಟುಂಬವರ್ಗವನ್ನೂ ಅನ್ನನೀರಿನಿಂದ ಪೋಷಿಸುವದು ಪ್ರಥಮತಃ ತಾಯಿಯ ಕರ್ತವ್ಯವಲ್ಲವೇ ? ಆದುದರಿಂದ ನದಿಯಲ್ಲಿ ಹೂತಿರುವ ಹಡಗನ್ನು ನೂಕಲು ಕೂಲಿಯವರ ಸಂಗಡ ಹೋಗಿಬರುತ್ತೇನೆಂದು ಮಕ್ಕಳನ್ನು ಗಂಡನವಶಕ್ಕೆ ಕೊಟ್ಟು ಹೊರಟಳೆಂತೆನೆ.

## ರಾಗ-ದ್ವಿಪದಿ

ವಿಧಿಹವನ ತಿಳಿಯುವುದೇ | ನಿಧಿಬುದ್ಧಿಯುಳ್ಳವಗೇ | ಮದನಪಿತಹರ ಬ್ರಹ್ಮ | ವಶವಾದರವಗೇ || ೧ || ಬಿಂದುಮತಿಕೂಲಿಯರ ! ಚಂದದಿಂತಾ ಸೇರಿ | ಹಿಂದುನಾವೆಯನೂಕಿ | ಮುಂದೆಸಾಗಿಸಲು || ೨ || ಕಪಟನಾಟಕ ಶನಿಯು| ಜಿಪುಣತನಮಾಡುತಲೀ | ವಪ್ಪುವಾನದಿಮಧ್ಯ| ಹಡಗನಿಲ್ಲಿಸಿದಾ|| ಕೂಲಿಕೊಟ್ಟನುಜನಕೆ | ಬಾಲೆಬಿಂದೂಮತಿಯ | ಲೋಲದಿಂಪಿಡಿದೆತ್ತಿ ! ನಾವೆಯೊಳುಹಾಕೆ || ೪ || ಗೋಳಿಟ್ಟು ಜನರೆಲ್ಲ | ಹಾಳುಕೂಲಿಯಕೆಲಸ ಕೂಳಿಲ್ಲದವಗೇ | ಬಹುಬಾಧೆಯೆಂದೂ || ೫ || ಏನಯ್ಯ ನಾವಿಕನೆ| ಕನ್ಯಯಾಪಿಡಿದೆತ್ತಿ| ನಿನ್ನ ಕೈವಶಮಾಡಿ | ಕೊಂಡು ಪೋಗುವಿಯಾ ||೬|| ಅಬಲ ಕೂಲಿಯ ಜನರೂ | ಪ್ರಭಲರಾಮನೆಕೆಲಸ | ದುರ್ಬಲವು ದೀನರಿಗೆ ಇನ್ನು ಜಗದೊಳಗೇ || ೭ || ನೋಡುವವರೊಳಗಾಗಿ | ಹಡಗನಡಸಿದಶನಿಯು | ನಡುನದಿಯುಮುಂದಕ್ಕೆ | ಸಾಗಿತೂನಾವೆ || ೮ || ಶಿರಿಯುನೋಡಿದಳಾಗ| ಹರಸಿದಳು ರೋಗವನು | ಧರೆಯುಕ್ಷಕಪತ್ನಿ | ಕುಷ್ಟರೋಗವನೂ || ೯ || ರಕ್ತಕೀವುಗಳಿಂದ | ಶಕ್ತಳಾದಳುರಾಣಿ | ಸೂಕ್ತವನು ನೋಡಿದನು | ಶನಿರಾಜ ಆಗ ||೧೦ || ಅನಿಷ್ಟರೋಗಿಯುಯೆಂದು | ಕನಿಷ್ಟಕೋಣೆಯೊಳಾಕಿ| ಶನಿ ಬೀಗತಾ ಹಾಕಿ | ಮುಂದೆ ಸಾಗಿದನೂ || ೧೧ ||

**ವಚನ||** ಇಂತೆಂದು ಕೂಲಿಯಾ ಜನರು ತಮ್ಮ ಕೈಯಿಂದ ಏನು ಸಾಗದೆ ಎದೆಬಡಕೊಂಡು ಮರಳಿ ಊರಿಗೆ ಬರುತ್ತಿರುವ ದಾರಿಯಲ್ಲಿ ಏನನ್ನು ಕಿರ್ದರದೆಂತೆನೆ.

## ರಾಗ— ಯಾಲಪದ

ಪಾಪಿಯಾಗೀ ಪರಪೇಶದಿಂದ ತಾಪವನ್ನೂ ತಾಳಿ ಬಂದ| ಅಪ್ಪನೊಬ್ಬ ಕೆಟ್ಟು ಪೋದಾನು || ಓಂ ವಿಧಿಮಾಯಾವೇ || ಕೋಪದಿಂದಾದೀನಾಳ ತಿನ್ನೂವೀ || ೧ || ದೀನದರಿದ್ರರಿಗೆ ರೂಪು | ಮಾನಹಾನಿಮಾಡುವುದಂಯ್ಯೋ | ಧನಿಕನಯನ ರೂಪು ಮೇಲಿನ್ನೂ || ೨ || ಓಂ ವಿಧಿಮಾಯಾವೇ | ದೀನ ಬಾಳ್ವೆ ನೂಡಬೇಕೆಂದಾರು || ೩ || ಪತಿಯುಗತಿಯೂ ಸುತರಾಗತಿಯೂ ಪತಿತಕಾಯಾ ಬಲ್ಲಾನೇನು | ರತಿಯ ಸುಖವ ಬಯಸೀ ಕೇಡಾನೂ | ಓಂ ವಿಧಿಮಾಯಾವೇ ಸತತನರಕಾ ಸಿದ್ಧಾ ಅವಗಿನ್ನೂ || ೩ ||

**ವಚನ||** ಈ ರೀತಿಯಾಗಿ ಜನರು ಆಡಿಕೊಳ್ಳುತ್ತಾ ಊರಿಗೆ ನಡೆದ ಸಂಗತಿಯನ್ನು ರಾಜನ ಮುಂದೆ ಹೇಳಲು, ದೊರೆಯು ಇವೆಲ್ಲಾ ಶನಿಮಾಯೆ ಯೆಂದು ತಿಳಿದು ದುಃಖದಿಂದ ಏನೆನ್ನು ತಿರ್ದನದೆಂತೆನೆ

## ರಾಗ— ಏಕತಾಳ

ಪತ್ನಿ ನಾರಿತಯಾಣಿ ವಿಪತ್ತಿಗೆ ಗುರಿಯಾದೆ | ಮತ್ತೆ ಪಾತಕನಾನು ಪೃಥ್ವಿಮೇಲಿನ್ನೂ || ೧ || ಸತಿಪತಿ ಐಕ್ಯತೆಯು | ಸತತಸುಖವಾಗಿಹುದು | ಕತ್ತರಿಸಿತೆಂಪರೆ ದುಃಖತಾನಹುದೂ || ೨ || ಕಾಯುವೆರಡು ದರೂ ಜೀವವು ದಾಗಿಹುದು | ಕಾಯುಕಸಿದೋದಲೆ ಹುಸಿತ, ಪೌರುಷಾವು || ೩ || ಹಗಲು ರಾತ್ರಿಗಳಂತೆ | ಮೇಘಭೂಮಿಗಳಂತೆ ಸೊಗಸಿನ ಸಂಸಾರವೆರಡು ಒಂದಾಗಿ || ೪ || ರಥವಗಾಲಿಗಳೊಂದು | ಸುತ್ತುತ್ತ ಮುರಿದಾಗ ರಥಬಿದ್ದು ಕುಂಟಾಯ್ತು ಸಂಸಾರ ಹೀಗೆ || ೫ |

**ವಚನ||** ಈ ರೀತಿಯಾಗಿ ರಾಜನು ಪತ್ನಿ ವಿಷಯದಲ್ಲಿ ಅನೇಕ ವಿಧವಾಗಿ ಗುಣಗ್ರಹಣಮಾಡುತ್ತಾ ಕುಳಿತಿರುವ ಸಮಯದಲ್ಲಿ ಮಕ್ಕಳು ತಾಯಿಯನ್ನು ಕೇಳುತ್ತಾ ದೊರೆಬಳಿಗೆ ಬರಲು, ಮತ್ತಷ್ಟು ದುಃಖಿತನಾಗಿ ಏನೆನ್ನು ತಿರ್ದನದಂತೆನೆ.

## ರಾಗ— ಏಕತಾಳ

ತಾಯಿ ಇಲ್ಲದ ಸುತರು ನಾಯಿಯಂದದಿ ಜಗದಿ | ಕಾಯುಸುಖವಿಲ್ಲದೆ ಬಳಲಬೇಕವರು || ೧ || ತಾಯಿತಂದೆಗಳೆರಡು ಕಾಯುವ ದೇವರು| ತಾಯಿ

ತಾಕಾರಣಹರಿ ಅಜಾಹರಗೆ ‖ ೨ ‖ ತಾಯಿಮಲತಾಯಿಯು । ನೋಯಿಸದೆ ಬಿಡಲವಳು । ತಾಯಿ ಮಲಮಕ್ಕಳ। ತಾಯಲ್ಲಾಜಗದೀ ‖೩‖ ಮುಂದಿನತಾಯಿಯು । ಬಂಧನ ಹೀಗಿದೆ ಕಂದಸಲಹ ವ ತಾಯಿ । ಮುಂದಿನ್ನು ಜೀಡಾ ‖ ೪ ‖ ಅಳುವ ಮಕ್ಕಳ ಸಿಡಿದು । ಅಳುತಲಿ ರಾಜನು । ಕಳೆಯಲ್ಲ ದೋಯಿತೇ । ಮಕ್ಕಳೇ ನಿಮಗೆ ‖ ೫ ‖ ಯಾರ ಅನ್ನಾವ ಕೇಳಿ । ಯಾರ ನೀರನು ಜೇಡಿ ಕರೆಕರೆಮಾಡುವಿ । ನೀವಿನ್ನು ಮುಂದೇ ‖ ೬ ‖ ಹಸಿದ ಮಕ್ಕಳನೋಡಿ ಗಸಬಿಸಿಯಾಗುವ ಹಸನಾದ ತಾಯಿಲ್ಲ । ತಬ್ಬಲಿ ನೀವು ।

**ವಚನ‖** ಈ ಪ್ರಕಾರವಾಗಿ ರಾಜನು ಪ್ರಲಾಪಿಸುತ್ತಾ ಮಕ್ಕಳನ್ನು ಕಾಪಾಡುವ ಯೋಚನೆಯಿಂದ ಕೆಲವುಕಾಲ ಕಳೆಸು ಹುಚ್ಚನಂತೆ ದಿಗ್ಭ್ರಾಂತನಾಗಿರುತ್ತಿರಲು ಇತ್ತಲಾ ಶನಿದೇವರು ಒಂದುವಮಾಯದ ಹೆಣ್ಣುಮೋಹಿನಿಯನ್ನು ಮಾಡಿ, ರಾತ್ರಿ ರಾಜನು ಮಲಗಿದ ಕೋಣೆಗೆ ಕಳುಹಲು ಮೋಹಿನಿ ಬಂದು ರಾಜನನ್ನು ಎಚ್ಚರಿಸಿ ಏನೆನ್ನುತಿರ್ದಳದೆಂತೆನೆ.

### ರಾಗ—ಜಂಪೆ

ಏನುರಾಜನೆ ನೀನು । ಕೂನುವಯದೆ ಇರುವಿ । ಮಾನಿನಿಸುಖಸಿನಗೆ ಜೇಡವೇನಯ್ಯ ‖ ೧ ‖ ಸುಖದೊಳಗೆ ರತಿಸುಖವು । ಮುಖದೊಳಗೆ ಸ್ತ್ರೀಮುಖವು । ಮುಖ್ಯವಾಸವನಿನ್ನು । ಜಗದೊಳಗೆ ನೋಡು ‖೨‖ ಅಕ್ಕರವು ಬೊಕ್ಕಸವೂ । ಸೊಕ್ಕುಜವ್ವನೆ ಕಂಡು । ನಕ್ಕುನಲಿದಾಡುವವು । ಮಿಕ್ಕಪಾಡೇನು ‖ ೩ ‖ ಮುಕ್ಕಣ್ಣಮುರವೈರಿ । ಅಜ-ಇಂದ್ರ ಸುರರೆಲ್ಲ । ಮಿಕ್ಕಸವಿಯೆಂಬೆಣ್ಣು ಕುಕ್ಷಿಕೊಟ್ಟೆಹರೂ ‖ ೪ ‖

**ವಚನ‖** ಇಂತೀದು ಒಂದು ದಿನ ರಾತ್ರಿ ಶನಿಮಾಯುವ ಮೋಹಿನಿ ಹೆಣ್ಣು ಬಂದು ಅನೇಕ ವಿಧವಾಗಿ ರಾಜನನ್ನು ಭೋಗಕ್ಕೆ ಕರೆಯಲು ಆದಕ್ಕಾ ರಾಜನು ಏನೆನ್ನುತಿರ್ದನದೆಂತೆನೆ.

### ರಾಗ—ದ್ವಿಪದಿ

ಇಂದುವದನೆಯಭೋಗ । ಇಂದ್ರಚಂದ್ರರು ಬಯಸೀ । ಕಂದಿಕುಂದಿ ದರಿಂದೆ ಕೇಳಿ ಮೋಹಿಸಿಯೋ ‖ ೧ ‖ ಭೋಗದಾಸೆಯುಮಾಡಿ । ಯೋಗಿ ಕೆಟ್ಟರು ತಾವೂ । ತೂಗಿನೋಡಲು ಭೋಗ । ಮೃತ್ಯುವೆನಿಸುವದೂ ‖೨‖ ಪರನಾರಿಯರ ಸಂಗ । ನರಕಕೂಪವ್ವುದೆಂದು । ಹಿರಿಯರೂ ಈ ಹಿಂದೆ ಹೇಳಿ ಪೋಗಿಹರೂ ‖ ೩ ‖

ವಚನ॥ ಈ ಪ್ರಕಾರವಾಗಿ ಮೋಹಿನಿ ಮಹಾರಾಜರು ಪರಸ್ಪರ ಸಂಭಾಷಿಸಿದ ತರುವಾಯ ರಾಜನು ಸ್ತ್ರೀ ಭೋಗವನ್ನು ಧಿಕ್ಕರಿಸಲು ಶನಿದೇವರಿಗೆ ಮುಂದಿನ ಕೆಲಸ ತಡವಾಗುವುದೆಂದು ತಿಳಿದು ಮೋಹಿನಿಯನ್ನು ಮಾಯವಮಾಡಿ ಕಳಿಸಿ ರಾಜನಿಗೆ ಹುಚ್ಚುಹುಚ್ಚಾಗುವಂತೆ ಮಾಡಿ ಬೆಳಗಾಗುತ್ತಲೇ ಮಹಂದಾತನು ಯಾರಿಗೂ ಹೇಳದಂತೆ ಮಕ್ಕಳನ್ನು ಎತ್ತಿಕೊಂಡು ಅರಣ್ಯದಾರಿಯನ್ನಿಡಿದು ಹೋಗುತ್ತಿರಲು ಶನಿಮಾಯದಿಂದ ಮುಂದೆ ಸಣ್ಣದೊಂದು ನದಿಯು ಹರಿಯುತ್ತಿರಲು ಮಹಾಂದಾತನು ಏನೆನ್ನುತಿರ್ದನದೆಂತೆನೆ.

ರಾಗ—ಏಕತಾಳ

ಆರುರಾಯರ ಗಂಡ । ಮೂರುರಾಯ ಮಿಂಡ । ಧರೆಯೊಳು ವಿಧಿ ನಿಂಡ । ಮಹಾಂದಾತಭೂಪ ॥ ೧ ॥ ಎಷ್ಟು ಕಷ್ಟವಸಹಿಸಿ । ಏಳುವರ್ಷವ ಕಳೆದೆ । ಭ್ರಷ್ಟ ಶನಿದೆಸೆಯಿಂದ ಸೃಷ್ಟಿಯೊಳು ನಾನು ॥ ೨ ॥ ಸತಿಯನ್ನು ಕಳಕೊಂಡು । ಅತಿದುಃಖದಿಂದಲಿ। ಪತಿತನಾದೆನು ನಾನು । ಪೃಥ್ವಿಮೇಲಿನ್ನು ॥ ೩ ॥ ಮುಂದೆ ಹೋಗಲು ಯನಗೆ । ಬಂದೀತು ನದಿಯೊಂದು । ಕಂದರ ಕೈಪಿಡಿದು ಹೋಗುವುದು ಹೇಗೆ ॥ ೪ ॥

ವಚನ॥ ಇಂತೆಂದು ಮಹಾಂದಾತ ಮಹಾರಾಜನು ಬಗೆ ಬಗೆ ಯೋಚನೆಯಂ ಮಾಡುತ್ತಾ ನದಿದಡದಲ್ಲಿ ನಿಂತು ಶನಿಮಾಯೆಯನ್ನು ನಿಂದಿಸಿ ನದಿದಾಟಲು ಬಾಲಕರಿಗೆ ಕಷ್ಟವಾಗುವುದೆಂದು ತಿಳಿದು ಒಂದು ಮಗುವನ್ನು ಈ ದಡದಲ್ಲಿ ಬಿಟ್ಟು ಇನ್ನೊಂದು ಮಗುವನ್ನು ಹೆಗಲ ಮೇಲೆ ಕೂಡಿಸಿಕೊಂಡು ಆಚೆದಡದಲ್ಲಿ ಬಿಟ್ಟು ಪುನಃ ಈಚೆಗೆಬಂದು ಈಮಗುವನ್ನು ತೆಗೆದುಕೊಂಡು ಹೋದರಾಯಿತೆಂದು ತಿಳಿಯುವಷ್ಟರಲ್ಲಿ ಹೀಗೆ ಮತ್ತೊಂದು ಆಲೋಚಿಸಿದನು. ಒಂದುಮಗುವನ್ನು ಬಿಟ್ಟು ಮತ್ತೊಂದು ಮಗುವನ್ನು ಹೊತ್ತುಕೊಂಡು ನದಿದಾಟಲು ಹೋದಾಗ ಹಿಂದಿದ್ದ ಮಗುವು ನದಿಯೊಳಕ್ಕೆ ಬರಬಹುದೆಂದು ಊಹಿಸಿ ಅಲ್ಲಿದ್ದ ಒಂದುಮರಕ್ಕೆ ಒಂದು ಮಗುವನ್ನು ಕಟ್ಟಿಹಾಕಿ ಒಬ್ಬನನ್ನು ಹೊತ್ತುಕೊಂಡು ಆಚೆದಡಕ್ಕೆಹೋಗಿ ಆ ಮಗುವನ್ನು ಅಲ್ಲಿದ್ದ ಒಂದುಮರಕ್ಕೆ ಕಟ್ಟಿಹಾಕಿ

ಈಕಡೆ ಇರುವ ಮಗುವನ್ನು ಎತ್ತಿಕೊಂಡೋಗಲು ನದಿ ಇಳಿದು ಈಚೆಗೆ ಬರುತ್ತಿರುವ ಸಮಯದಲ್ಲಿ ಶನಿದೇವರು ಇದೇ ಸಮಯಕ್ಕೆ ತಂದೆಯ ನ್ನೂ ಮಕ್ಕಳನ್ನೂ ಅಗಲಿಸಲು ಕಾಲವೆಂದು ತಿಳಿದು ತನ್ನ ಚಮತ್ಕಾರ ವಂ ಮಾಡುತಿರ್ದನದೆಂತೆನೆ.

**ರಾಗ—ಆಟತಾಳ ಅರ್ಧರೇಖು**

ನದಿಯು ಮೀರಿದಪ್ಪೀಜಂತು | ಎಲೆದೇವಾ ಇನ್ನು | ಬುದ್ಧಿತೋಚಾ ದಂತೆ ಆಯ್ತು ಎಲೆದೇವಾ ॥೧॥ ನಟ್ಟನಡುವೆ ರಾಜಾತಾನು | ಎಲೆದೇವಾ ಮತ್ತೆ ಸಿಟ್ಟುಸುರುಬಿಡುತಾ ಮುಳುಗೆ | ಎಲೆದೇವಾ ॥ ೨ ॥ ಹೊತ್ತು ಹೋ ಯಿತು ನದಿಯು ತಾನೂ| ಎಲೆದೇವಾ ಮುಂದೆ | ಬೆಸ್ತರವರು ನೋಡಿದಾರು ಎಲೆದೇವಾ ॥ ೩ ॥

**ವಚನ**॥ ಈ ಪ್ರಕಾರವಾಗಿ ಮಕ್ಕಳನ್ನು ನಗಿದಾಟಿಸುತ್ತಿರುವಾಗ ಶನಿಮಾ ಯೆಯಿಂದ ರಾಜನು ನದಿಯಲ್ಲಿ ಕೊಚ್ಚಿ ಹೋಗಲು ಲಕ್ಷ್ಮೀದೇವಿ ಅನು ಗ್ರಹದಿಂದ ಮುಂದೆ ನದಿತೀರದಲ್ಲಿದ್ದ ಮೀನು ಹಿಡಿಯುತ್ತಿರುವ ಬೆಸ್ತರು ಬಲೆಯನ್ನು ಹಾಕಿ ರಾಜನನ್ನು ಎತ್ತಿಕೊಂಡು ದಡಕ್ಕೆ ತಂದು ಉಪಚಾ ರವಂ ಮಾಡುತ್ತಿರಲು, ಇತ್ತ ಮರಕ್ಕೆ ಕಟ್ಟಿಹಾಕಿದ್ದ ಮಕ್ಕಳು ತಮ್ಮ ತಂದೆ ನದಿಯಲ್ಲಿ ಮುಳುಗಿಹೋದದ್ದು ಕಂಡು ದುಃಖದಿಂದ ಏನೆನ್ನು ತಿರ್ದರದೆಂತೆನೆ.

**ರಾಗ—ಏಕತಾಳ**

ತಂದೆತಾಯಿಯ ಕಳೆದು | ಬಂಧುಬಳಗಕಳೆದು | ಬಂಧಾನಬಂದೀತು ವಿಧಿಯಿಂದಾ ನಮಗೇ ॥ ೧ ॥ ಹಸುವಿನ ಬಳಲಿಕೆ | ಗಸಬಿಸಿಮಾಡುವದು| ಹಸುಳೆಯು ನಮ್ಮನ್ನು | ಎತ್ತುವರಾರೂ ॥ ೨ ॥ ಅಣ್ಣತಮ್ಮರು ನೋಡಿ| ಕಣ್ಣೀರ ಸುರಿಸುತ | ಚಿಣ್ಣಬಾಲಾರು ತಾವು | ಅಳುತಾಲಿಹಾರು ॥ ೩ ॥

**ವಚನ**॥ ಇಂತೆಂದು ತಂದೆತಾಯಿ ನೆನೆಸಿಕೊಂಡು ಮಕ್ಕಳು ಒಬ್ಬರ ನ್ನೊಬ್ಬರು ಒಬ್ಬರು ಅಳುತ್ತಿರುವ ಸಮಯದಲ್ಲಿ ಗೊಲ್ಲ ಪಾಳೆಯದಿಂದ ಗೊಲ್ಲತಿಯೊಬ್ಬಳು ಕುರಿಗಳನ್ನು ಮೇಯಿಸಲಿಕ್ಕೆ ಅಲ್ಲಿಗೆ ಹೊಡೆದು ಕೊಂಡು ಬಂದು ನೋಡಲು ಮರಗಳಿಗೆಕಟ್ಟಿದ್ದ ಮಕ್ಕಳನ್ನು ಕಂಡು ಮರುಗಿ ಕಟ್ಟಿದ್ದ ಹಗ್ಗವನ್ನು ಬಿಚ್ಚಿ ಆ ಮಕ್ಕಳನ್ನು ಎತ್ತಿಕೊಂಡು

ಕುರಿಮುಂದೆಗೆ ಹೋಗಿ ಹಾಲನ್ನುಣ್ಣಿಸಿ ಪಾಲಿಸವಂಗೈಯ್ಯುತ್ತಿರಲು ಇತ್ತ ಮಾಂದಾತಮಹಾರಾಜನು ಮೋಸಬೇಟೆ ಜಿಸ್ತರಿಂದ ಉಪಚರಿಸಿವವನಾಗಿ ಅವರ ಹಟ್ಟಿಯಲ್ಲಿದ್ದು ಅವರ ಕುರಿಯನ್ನು ಮೇಯಿಸುತ್ತಾ ನವವರ್ಷವನ್ನು ಕಳೆಯುವುದರಲ್ಲಿ ಇತ್ತ ಧಾತ್ರಿಪಟ್ಟಣದ ಮಂತ್ರಿ ಮಂಡಲೀಕರು ಈವರಿವಿಗೂ ತನ್ನ ದೊರೆಯು ಬಾರದಿರುವವರಿಂದ ಏನೆನ್ನುತಿರ್ದರದೆಂತೆನೆ.

**ರಾಗ— ಏಕತಾಳ**

ನಮ್ಮ ರಾಜನು ಹೋಗಿ | ಉನ್ನಯದಿ ಇಂದಿಗೆ| ಕನ್ಮಯಂದರೆನವ ವರ್ಷಗಳಾಗೇ ‖ ೧ ‖ ದೊರೆಯು ಇಲ್ಲದ ರಾಜ್ಯ | ಭಾರ್ಯೆಯಿಲ್ಲದವನಸಿಯು ನರಕಾದ ಬೀಡೆಂದು ತಿಳಿವದೂನರಾರೂ ‖ ೨ ‖ ದೇವರಿಲ್ಲದ ಗುಡಿಯು | ಭಾವವಿಲ್ಲದ ಹೆಣ್ಣು | ಭುವನಾಪತಿಯಿಲ್ಲದ ರಾಜ್ಯಶೋಭಿಸದೂ ‖ ೩ ‖ ತರಳರಿಲ್ಲಾದ ಮನೆ | ಗುರುವುಯಿಲ್ಲದಮತ | ದೊರೆಯಿಲ್ಲದಾ ಊರು| ಕರೆ ಕರೆಯೆಂದೂ ಪರಿವಾರ ಪ್ರಜೆಗಳು | ಪರಿಕಿಸಲೋಸುಗ | ಪರಿಬಂದಕಡೆಗಿನ್ನು ದೊರೆವುಡುಕಿ ಬನ್ನಿ ‖ ೪ ‖

**ವಚನ**‖ ಈ ಪ್ರಕಾರವಾಗಿ ಧಾತ್ರಿಪಟ್ಟಣದ ಪ್ರಜೆಪರಿವಾರವು ದುಃಖಿಸಿ ಅನೇಕ ಕಡೆ ಚರರನ್ನು ಕಳುಹಿಸಿ ಹುಡುಕಿಸುತಿರ್ದರದೆಂತೆನೆ.

**ಭಾಮಿನೀ ಷಟ್ಪದಿ**

ಯಾರುರೋಹಿಣಿಶಕಟಶನಿಯ | ಸಾರಪಾರಾಯಣವಮಾಡಲು |
ಘೋರಕಂಟಕಹರಿದು ಅವರಿಗೆ ಸುಖವು ಲಭಿಸುವದೂ ‖
ಮೆರೆವದ್ಯಾಮೌನಹಳ್ಳಿ ಪುರವರ | ಉರಗಧರತಾ ಬ್ರಹ್ಮಲಿಂಗನ |
ಸ್ಮರಿಸಿಲಿಖಿಸಿದ ರೇವಣಾಕವಿ ಶನಿಯಮಹಿಮೆಯನೂ ‖ ೧ ‖

ಇತಿ ಹರಿಹರವರ ಪರಾಯಣಪಯಃ ಪಾರಾವಾರಾರಾಕಾ ಸುಧಾಕಾರಾಯ
ಮಾನ ದ್ಯಾಮೌನಹಳ್ಳಿ ಬ್ರಹ್ಮತೀರ್ಥಾಶ್ರಮನಿವಾಸಿಗಳಾದ ಜೋತಿಷ
ರಮಲ ದೈವಜ್ಞ ಕವಿ ಪಂಡಿತ ಶ್ರೀ ರೇವಣ್ಣಯೋಗೀ ಕೃತ
ರೋಹಿಣಿ-ಶಕಟಶನಿಮಹಾಪುರಾಣದಲ್ಲಿ ದ್ವಿತಿಯ ಸಂಧಿ
ಪರಿ ಸಮಾಪ್ತಾಯಾಂ. ಶ್ರೀ ಶ್ರೀ ಶ್ರೀ

**ಅಂತು ಸಂಧಿ ೨ಕ್ಕಂ ಪದನೂ ೧೦ಲಕ್ಕಂ ಮಂಗಳಮಹಾ ಶ್ರೀಶ್ರೀಶ್ರೀ**

# ಮೂರನೆಯ ಸಂಧಿಪ್ರಾರಂಭಃ

○

ಪೀಠಿಕಾ ಪದ್ಯ॥ ರಕ್ಷಿಸೆನ್ನನು ಭಾನುಸೂನನೆ।
ರಕ್ಷಿಸೆನ್ನನು ಛಾಯತನುಜನೆ।
ರಕ್ಷಿಸೆನ್ನನು ಗುಳಿಕಪಿತ ಶನಿದೇವಪಾಲಿಪುದೂ॥
ರಕ್ಷಿಸೆನ್ನನು ಪರಮಪುರುಷನೆ।
ರಕ್ಷಿಸೆನ್ನನು ದೇವದೇವನೆ।
ರಕ್ಷಿಸೆನ್ನನು ಸರ್ವಕಾಲದಿ ದೇವಶನಿರಾಜಾ॥

ವಚನ॥ ಮಹಾಂದಾತಮಹಾರಾಜನು ಬೆಸ್ತರಹಟ್ಟಿಯಲ್ಲಿ ನಿತ್ಯವೂ ಕುರಿಗಳನ್ನು ಮೇಯಿಸುತ್ತಾ ಒಂದಾನೊಂದುದಿವಸ ಹೀಗೆಂದು ಪ್ರಲಾಪಿಸುತಿರ್ದನದೆಂತೆನೆ.

ರಾಗ—ಏಕತಾಳೆ

ಏನಯ್ಯಶನಿರಾಜ। ಏನುಮಾಡಿದೆನೀನು। ಮಾನಿನಿಮಕ್ಕಳ ತೊಲಗಿ ದುಃಖವನೂ ॥೧॥ ಅಡವಿಅರಣ್ಯವ। ಸೇರಿಸಿನನ್ನನ್ನು। ಸುಡುಗಾಡುಮಾಡಿಟ್ಟೆ। ನಿನ್ನಪೌರುಷಾದಿ ॥೨॥ ಆರುರಾಯರಗಂಡ। ಮೂರುರಾಯರವಿಂಡ ಧರೆಯೊಳು ವಿಧಿವಿಂಡ। ಮಹಾಂದಾತಭೂಪ ॥೩॥ ಹೀಗೆಂಬಬಿರುದನ್ನು ಕೊಟ್ಟವರೆದೇವಶರು। ಹಗೆಮಾಡಿ ವಿಧಿ-ನಿಧಿಗೆ। ಕಂಗೆಡಿಸಿ ನನ್ನ॥೪॥

ವಚನ ಈ ಪ್ರಕಾರವಾಗಿ ರಾಜನು ಅಡವಿಯಲ್ಲಿ ಕುರಿ ಮೇಕೆಗಳನ್ನು ಮೇಯಿಸುತ್ತಾ ಯೋಚನೆಯಿಂದ ಮನಮುಗ್ನನಾಗಿರಲು ಪಶ್ಚಿಮಾಂಬುಧಿಯಲ್ಲಿ ಸೂರ್ಯಾಸ್ತಂಗತನಾಗುತ್ತಿರಲುರಾಜನು ಊರದಾರಿಯನ್ನು ಹಿಡಿದು ಬರುತ್ತಿರಲು, ಶನಿಮಾಯದ ದೊಡ್ಡಮಳೆ ಧಾರಾಕಾರವಾಗಿ ಸುರಿಯುತ್ತಾ, ತಾನೊಂದುಕಡೆ ಕುರಿಗಳೊಂದು ಕಡೆಯಾಗಿ ಅಲೆಯುತ್ತಿರಲು ರಾತ್ರಿ ಕಾರ್ಗತ್ತಲೆಯಲ್ಲಿ ಶನಿಮಾಯೆಯಿಂದ ನಿರ್ಮಿಸಲ್ಪಟ್ಟ ಆ ಘೋರಾರಣ್ಯದಲ್ಲಿ ಒಂದು ಪಾಳುಗುಡಿಯಂ ಕಂಡು ರಾಜನು ಅದರಲ್ಲಿ ವಿಶ್ರಾಂತಿಹೊಂದುತ್ತ ಹಾಗೆಯೇ ಪವಡಿಸಲು ಶನಿಮಾಯದನಿದ್ರೆ

ಬಂದು ಮುಸುಕಲು, ಶನಿಯು ಇದೇ ಸಮಯವೆಂದು ಸಮೀಪದಲ್ಲಿಯೇ ಇದ್ದ ಮಾಂದಾತ್ರ ಚಕ್ರವರ್ತಿಗೆ ಸಾಮಂತರಾಜನಾಗಿದ್ದ ಕಾಶೀ ಪಟ್ಟಣದ ದೊರೆ ವಸುಮತಿರಾಜನ ಪತ್ನಿ ವಿಮಲಾದೇವಿಯು ಆರಾತ್ರಿ ಧರಿಸಿದ್ದ ಆಭರಣಗಳನ್ನೆಲ್ಲಾ ಬಿಚ್ಚಿಟ್ಟು ಮಲಗಿರುವಾಗ ಶನಿಯು ಆವಡವೆ ವಸ್ತುಗಳನ್ನು ತಂದು ಮಹಾಂದಾತಮಹಾರಾಜನ ಮಗ್ಗುಲಲ್ಲಿ ಹಾಕಿ ಮಾಯವಾದ ನಂತರ ಬೆಳಗಾಗುತ್ತಲೇ ಸತಿ ವಿಮಲಾದೇವಿ, ಎದ್ದು ನೋಡಲು ಒಡವೆವಸ್ತುಗಳೊಂದೂ ಇಲ್ಲದಿರಲು ಕೂಡಲೇ ರಾಜನಿಗೆ ತಿಳಿಸಿದಳು. ವಸುಮತಿರಾಯನು ದಿಕ್ಕುದಿಕ್ಕಿಗೆ ಕಳವುಮಾಡಿದವನನ್ನು ಹಿಡಿಯಲು ಚಾರರನ್ನು ಕಳುಹಲು, ಅವರು ಹುಡುಕುತ್ತಾ ಅರಣ್ಯದ ಗುಡಿಯಲ್ಲಿ ಮಲಗಿದ್ದ ಮಹಾಂದಾತರಾಜನ ಮಗ್ಗುಲಲ್ಲಿ ಒಡವೆ-ವಸ್ತುಗಳಿದ್ದುದನ್ನು ನೋಡಿ ಇವನೇ ಕಳ್ಳನೆಂದು ಹಿಡಿದು ರಾಜನ ಆಸ್ಥಾನಕ್ಕೆ ಬಂದರೆಂತೆನೆ

### ರಾಗ— ತ್ರಿಹುಡಿ

ಕಳ್ಳತನದಲಿ ದೊಡ್ಡ ಕಳ್ಳನು | ಒಳ್ಳೆವಡವೆಯ ಕದ್ದು ಮಲಗಿಹ | ಪೊಳ್ಳು ಮನುಜನ ಹಿಡಿದು ತಂದೆವು | ರಾಜನೀ ಕೇಳೋ ||೧|| ಬೆಸ್ತರಳ್ಳಿಯ ಇವನ ವಾಸವು | ಬೆಸ್ತನಾಗಿ ಬಾಳುತಿರುವನು ಶಿಸ್ತಿನಿಂದಲಿ ಹಿಡಿದು ತಂದೆವು | ಕಳ್ಳ ಮಾನವನಾ || ೨ || ರಾಣಿವಾಸದ ಒಡವೆ ತರುವ | ಪ್ರವೀಣಕಳ್ಳನುಯೆಂದು ಚಾರರು | ಗೋಣಹಿಡಿದೆಳೆಯುತ್ತ ನೂಕಲು | ರಾಜನಾನೆಡೆಗೆ || ೩ ||

**ವಚನ** ಈ ಪ್ರಕಾರವಾಗಿ ಕಾಶೀಪಟ್ಟಣದ ವ ಸು ಮ ತಿ ರಾಜಸ್ಥಾನಕ್ಕೆ ಮಾಂದಾತ್ರ ಕಳ್ಳನೆಂದು ಒಡವೆವಸ್ತುಗಳಸಹಿತ ಚಾರರು ತಂದು ನಿಲ್ಲಿಸಲು ರಾಜನ ಮಗ್ಗುಲಲ್ಲಿಯೇ ಲಕ್ಷ್ಮೀದೇವಿಯ ವರಪ್ರಸಾದದಿಂದ ಜನಿಸಿದ ರಾಜಕುಮಾರಿ ಪುಷ್ಪಮಂಜರಿ ಏನನ್ನುತಿರ್ದಳದೆಂತೆನೆ.

### ರಾಗ-ದ್ವಿಪದಿ

ತಂದೆಯೇ ಇವನಾರು | ಚಂದದಿಂ ತೋರುವನೂ ! ಕುಂದಣದಹೊಳಪುಳ್ಳ | ಚನ್ನಿಗನಿವನೂ | ||೧|| ಸಾರ್ವಭೌಮನರೂಪು | ಸರ್ವತ್ರ ಕಾಣುವದು | ಪರ್ವಪುರುಷನು ಇವನು | ಅಪ್ಪನೀ ಕೇಳೊ ||೨|| ಪುತ್ರಿ ಹೇ

ಳಿದ ನುಡಿಯಾ | ಪೃಥ್ವಿಪನು ಕೇಳಿನ್ನು | ಘಾತುಕಾ ಇವನೊಬ್ಬ | ಕಳ್ಳ ಕಾಣಮ್ಮಾ ||೩|| ಒಡವೆವಸ್ತ್ರವುಕದ್ದು | ವಪಲಹೊರಿಯುವಚೋರ| ಕೊಡುವೆ ನಿವನಿಗೆ ಘೋರ | ಶಿಕ್ಷೆಯನು ಈಗ ||೪|| ಮಡದಿವಡವೆಯ ಕದ್ದು | ಅಡವಿಯೊಳು ಅಡಗಿದ್ದ | ತುಡುಗಕಳ್ಳನಗುಣವ | ಪೊಗಳುವರೇಮಗಳೇ ||೫||

**ವಚನ||** ಈ ಪ್ರಕಾರವಾಗಿ ರಾಜ ಮತ್ತು ಮಗಳ ಸಂಭಾಷಣೆಯನ್ನು ಕೇಳುತ್ತಾ ಮಂಕುಹಿಡಿದವನ ಹಾಗೆ ಮಾಂದಾತ ಮಹಾರಾಜನು ನಿಂತಿರಲು ಆಗಲಾ ಶನಿಯು ರಾಜಮಗಳೀರ್ವರಿಗೂ ದುರ್ಬುದ್ಧಿಯನ್ನು ಕೊಡಲು ಪುಷ್ಪಮಂಜರಿಯು ರಾಣಿವಾಸಕ್ಕೆ ಹೋದಳು ರಾಜನು ಕಳ್ಳನಾದ ಮಹಾಂದಾತೃವಿಗೆ ತನ್ನ ದೇಶಪದ್ಧತಿಯಂತೆ ಶಿಕ್ಷೆಯನ್ನು ವಿಧಿಸುತ್ತಿರ್ದನದೆಂತೆನೆ.

### ರಾಗ—ಅಟತಾಳ

ಊರಹೊರಗೆಳದೊಯ್ದು ಇವನನು | ಬಾರಿಕೊರಡುಗಳಿಂದ ಹೊಡೆಯುತ | ಚೋರನಾಬಲಕಾಲುಕೈಯನು | ಕಡಿದುಹಾಕುವದೂ ||೧|| ಜಾರಚೋರರು ಹೆಚ್ಚಿರಾಜ್ಯವು | ಹರಕುಮುರುಕೂ ಆಗಿತೋರ್ಪದು | ಕರೆಕಡಿದ ಕಳ್ಳರನು ಬಂಧಿಸಿ ಇನ್ನು ನೀವಿನ್ನೂ ||೨|| ಹೇಳಿದರಾಜನು ಹೊರಟು ಪೋಗಲು ಆಳುಹಿಡಿದನು ಆಗರಾಜನ | ಗೋಳುಗುಟ್ಟುತ ರಾಜನಾಗಿದ | ಮುಂದೆ ತಾನಿನ್ನೂ ||೩||

**ವಚನ** ಈ ಪ್ರಕಾರವಾಗಿ ವಸುಮತಿರಾಜನು ಹುಕುಮನ್ನು ಕೊಟ್ಟು ಪೋಗಲು ಆಳುಗಳು ಹಿಂಸೆಕೊಡುತ್ತಾ ಎಳೆದೊಯ್ಯುತಿರ್ದರದೆಂತೆನೆ,

### ರಾಗ-ತ್ರಿಹುಡಿ

ಕೋಲುದೊಣ್ಣೆಗಳಿಂದ ಹೊಡೆಯುತ | ಕಾಲಯಮಭಟರಂತೆ ಚಾರರು | ಲೋಲರಾಜನ ಪಿಡಿದು ತಂದರು | ಊರಹೊರಗಿನ್ನಾ ||೧|| ಹೊಡೆತತಾಳದೆರಾಜನಾಗಲೇ | ಅಡಿಪಿಡಿದುಚಾರಕರ ಬೇಡುವ| ಕಡಿಯಬೇಡಿರಿವನ್ನಯೆನ್ನುತ | ರಾಯತಾಕೇಳೆ || ೨ || ರಾಜದಂಡನೆಬಿಡದು ನಿನ್ನಗೆ| ವಾಜಿ ಕಳ್ಳನು ನೀನುರಾಜ್ಯದಿ ಸೋಜಿಗದಿ ಕದ್ದೊಯ್ದೆ ರಾಣಿಯು ವಡವೆವಸ್ತ್ರಗಳಾ||

**ವಚನ**॥ ಇಂತೆಂದು ಮಹಾಂದಾತ ಮಹಾರಾಜನನ್ನು ರಾಜಭಟರು ಊರ ಹೊರಗೆ ಎಳೆದುಕೊಂಡು ಹೋಗಿ ರಾಜನ ಬಲಗಾಲನ್ನೂ ಬಲಗೈ ಯನ್ನೂ ಕತ್ತರಿಸುತಿರ್ದರವೆಂತೆನೆ.

**ರಾಗ— ಏಕತಾಳ**

ಕಾಲೊಂದು ಕೈಯನ್ನು । ಕಟ್ಟಿದರು ಆಳುಗಳು । ಬಲಗಾಲು ಬಲ ಗೈಯ್ಯ । ತುಂಡರಿಸೆ ಆಗ ॥ ೧ ॥ ಚಿರಿಚಿರಿ ರಕ್ತವು । ಸುರಿಯುವದು ಧರೆ ಯಲ್ಲಿ । ಮುರವೈರಿ ಗೋವಿಂದ । ರಕ್ಷಿಸುಯೆಂದ ॥ ೨ ॥ ಸುಡಿರೊ ಎನ್ನಯ ಜೀವ । ಸುಡಿರೋ ಯೆನ್ನಾಯಪ್ರಾಣ । ಬಿಡಬ್ಯಾಡಿರೆಂದನು । ರಾಜತಾ ನಾಗಾ ॥೩॥ ವಿಧಿಯೆದ್ದು ಕಾಡುವಗೆ ಬುದ್ಧಿ ಬಲವುಇಲ್ಲ। ಸಿದ್ಧಾಸಿದ್ಧಿಗಳಿಲ್ಲ ಜಗದೊಳು ಕೇಳು ॥೪॥ ಆರಿಗುವಿಧಿಬಿಡದು । ಧರೆಯಲ್ಲಿಕೇಳಿನ್ನು ಮಾರಾರಿ ಮುರವೈರಿ । ಅಜರನ್ನು ಬಿಡಾದು ॥ ೫ ॥

**ವಚನ** ಈ ಪ್ರಕಾರವಾಗಿ ಆಳುಗಳು ರಾಜನ ಬಲಗೈ ಬಲಗಾಲನ್ನು ಕಡಿ ದುಹಾಕಿ ಬಂದು ವಸುಮತಿರಾಜನಿಗೆ ಹೇಳಿ ತಮ್ಮ ತಮ್ಮ ಕೆಲಸದಲ್ಲಿ ತೊಡಗಿದರು. ಇತ್ತ ಮಹಾಂದಾತರಾಜನು ಕೈಕಾಲು ಕುಂಟನಾಗಿ ಬಾಧೆಯನ್ನು ಸಹಿಸಲಾರದೆ ವಿಧಿಯನ್ನು ಹೊಗಳಲು ಶನಿದೇವರ ದೃಷ್ಟಿಯು ಸ್ವಲ್ಪಶುಭ ಸೂಚಕವಾಗಲು ಅದೇ ಮಾರ್ಗವಾಗಿ ಆಊರ ಧಾರ್ಮಿಕ ಧನಪಾಲಶೆಟ್ಟಿಯು ಬರುತಿರ್ದನದೆಂತೆನೆ.

**ರಾಗ–ಜಂಪೆ**

ಕೈಕಾಲು ಕಡಿದಿದ್ದ । ಮಾಂದಾತ್ರ ರಾಜನಿಗೆ । ಲಕ್ಷ್ಮಿ ನೀರೆನ್ನವನು ಕೊಡುತಿದ್ದಳಾಗ ॥ ೧ ॥ ಇವನೋಡಿ ಧನಪಾಲ ಆಶ್ಚರ್ಯವಾಗಿ । ಅದುರಿ ಬಂದನು ಮುಡುಬ ಇದ್ದ ಸನ್ನಿಧಿಗೆ ॥೨॥ ಮಾನ್ಯವನ ಬರುವಿಕೆಯು । ಇನ್ನು ಕಂಡಳು ಲಕ್ಷ್ಮಿ । ಸನ್ನುತದಿ ಅದೃಶ್ಯಳಾದಳೂ ಅವಳೂ ॥೩॥ ಪುಣ್ಯವಂತನು ಇವನು । ಹೆಣ್ಣುದೇವತೆ ಬಂದು । ಉಣಬಡಿಸಿ ಪೋಗುವಳು । ಎಂಥ ಪುಣ್ಯಾತ್ಮಾ ॥ ೪ ॥ ಈತನ ಕರೆದೊಯ್ದು । ಜತನನಾಡುವೆನೆಂದು । ಸತತ ಕಾಯಲಿ ನಮ್ಮ । ಉಪವನವನೆಂದೂ ॥೫॥ ಏನಯ್ಯ ಮುಡುಬನೇ । ನೀನಿನ್ನು ಬರುವೀಯ । ಸಾನುರಾಗದಿ ನಮ್ಮ । ತೋಟ ಕಾಯುವೆಯಾ ॥ ೬ ॥ ಶೆಟ್ಟಿ

ಹೇಳಿದವಾತು । ಸೃಷ್ಟೀಪಕೇಳಿನ್ನು । ಕಷ್ಟಕಾಲಕೆ ಇದು । ಶ್ರೇಷ್ಟತಾನೆಂದಾ ॥ ಶೆಟ್ಟಿ ಆಳುಗಳನ್ನು । ಒಂಟಿಕಾಲಿಲಿ ಅವನ । ಭಂಟವಾಡಿತ್ತಿದು । ಸೊಂಟದಲ ಅವನೂ ॥ ೮ ॥

**ವಚನ**॥ ಈ ಪ್ರಕಾರವಾಗಿ ಧನಪಾಲಶೆಟ್ಟಿಯು ಆಳುಗಳಿಂದ ಮಾಂದಾತೃರಾಜನನ್ನು ಹೊರಿಸಿಕೊಂಡು ಹೋಗಿ ತನ್ನ ಉಪವನದಲ್ಲಿ ಇಳುಹಿ, ಆತನಿಗೆ ಅನ್ನನೀರನ್ನು ಕೊಡುತ್ತಾ ತನ್ನ ಉಪವನವನ್ನು ಕಾಯಲು ಹಚ್ಚಿದನು. ದಿನವಹಿ ಮಾಂದಾತರಾಜನು ಅಲ್ಲದ್ದ ಕಲ್ಲುಬಂಡೆಯ ಮೇಲೆ ಕುಳಿತು ಆಗಾಗ, ರಾಗ-ಉಪರಾಗಗಳನ್ನು ಹೇಳುತ್ತಾ, ಸಂತೋಷದಿಂದ ಇರುತ್ತಿರಲು ಇತ್ತ ಗೊಲ್ಲಪಾಳೆಯೊಳಿದ್ದ ಮಹಾಂದಾತ ಮಹಾರಾಜನ ಮಕ್ಕಳು ಅಡವಿಗೆಹೋಗಿ, ಮೇಕೆಕುರಿಗಳನ್ನು ಮೇಯಿಸುತ್ತಿರುವಾಗ ಒಂದಾನೊಂದು ದಿವಸ ಮಹಾಂದಾತಚಕ್ರವರ್ತಿಯ ವಂಶಗುರುಗಳಾದ ಉಪಮನ್ಯುಮಹರ್ಷಿಗಳು ಕಂಡು ಗೊಲ್ಲತಿಯಿಂದ ಅಪ್ಪಣೆಯಂ ಪಡೆದು ಆ ಮಕ್ಕಳಿಗೆ ಸರ್ವಶಸ್ತ್ರಾರ್ಥ ವಿದ್ಯೆಯಂ ಕಲಿಸುತಿರ್ದರದೆಂತೆನೆ.

### ರಾಗ-ತ್ರಿಹುಡಿ

ಅರ್ಥಶಾಸ್ತ್ರವು ತರ್ಕಶಾಸ್ತ್ರವು । ಮಂತ್ರಯಂತ್ರಾತಂತ್ರವಿದ್ಯೆಯು । ಪೃಥ್ವಿಪಾಲಿಪರಾಜಶಾಸನ ಪೇಳ್ದಮುನಿ ಆಗ ॥೧॥ ವಾರಣಾಸ್ತ್ರವುಅಗ್ನಿಯಾಸ್ತ್ರವು । ವರುಣಅಸ್ತ್ರವು ವಾಯುವಿದ್ಯೆಯು । ತರುಳರಿಗೆ ತಿಳಿಹೇಳಿಮುನಿಪನು ಮತ್ತೆ ಇಂತೆಂದಾ ॥೨॥ ಚಕ್ರವರ್ತಿಯ ಮಕ್ಕಳಿವರು । ಅಕ್ಕರದಿನೀ ಸಲಹು ಯೆನ್ನುತ । ಅರ್ಕಸುತಶನಿಕಾಟ ಬಂದಿತು ಕೇಳಿಯೇಮುದುಕೀ ॥೩॥ ಶನಿಯಕಾಟವು ತೊಲಗಿಹೋಗಲು । ಇನ್ನುಸ್ವಲ್ಪಾದಿವಸ ಉಳಿದಿವೆ । ತನಯ ತಾಯಿತಂದೆಕಲೆವರು । ಮುಂದೆತಾನಿನ್ನು ॥೪॥

**ವಚನ**॥ ಈ ಪ್ರಕಾರವಾಗಿ ಉಪಮನ್ಯುಮಹರ್ಷಿಗಳು ಬಾಲಕರಿಗೆ ಸದ್ವಿದ್ಯೆಯನ್ನು ದಯಪಾಲಿಸಿ ತದನಂತರ ಗೊಲ್ಲರ ಮುದುಕಿಯನ್ನು ಕರೆದು ಇವರ ಪೂರ್ಣ ವೃತ್ತಾಂತವನ್ನು ತಿಳಿಸಿ ಮುಂದಕ್ಕೆ ಹೊರಟರದೆಂತೆನೆ.

### ರಾಗ—ಜಂಪೆ

ದೇಶತಿರುಗುತಮುನಿಯು । ಕಾಸಿನಗರಕೆಬಂದ । ಆಸಿಸಿತಾಪೋದರಾಜನಿದ್ದೆಡೆಗೆ ॥ ೧ ॥ ಮೊಂಡಕೈಕಾಲುಗಳು । ರುಂಡಮುಂಡಗಳಿಂದ ।

ಗಂಡುಗಲಿಮಹಾಂದಾತ | ಕುಳಿತುಕೊಂಡಿವ್ದ ‖ ೧ ‖ ಉಪವನದ ರಕ್ಷಕನು| ಅಪರಾಧವನುಮಾಡಿ | ತಪ್ಪುಉಪ್ಪುಗಳಿಂದ | ಮುಪ್ಪು ಬಳಸಿದ್ದ | ೩ ‖ ಏನಸ್ಯುವರಾಂದಾತ | ಅನ್ಯಾಯವೇನಯ್ಯ| ಮುನಿನೃಪನಕೇಳಿದನು| ಶಾಂತ ಭಾವದಲಿ ‖ ೪ ‖ ಮುನಿಕುಲೋತ್ತಮಕೇಳು | ಶನಿಯಕಾಟಬಂದೊದಗಿ | ಶ್ವಾನಸೂಕರನಾದೆ | ಇನ್ನು ಜಗದೊಳಗೆ ‖ ೫ ‖ ಪಡದಿಮುಸ್ಕಳುತೊಲಗಿ | ಅಡವಿಗೀಡಾಗಿರುವೆ | ಕಡುಜವದಿ ಪೇಳಿನ್ನು | ನನ್ನ ಕರ್ಮವನು | ೬ ‖ ರೋಹಿಣೀ ಶನಿ ಶಕಟ | ಬಾಹಿರನಾಗುವದು ದೇಹಿಯೆನ್ನಲುಬೇಕು| ವಿಧಿಸಿನ್ನು ನೀನು ‖ ೭ ‖ ಏನುಶನಿಮಾಡಿದರೂ | ನಾನು ಝಳಕುವದಿಲ್ಲ| ಮುನಿಪನಿದ ನನ್ನರಿಕೆ | ಯೆಂದತಾರಾಜ ‖ ೮ ‖ ಆರುವಾಯುರಗಂಡ | ಮೂರುವಾಯುರ ಮಿಂತ ಧರೆಯೊಳು ವಿಧಿಯಿಂದ | ಮಹಾಂದಾತ ಭೂಪ ‖ ೯ ‖ ಹಿಂಗೆಂಬ ಬಿರುದನ್ನು | ಕೊಟ್ಟಿರುವದೇವೇಂದ್ರ | ಬಾಗುವದು ಶನಿಗಿನ್ನು | ನಾ ಬಾಗಲರಿಯೆ ‖ ೧೦ ‖

**ವಚನ‖** ಈ ಪ್ರಕಾರವಾಗಿ ಮಹಾಂದಾತನಿಗೂ, ಉಪಮನ್ಯುಮಹರ್ಷಿಗಳಿಗೂ ಸಂಭಾಷಣೆಯಾದನಂತರ ಪುನಃ ಉಪಮನ್ಯುಮುನಿ ಏನೆನ್ನುತಿರ್ದರವೆಂತೆನೆ.

**ರಾಗ—ತ್ರಿಹುಡಿ**

ಕೇಳುರಾಜನೆ ಕೇಳುನಿನ್ನಯ | ಹಾಳುಕರ್ಮವು ಕವಿದಬಂದಿದೆ| ಬಾಳುಬದುಕಿನ ಪತ್ನಿ ಪುತ್ರರು| ಬಂದುಸೇರುವರೋ ‖ ೧ ‖ ದ್ವಾದಶಾವರೆವರ್ಷ ಶನಿಯು | ಬಾಧೆಕಳೆಯುವಕಾಲಬಂದಿದೆ| ಸಾಧಿಸಿದೆಹಠ ಶನಿಯಮೇಲೆ | ಭೂಪಕೇಳಿನ್ನೂ ‖ ೨ ‖ ಘೋರ ರೋಹಿಣಿ-ಶಕಟ ಶನಿಯು| ಪಾರುಗಾಣರು ಧರೆಯುಜನರು| ವೀರಿನಡೆದರೆ ಬಾರಿಬಾಧವು | ಬರುವದೂಸಹಜಾ ‖ ೩ ‖ ಇನ್ನು ಮುಂದೆ ಕೊಡುವೆ ದರುಶನ | ನನ್ನಿಯಿಂ ನಾಪೋಗಿ ಬರುವೆನು | ಮುನಿಯು ತೆರಳಿದ ಇಂದ್ರಲೋಕಕೆ ಬೇಗತಾನಿನ್ನೂ ‖ ೪ ‖ ದೇವಲೋಕದ ಇಂದ್ರಕಂಡನು | ಭಾವಭಕ್ತಿಲಿಮುನಿಗೆ ನಮಿಸಿದ | ಭುವನಮಾಂಧಾತ್ರನಿನ ವಿವರಕೇಳ್ದ ತಾನಾಗ ‖೫‖ ಮುನಿಯು ಪೇಳಿದ ಇಂದ್ರದೇವಗೆ| ಭಾನುಸುತ ವೈರತ್ನಬಿರುದನು | ಇನ್ನು ದೊರೆಯು ಮಾಂಧಾತ್ರಭೂಪಗೆ | ಕೊಟ್ಟುಬಂದಿ

ರುವೀ ॥೬॥ ಬಿರುದುಸಾಧಿಸಿ ಕಷ್ಟಪಡುವನು । ಭರದಿನೀ ಪೋಗಿನ್ನು ಬಿರುದನು । ಇರಿಸದೆ ಹಿಂದಕ್ಕೆ ಪಡೆವನು । ಇಂದ್ರನೀ ಕೇಳು ॥೭॥

**ವಚನ**॥ ಇಂತೆಂದು ಉಪಮನ್ಯು ಮಹರ್ಷಿಗಳು ಮಾಂಧಾತ ಚಕ್ರವರ್ತಿಯಿಂದ ಬೀಳ್ಕೊಂಡು ಇಂದ್ರಲೋಕಕ್ಕೆ ದೇವೇಂದ್ರನಿಗೆ ತಾನು ಈ ಹಿಂದೆ ಮಾಂಧಾತೃವಿಗೆ ಕೊಟ್ಟಿರುವ ಬಿರುದನ್ನು ವಾಪ್ಸುಪಡೆಯುವಂತೆ ಹೇಳಿ ರೋಹಿಣೀ ಶಕಟ ತಾರಾಮಂಡಲನನ್ನು ಕುರಿತು ತೆರಳಲು ಇತ್ತ ಮಾಂಧಾತನು ಬೇಸರ ಬಂದು ಒಂದ ನೊಂದು ದಿವಸ ದೀಪಕಮಲರಾಗವನ್ನು ಹಾಡುತಿರ್ದನದೆಂತೆನೆ

### ರಾಗ—ಏಕತಾಳ

ಇತ್ತ ಮಹಂದಾತನು । ಕುತ್ತುವರಿಯುತತಾನು । ಮತ್ತೆಪೇಳಿದರಾಗ ಭೂಪಾಳಿಯೊಂದಾ ॥ ೧ ॥ ತೋಟಾದಮಧ್ಯದಿ। ಸೀಟಾಗಿ ತಾ ಕುಳಿತು । ಮೋಟುಕೈಕಾಲಿಂದ । ಪೇಳಿದರಾಗ ॥ ೨ ॥ ವಸುಮತಿರಾಜಕುವರಿ । ಹಸನಾಗಿ ಮಲಗಿಹಳು । ಯೆಸೆತು ಶ್ರೀರಾಗವು ಪುಷ್ಪಮಂಜರಿಗೆ ॥ ೩ ॥ ದೊರೆಯಾಕುವರಿಗೆ । ಹರುಷವೆಚ್ಚರವಾಗೆ । ಕರೆತನ್ನಿ ಅವನಾರು । ರಾಗಪಾಡುವನೂ ॥ ೪ ॥ ಎಗಲಾಗದೂತಿಯರು । ವಿನಯಾದಿ ತಾ ಬಂದು । ದೀನಮಹಾಂದಾತನ । ನೋಡಿದರೂ ತಾವು ॥ ೫ ॥ ಕಾಲೂಕ್ಕೈಯಿಲ್ಲದ । ಜೈಲುಬಂದಿಯು ಆದ। ಹೊಲೆಯ ತಸ್ಕರನೆಂದು । ಧಿಃಕ್ಕರಿಸೀ ಅವರು ॥೬॥ ಬೇಗಬಂದೇಳಿದರು । ರಾಗ ಮಾಡುವನನ್ನು । ಸೊಗಸಿಲ್ಲ ಅವನೊಬ್ಬ ! ಕುಂಟ ಕಳ್ಳನಮ್ಮ ॥ ೭ ॥ ಹೀಗೆಂದು ಪೇಳಲ್ಕೆ। ರಾಗಮರೆತುಮಲಗಿ। ಬೇಗಕಂಡಳು ಸ್ವಪ್ನ । ಪುಷ್ಪಮಂಜರಿಯು ॥ ೮ ॥ ಗಜಲಕ್ಷ್ಮಿದೇವತೆಯು । ರಾಜಪುತ್ರಿಯು ಕಂಡು । ಸೋಜಿಗವಾದಳು। ಸ್ವಪ್ನದಲಿ ತಾನು ॥೯॥ ಸೂರ್ಯನುಟ್ಟಿದ ತಾನು ಪೂರ್ವಾದ್ರಿದಿಸೆಯೋಳು । ದೊರೆಪುತ್ರಿ ಎದ್ದಾಳು। ಹರುಷದಲಿ ಆಗ ॥ ೧೦ ॥

**ವಚನ**॥ ಇಂತೆಂದು ರಾಜಕುಮಾರಿಯು ಹರ್ಷದಿಂದೆದ್ದು ಮುಖಮಜ್ಜನವಂ ಮಾಡಿಕೊಂಡು ಗುರುಹಿರಿಯರಿಗೆ ನಮಸ್ಕರಿಸಿ, ತನ್ನಂತಪುರಕ್ಕೆ ಹೋಗಲು, ಇತ್ತ ವಸುಮತಿರಾಜನು ತನ್ನ ಮಗಳ ಸ್ವಯಂವರವೆಂದು ಸಕಲ ದೇಶಾಧಿಪರಿಗೆ ತಿಳಿಯ ಪಡಿಸಲು, ಗೊತ್ತಾದ ವೇಳೆಗೆ ಸಮಸ್ತ

ರಾಜರು ಕಾಶೀನಗರಕ್ಕೆ ಬಂದು ಸ್ವಯಂವರ ಮಂಟಪದಲ್ಲಿ ವಿರಾಜಿಸು ತ್ತಿರಲು ಪಟ್ಟಣದ ಪ್ರಜೆ ಪರಿವಾರವು ಸ್ವಯಂವರ ನೋಡಲು ಕೇಳುವ ವೇಳೆಯಲ್ಲಿ ಕೈಕಾಲಿಲ್ಲದ ಮುಡುಬ ಮಾಂದಾತ ಚಕ್ರವರ್ತಿ ಯೇನೆನ್ನು ತಿರ್ದನದೆಂತೆನೆ.

### ರಾಗ–ತ್ರಿಹುಡಿ

ತಂದೆತಾಯಿಯು ಬಂಧುಬಳಗವು। ಇಂದುಯನಗೇ ಅಣ್ಣ-ತಮ್ಮರು । ಮುಂದಗಮನೆಯು ಅಂದನೋಡುವೆ ನೆಂದತಾ ರಾಜ ॥ ೧ ॥ ಕರೆದುಕೊಂಡು ಹೋಗಿರೆನ್ನನು । ದೊರೆಯ ಮಗಳನು ನೋಡಿಬರುವೆನು ದಾರಿಹೋಕರು ಎತ್ತಿ ಹೆಗಲೊಳು । ಇರಿಸಿಕೊಂಡೋಗೇ ॥ ೨ ॥ ಕುವರಿಸ್ವಯಂವರ ಗೆದ್ದು ಪೋಗಲು । ಭುವನರಾಜರು ಕುಳಿತರಾಕ್ಷಣ । ಹವಣತಿಳಿಯುತ ಕುವರಿಬಂದಳು । ರಾಜಮಂದಿರಕೇ ॥ ೩ ॥ ನೋಡಿದಳು ಕೆಲವೆಡೆಯರಾಜರ । ಕಂಡು ಬಹುರೂಪಿನಲಿ ಮುಡುಬನು । ಗಂಡಗಲಿಪತಿದೇವನೆನ್ನುತ । ಮಾಲೆ ಹಾಕಿದಳು ॥ ೪ ॥ ಮುಡುಬಹೆಳವನ ಪುಣ್ಯವೆಂದರು । ಪೊಡವಿಪನ ಅಳಿಯಾದನೆನ್ನುತ । ಬಡವರೆಲ್ಲರು ನೋಡಿ ಹರುಷವ । ತಾಳಿದರುಅವರೂ ॥೬॥ ಕೋಪ ಬಂದಿತು ಭೂಪಜನರಿಗೆ । ತಾಪತಂದಳು ತಂದೆತಾಯಿಗೆ । ಪಾಪಿಮುಡುಬನ ಪಿಡಿದು ಮಾಲೆಯ । ಹಾಕಿ ಇವಳಿನ್ನೂ ॥ ೬ ॥

**ವಚನ**॥ ಈ ಪ್ರಕಾರವಾಗಿ ರಾಜಕುವರಿಯು ಮುಡುಬನಾದ ಮಾಂದಾತ್ರನಿಗೆ ಮಾಲೆ ಹಾಕಿದ್ದನ್ನು ತಂದೆನೋಡಿ ಕೋಪದಿಂದ ಏನನ್ನುತಿರ್ದನದೆಂತೆನೆ.

### ರಾಗ—ಅಟತಾಳ

ಮಗಳೆಕೇಳೀ ನಿನ್ನ ಆಟವು । ಸೊಗಸುಎಂಬುದು ಯಾರು ತಿಳಿವರು ಮಿಗಿಲೆನಿಪಭೂಪತಿಗಳಿರುವರು । ಮಂದಿರದಿತಾವೂ ॥೧॥ ನೋಡಿ ಹೆಳವಗೆ ಮಾಲೆ ಹಾಕಿದೆ । ರೂಢಿಯೊಳು ಅಪವಾಧಬಂದಿತು । ನೋಡಬಾರದು ನಿನ ಮುಖವನು । ತೆರಳುನೀನಿನ್ನೂ ॥ ೨ ॥ ಕಳ್ಳಮುಡುಬನು ಅಳಿಯನೆಂದರೆ । ಪೊಳ್ಳುಮಾಡೀ ನರರುನಗುವರು । ವಳ್ಳಿತನದಿನೀ ತೇಲಗುಚಿಜೆಗೆ ಯೆಂದತಾ ರಾಜಾ ॥ ೩ ॥

**ವಚನ॥** ಈ ಪ್ರಕಾರವಾಗಿ ವಸುಮತಿಮಹಾರಾಜನು ತನ್ನ ಮಗಳು ಪುಷ್ಪ ಮಂಜರಿಗೆ ಕೋಪದ ನುಡಿಗಳನ್ನು ಆಡಿ, ಚಿಂತೆಯಿಂದ ಬೇರೊಂದು ಕಡೆಯಲ್ಲಿ ಕುಳಿತಿರಲು, ರಾಜಪತ್ನಿ ವಿಮಲಾದೇವಿಯು ಬಂದು ಏನೆನ್ನುತಿರ್ದಳದೆಂತೆನೆ-

ರಾಗ— ಏಕತಾಳ

ಕುವರಿಕೇಳಮ್ಮ ನೀನು। ತವಕಾದಿವಾಲೆಯು। ಹವಣತಿಳಿಯಾದೆಹಾಕಿ ಅವಮಾನಾಪಡದೇ ॥ ೧ ॥ ರಾಜವಮಾರಾಜರಿದ್ದು । ರಾಜಿಸುವ ಮುಡುಬಗೆ ಮಾಜಿಮಾಲೇಯಹಾಕಿ । ತೇಜಕಳಕೊಂಡೆ ॥ ೨ ॥ ಸರಿಯಸಮನರಾದ । ದೊರೆಗಳಿಗೆ ಮುಖವನ್ನು । ತೋರಿಸಬಾರದ ಹಾಗೆ ಮಾಡಿಟ್ಟೇ ॥೩॥ ಒಬ್ಬ ಮಗಳುಯೆಂದು । ಕೊಬ್ಬಿಸಿನಿನ್ನನು । ತಬ್ಬಲಿಯಮಾಡಿದೆಯ । ನಮ್ಮನ್ನು ಈಗಾ ॥ ೪ ॥

**ವಚನ॥** ಈ ಪ್ರಕಾರವಾಗಿ ಮಹಾರಾಣಿಯು ಶೋಕಿಸುತ್ತಾ ಮತ್ತೊಂದು ಕಡೆಯಲ್ಲಿ ಕುಳಿತಳು. ನೆರದಿದ್ದ ಸ್ವಯಂವರ ಮಂಟಪದ ರಾಜ ಮಹಾರಾಜರೂ, ಪ್ರಜೆ ಜನರು ವಸುಮತಿ ರಾಜನಿಗೆ ಹೋಗಿ ಬರುತ್ತೇವೆಂದು ಹೇಳಿ ತಮ್ಮತಮ್ಮ ಪಟ್ಟಣವಂಕುರಿತು ತೆರಳಲು, ರಾಜಕುವರಿ ಪುಷ್ಪ ಮಂಜರಿಯು ತಂದೆ-ತಾಯಿಗಳನ್ನು ಕುರಿತು ಏನನ್ನುತಿರ್ದಳದೆಂತೆನೆ.

ರಾಗ— ಏಕತಾಳ

ಮಾತಾಪಿತ್ರಾರೆ ನಿಮಗೆ । ಕುತ್ತಕೊಟ್ಟೆನುಯೆಂದು । ತತ್ತರಿಸಬೇಡಿರಿ ಕೇಳಿ ನೀವಿನ್ನೂ ॥ ಬ್ರಹ್ಮಬರೆದ ಬರಹ । ಕರ್ಮ ಎನ್ನಲು ಬೇಡ । ಕರ್ಮಾಗೋಲಾನುಸಹ। ಅನುಭವಿಸಬೇಕು ॥೨॥ ನನ್ನ ಹಣೆಬರಹವ। ಇನ್ನು ಬ್ರಹ್ಮನು ಬಲ್ಲ । ಕೂಸುವರಿಯಾದೆ ನೀವು । ದುಃಖಿಸುವುದೇಕೆ ॥೩॥ ಸಿಟ್ಟಲಿ ನನ್ನನ್ನು । ದೃಷ್ಟಿಸಿನೋಡುವುದು । ಶ್ರೇಷ್ಟವಲ್ಲವುನಿಮಗೆ । ಸೃಷ್ಟಿಯೊಳು ಇನ್ನು ನಿಮ್ಮ ಸೀಮೆಯಲಿನ್ನು । ನಮಗೊಂದು ಕೆಲಸವ । ಉಮ್ಮಯದಿ ನೀಕೊಟ್ಟು ಕಾಪಾಡುತಂದೇ ॥೪॥ ಎಂದು ಪೇಳಾಲುಬಾಲೆ। ತಂದೆ ನುಡಿದ ಆಗ । ಇಂದು ನಿನ್ನಯುಗಂಡ । ಪೌರುಷಗಾರ ॥೬॥ ರೂಪು ಯೌವನದಿಂದ । ಭಾಪುಯೆನ್ನುವನವನು । ಭೂಪಚೋರಾನು ಕುಂಟ। ಮುಡುಬತಾಭಂಡ ॥೭॥ ಹೇಸಿ

ಕೆಯ ಮಾನ್ನವನ । ಆಶಿಸಿ ಪೇಳುವೆಯ। ಘಾಸಿಮಾಡುವೆನೆನಲು । ಹುಸಿತು ಪೌರುಷಾನ ॥೮॥ ಇವರು ಆಡುವಮಾತು । ಕೇಳಿಮಾಂಧಾತನು । ಮಾವ ನೆನ್ನನು ನೀನು । ಬಯ್ಯಾಲುಬೇಡಾ ॥೯॥ ಎಂತೆಂಥವರಗತಿ । ಪಂಥಪಟ್ಟದಿಯಾಗಿ । ವ್ಯಥೆಯನನುಭವಿಸಿಹರು । ಹಿಂದಿನಾ ಜನರು ॥೧೦॥ ಕುಂದುಮಾತುಗಳಿಂದ । ಬಂಧಾನಬರುವದು । ಇಂದು ನೀ ತಿಳಿಯೆಂದಾ । ಮಾಂಧಾತಭೂಪ ॥೧೧॥ ಅಳಿಯನಾಡಿದಮಾತು । ಕೇಳಿತಾಯ್ತುಂಡೆಗಳು । ಖೂಳಭೀಮಾರಿಯೆ । ಮಾತಾಡಿನಬೇಡ ॥೧೨॥ ಅತ್ತೆಮಾವನಗೆತ್ತ್ಕ । ಉತ್ತಮ ಅಳಿಯನು । ಪೃಥ್ವಿಯೊಳುಸಿಕ್ಕದೆ । ಮತಿಗೆಟ್ಟುಸಾವು ॥೧೩॥ ಧನಪಾಲ ಶೆಟ್ಟಿಯು । ಕದನಕೇಳೆಂದನು । ಅನುಮಾನಪೇಡರಾಜ । ತಿಳಿದಂತೆಮಾಡು ಹೀಗೆಂದಮಾತಿಗೆ । ಆಗರಾಜನು ತಾನು । ಬೈಯ್ಗುಳಬಯ್ಯುತ । ಹೀಗೆಂದು ನುಡಿದಾ ॥೧೪॥ ನನ್ನ ಸೀಮೆಯಗಡಿ । ಇನ್ನು ಗಂಗಾನದಿಯು । ಮುನ್ನ ನಾವೆಯ ಚೆಕ್ಕು । ಮಾಡುವಕೆಲಸ ॥೧೫॥

**ವಚನ**॥ ಇಂತೆಂದು ಕಾಶಿ ವಸುಮತಿರಾಜನು ಮಗಳಿಗೂ, ಅಳಿಯನಿಗೂ ಜೀವನಕ್ಕೆ ಸರಿಯಾಗಿ ತನ್ನ ಸೀಮೆಯ ಕಡೆಗಡಿ ಗಂಗಾನದಿಯಲ್ಲಿ ಬರುವಹಡಗನ್ನು ಚೆಕ್ಕಮಾಡುವಕೆಲಸಕೊಟ್ಟು, ಅಲ್ಲಿ ಒಂದುಕೊಠಡಿಯನ್ನು ಕಟ್ಟಿಸಿ ಅದರಲ್ಲಿರುವಂತೆ ಅಪ್ಪಣೆಯಂಮಾಡಿ ಕಳುಹಲು ಅದರಂತೆ ಅವರು ಅತ್ತ ಪೋದರು. ಇತ್ತ ರಾಜಮಂತ್ರಿಗಳು ಚಿಂತಾವ್ಯಾಕುಲರಾಗಿ ಕುಳಿತರು. ಈ ಹಿಂದೆ ರೋಹಿಣಿ-ಶಕಟವನ್ನು ಪ್ರವೇಶ ಮಾಡಲು ಹೋದ ಉಪಮನ್ಯು ಮಹರ್ಷಿಗಳು ತನ್ನ ಪಿತಾಮಹರಿಂದ ಉಪದೇಶಿಸಲ್ಪಟ್ಟ ಶನಿ ವಜ್ರಪಂಜರವನ್ನು ಪಾರಾಯಣ ಮಾಡುತ್ತಾ, ದೇವಾನುದೇವತೆಗಳು ಸಹಾ ಪ್ರವೇಶಿಸಲಸದಳವಾದ ರೋಹಿಣಿ ಶಕಟವನ್ನು ಶುಕ್ಲಪಕ್ಷ ತ್ರಯೋದಶಿ, ಶನಿವಾರ ಹಗಲು ಉಪವಾಸವಂ ಮಾಡಿ ಸೂರ್ಯಾಸ್ತಮಯಕಾಲಕ್ಕೆ ಮೂರು ಘಳಿಗೆ ಮುಂಚಿತವಾಗಿ ಪ್ರವೇಶಿಸುತಿರ್ದನದೆಂತೆನೆ. [ಈ ಕಾವ್ಯವು ಯಂಥಾ ಪ್ರಬಲ ಶನಿಕಾಟ ವಿದ್ದರೂ ತೊಲಗಿಸುವುದೆಂದು ಬ್ರಹ್ಮೋತ್ತರ ಖಂಡಾದಿಗಳು ಉದ್ಘೋಷಿಸುವವು.

## ಭಾಮಿನೀ ಪದ್ಯ

ಪಾಹಿಮಾಂ ರವಿತನಯ ಮಂಡನೆ । ಪಾಹಿಮಾಂ ಶ್ರೀಛಾಯ ಕುವರನೆ ।
ಪಾಹಿಮಾಂ ಪರಮಾತ್ಮರೂಪನೆ ಪಾಹಿಮಾಂ ದೇವಾ ॥
ಪಾಹಿಮಾಂ ದೇವತ್ವದೇವನೆ । ಪಾಹಿಮಾಂ ಸುರದೇವವಂದ್ಯನೆ ।
ಪಾಹಿಮಾಂ ಪರತತ್ವ ಆತ್ಮನೆ ಪಾಹಿಮಾಂ ದೇವಾ ॥

॥ ಅಥ ಧ್ಯಾನಂ ॥

ಮಂದಃ ಕೃಷ್ಣನಿಭಃ ಸಪಶ್ಚಿಮಮುಖಃ ಸೌರಾಷ್ಟ್ರಪಃ ಕಾಶ್ಯಪಃ
ಮಿತ್ರೇಕಾವ್ಯಬುಧೌ ಕುಜಾರ್ಕವಿಧವೋ ಮಿತ್ರಾಘಟೇನಕ್ರಪಃ ।
ಸ್ಥಾನಂ ಪಶ್ಚಿಮದಿಕ್ಪ್ರಜಾಪತಿಯಮೌ ದೇವೌಧನುಷ್ಯಾಸನಂ ।
ಷಟ್ತ್ರಿಸ್ಥಃಶುಭಃ ಕೃಚ್ಛ್ಯನಿ ರವಿಸುತಃ ಕುರ್ಯಾತ್ಸದಾಮಂಗಲಂ ॥

ಅಥ ಮಂತ್ರಃ

ಓಂಸ್ವಃಭುವಃಭೂ ಓಂಸಃಪ್ರೌಂಪ್ರೀಂಪ್ರಾಂ ಓಂಶನೈಶ್ಚರಾಯನಮಃ

ವಚನ॥ ಈ ರೀತಿಯಾಗಿ ಮಂತ್ರ ಧ್ಯಾನಪೂರ್ವಕವಾಗಿ ಉಪಮನ್ಯು ಮಹರ್ಷಿಗಳು ಬಹುದೂರದಲ್ಲಿರುವ ರೋಹಿಣಿ ಶಕಟವನ್ನು ಪ್ರವೇಶಿಸಿ ನೋಡಲು, ಅಲ್ಲಿ ಶನೈಶ್ಚರನು ಯೋಗನಿದ್ರಾಪರವಶನಾಗಿ ಮಲಗಿದ್ದನು. ಮುನಿಯು ಶನಿದೇವ ಪಾಹಿಮಾಂ-ಪಾಹಿಮಾಂ ಎಂದು ಎಚ್ಚರಿಸಿದನು. ಕೂಡಲೇ ಶನಿಯೆದ್ದು, ಯಾರು ಈ ಶಕಟವನ್ನು ಪ್ರವೇಶಮಾಡಿದವರೆಂದು ಘರ್ಜಿಸಿದನು. ಕೂಡಲೇ ಉಪಮನ್ಯು ಮುನಿಗಳು ಶನಿಗೆ ಕೈಮುಗಿದು, ಜಗತ್ತಿನ ಸ್ಥಿತಿ-ಗತಿಯನ್ನು ಬಿತ್ತರಿಸಿದರು. ಅಗಲಾ ಶನಿಯು ಕಾಲವನ್ನು ನೋಡಲು ರೋಹಿಣಿ ಶಕಟವನ್ನು ಪ್ರವೇಶಮಾಡಿ ಹನ್ನೆರಡೂವರೆವರ್ಷ ತುಂಬುವುದಕ್ಕೆ ಅಲ್ಪ-ಸ್ವಲ್ಪ ದಿವಸಗಳು ಉಳಿದಿದ್ದವು. ಶನಿದೇವನು ಇದನ್ನು ನೋಡಿ, ಉಪಮನ್ಯು ಮಹರ್ಷಿಗಳಿಗೆ ಇಂತೆಂದರು. ಮುನಿದೇವ ನೀವಿನ್ನು ನಡೆಯಿರಿ, ನಾನು ಜಾಗ್ರತೆಯಾಗಿ ಭೂಮಂಡಲಕ್ಕೆ ಬಂದು ಬರ, ಮರಣ, ರೋಗ ಕಷ್ಟ-ನಷ್ಟಗಳಿಗೆ ಗುರಿಯಾಗಿರುವ ರಾಜ-ಪ್ರಜೆಗಳನ್ನು ಕಾಪಾಡುವೆನೆಂದು ಹೇಳಲು, ಉಪಮನ್ಯು ಮಹರ್ಷಿಗಳು ಭೂ-ಲೋಕಕ್ಕೆ

ಬಂದರು. ಶನಿಯು ತನ್ನ ಪೂರ್ವ ತರಂಗವನ್ನು ಯೋಚಿಸಿ ಮಾಂದಾತೃವಿನ ಪತ್ನಿ ಬಿಂದುಮತಿಯನ್ನು ಹಡಗಿನ ಕೋಣೆಯಲ್ಲಿ ಹಾಕಿ ಬೀಗಬಡಿದು ಹಡಗವನ್ನು ಅದೃಶ್ಯವಾಗಿ ಗಂಗಾನದಿ ದಡದಲ್ಲಿ ಕಟ್ಟಿ ಬಂದದ್ದು ಗೋಚರವಾಯಿತು. ಕೂಡಲೇ ಮರ್ತ್ಯಲೋಕಕ್ಕೆ ಬಂದು ಗಂಗಾ ನದಿಯಲ್ಲಿ ನಾವೆಯನ್ನು ನಡೆಸಿಕೊಂಡು ಪೋಗುತ್ತಿರಲು ಇತ್ತ ಅದೇ ಗಂಗಾನದಿ ದಡದಲ್ಲಿ ಹಡಗು ಚಕ್ಕು ಮಾಡುವ ಮಾಂದಾತೃನಿದ್ದ ಸ್ಥಳಕ್ಕೆ ಇಂದ್ರಲೋಕದಿಂದ ದೇವೇಂದ್ರನು ಬಂದು ಏನೆನ್ನು ತಿರ್ದನೆಸೆಂತೆನೆ

## ರಾಗ-ದ್ವಿಪದಿ

ಮಗನೆಕೇಳ್ಮಾಂದಾತೃ । ಮಿಗಿಲೆನಿಪನೀಸುಖಿಪೇ । ಕಾಗಿ ವಾಹನ ಶನಿಯ ಕಾಟಬಂದಿಹುದೇ ॥೧॥ ಶನಿಯಕಾಟಮಿಾರಿ । ವಿನಯಸಾಧಿಸಿದ ಮೂ । ಇನ್ನಿಲ್ಲ ಜಗದೊಳು ಮಗನೆಕೇಳೆಂದಾ ॥೨॥ ಕಾಟದೊಳು ಶನಿಕಾಟ ನೀಟನೊಳು ದ್ವಿಪಾಂತ್ರ । ಸುಟ್ಟು ಸುಡುಗಾಡನ್ನು ಇನ್ನು ಹೋಲುವವೂ। ಆರುದಾಯುರಗಂಡ। ಮೂರುರಾಯರಮಿಂಡ। ಧರೆಯೊಳು ವಿಧಿಯಿಂದ ಬಿರುದಹಿಂ ತೆಗೆದು ॥೪॥ ನನ್ನದ ನನಗಿನ್ನು । ಹಿಂತೆಗೆದುಕೊಡುನೀನು । ನಾನು ತಪ್ಪೆನ್ನುವೀ ಭಾನುಶನಿಗಿನ್ನೂ ॥೫॥ ಮಾನವರ ಲೋಕದಲಿ । ಶನಿಮಾಯ ತಿಳಿಲಿನ್ನು । ಎನುತಕೊಟ್ಟೆನು ಬಿರುದಾ ತಿಳಿಯೆಂದ ಇಂದ್ರಾ ॥೬॥ ಹಣದ ಗರ್ವವು ಮುಸುಕಿ । ಕೆಣಕುವರು ದುರ್ಘಟವಾ । ತ್ರಾಣನೋಡಲಿ ಶನಿಯು ಹಣದ ಅಣ್ಣಾಗಳೂ ॥೭॥

ವಚನ॥ ಈ ಪ್ರಕಾರವಾಗಿ ಮಾಂದಾತೃ ಚಕ್ರವರ್ತಿಗೆ ದೇವೇಂದ್ರನು ಶನಿ ವಿವರವನ್ನು ಹೇಳಿದನಂತರ ಮಾಂದಾತೃ ಏನೆನ್ನುತಿರ್ದನಪೆಂತೆನೆ.

## ರಾಗ-ತ್ರಿಹುಡಿ.

ಪೊಳ್ಳುಬಿರುದನು ಕೊಟ್ಟುಯೆಮಗೇ। ಜೊಳ್ಳುಮಾಡಿದೆದೇವ ಇಂದ್ರನೆ। ಖೂಳಶನಿಕಾಟವನು ನೋಡುವೆ । ಇನ್ನು ಜಗದೊಳಗೆ ॥೧॥ ಪತ್ನಿಪುತ್ರರ ಕಳೆಮುಯೆನ್ನಯ । ಆತ್ಮ ಕೈಕಾಲುಗಳ ಕಡಿಸಿದ । ಮತ್ತೆಕಳ್ಳನುಎಂದುಘೋಷಿಸಿ ಹಿಂಸೆ ತಾಕೊಟ್ಟ ॥೨॥ ತರಳನಾಡಿದಮಾತಕೇಳೀ । ಸುರರಪಡೆಯನ ಮತ್ತೆ ನುಡಿವನು । ಪದುಪನೆಕೇಳಿನ್ನು ಜಗದಲಿಸತ್ಯಸ್ಥಾಪನೆಗೆ ॥೩॥ ಕ್ರೂರ

ವೈರವಸುರರು ಪಿಳಿಯಿಸಿ | ನರರು ಸುರಪೂಜೆಯನುಗೊಳ್ಳುವ | ಸಾರತರಶ್ರೀ
ಜ್ಞಾನಯಜ್ಞದಸವಿಯನೋಂಬುವರು ||೪|| ಸರಿಯೆಸುರರಿಗೆ ನರರುಮರ್ತ್ಯದಿ
ಸರಿಸಿ ಅಗ್ನಿಗೆ ಹವಿಸುಕಡ್ಡಿಯು | ಸರಿಯೆ ಸಿಂಹಕೆ ಆನೆಯೆಂಬುವನು | ಇಂದ್ರ
ತಾನಾಗ ||೫|| ದೇವರಿಗೆ ಹಿರಬಾಗಿ ನಡೆದರೆ | ಅವಕಾಲಕೆ ದುಃಖಬಾರದು
ಭುವನಪತಿಸೇವಾಡು ದೇವರ | ಧ್ಯಾನಚಿತ್ತದಲೀ ||೬|| ಇಂದ್ರ ಪೇಳಿದನುಡಿ
ಯಲಾಲಿಸಿ | ಚಂದದಿಂ ಮಾಂದಾತೃರಾಜನು | ಬಂದತಂದಾಬಿರದು ಬಾವಲಿ|
ಇಂದ್ರನಿಗೆ ಕೊಟ್ಟ ||೭|| ಸುರನುತೆರಳಿದ ತನ್ನ ಲೋಕಕೆ | ಭರದಿಬಂದಿತು
ಹಡಗ ಅಲ್ಲಿಗೆ | ಪರೀಕ್ಷೆ ಮಾಡಿದ ರಾಜನ ರಾಣಿಯು | ತಳದ ಚೀಟಿಯನು || ೮ ||
ಅವಸರದ ರೋಹಿಣಿಯಬೇಧಿಸಿ | ಭುವನಕುರಿತೂಬಲ್ಲವ ಶನಿಯು | ಆವದಿ
ಯುಮುಗಿಯುತ್ತಾಲಿದ್ದಿತು | ಚೀಟಿಇರಲಿಲ್ಲಾ ||೯|| ಹಡಗನೋಡುತದುಡಿಕಿ
ಮುಂದಕೆ | ಹುಡಿಕಿನೋಡಿದ ರಾಣಿಕೋಣೆಯು | ದಡಬಡಿಸಿ ಹಿಡಿದಿದ್ದು ಬಿ
ದ್ದಿತು ಬೀಗತಾ ಕೆಳಗೆ || ೧೦ || ಕದವತೆರೆದೂ ಬಿಂದುಮತಿಯೂ | ಚಂದ
ಗಂಡನ ಮುಖವನೋಡಲು | ಬಂದಕಷ್ಟವರೋಗ ಹೋಯಿತು ರಾಣೀಗೆ
ಆಗಾ ||೧೧|| ಜಯತುಜಯ ಮಾಂದಾತೃಭೂಪನೆ | ಜಯತುಸತಿಜ್ಯೆಜಯ
ತು ಶನಿಗೇ|ಜಯತು ಎನ್ನುತ ಬಂದುಪಾದಕೆ ನಮಿಸಿದಳು ಆಗಾ ||೧೨|| ಕಾಲು
ಕೈಯ್ಯುಗಳ ಕೊಟ್ಟ ಶನಿಯು| ಮೇಲಿರು ನಮಸ್ತೆಂದು ಅಂದನು| ಬಾಲೆಬಂದಳು
ಪುಷ್ಪಮಂಜರಿ ಅಲ್ಲಿಗೇ ತಾನೂ || ೧೩ || ಗಂಡಹೆಂಡರು ಕೂಡಿಕೊಂಡು |
ಚಂಡಶನಿಪಾದಕ್ಕೆ ನಮಿಸಲು | ಪುಂಡರೀಕಾಕ್ಷನ ಮಡದಿಯು | ಕಂಡುತಾ
ನಿನ್ನು || ೧೪ || ಚಂಡಶನಿಯಾಪ್ರಂಡುಗಾರಿಕೆ | ಗಂಡುಗಲಿ ಮಾಂದಾತೃ
ಕಳೆದನು | ಮಂಡಲೀಕರು ತಿಳಿದುಕೊಳ್ಳಲಿಯೆಂದು ತಾವುಗಳು || ೧೫ ||
ಮಾಡಿಮರ್ತ್ಯದಿ ತೋರಿಕೊಟ್ಟವು ರೂಢಿಯೊಳು ಜನ ತಿಳಿದುಕೊಳ್ಳಲಿ |
ಹಡಗಪಡೆಯಲಿ ಕುಳಿತುಕೊಂಡು ಹೇಳಿದರು ತಾವೂ || ೧೬ ||

**ವಚನ**|| ಈ ಪ್ರಕಾರವಾಗಿ ಮಾಂದಾತೃಮಹಾರಾಜ ಅವನ ಹಿರಿಯ ಪತ್ನಿ ಬಿಂದುಮತಿದೇವಿ, ಕಿರಿಪತ್ನಿ ಪುಷ್ಪಮಂಜರಿದೇವಿ, ಶನಿದೇವರು ಶ್ರೀ ಲಕ್ಷ್ಮಿಯು ಹಡಗಪಡೆಯಲ್ಲಿ ಕೂಡಿರುವ ವೇಳೆಗೆ, ಇತ್ತಲಾ ಉಪಮನ್ಯು ಮಹರ್ಷಿಗಳು ಗೊಲ್ಲರ ಪಾಳೆಯದಿಂದ ಅಂಬರೀಷ ಮತ್ತು

ಪುರುಕುತ್ಸವರೆಂಬ ಮಾಂದಾತೃವಿನ ಮಕ್ಕಳನ್ನೂ ಹಾಗೂ ಅವರನ್ನು ಸಾಕಿದ ಗೊಲ್ಲರ ಮುದುಕಿಯನ್ನು ಕರೆದುಕೊಂಡು ಕಾಶೀಪಟ್ಟಣದ ಗಂಗಾನದಿ ಮಾಂದಾತೃಘಾಟಿಗೆ ಬಂದಕೂಡಲೇ ಸತಿ-ಪತಿಪುತ್ರರು ಪರಸ್ಪರ ವಿಶ್ವಾಸದಿಂದ ತಬ್ಬಿಕೊಂಡು ಸಂತೋಷಿಸುತ್ತಿರುವ ಸಮಯಕ್ಕೆ ಕಾಶೀವಾಸುಮತಿರಾಜನು ಪತ್ನಿ ಸಮೇತ ಈ ವಾರ್ತೆಯನ್ನು ಕೇಳಿ ಅಲ್ಲಿಗೆ ಬಂದು ಮಗಳು ಅಳಿಯನನ್ನು ಕಂಡು ಸಂತೋಷಪಡುತ್ತಿರುವಲ್ಲಿ ಮಹಾಂದಾತನ ಧಾತ್ರಿಪಟ್ಟಣದ ಪರಿಚಾರಕರು ತಮ್ಮ ರಾಜನನ್ನು ಹುಡುಕುತ್ತಾ ಅಲ್ಲಿಗೆಬಂದರು. ಈ ಸುಸಮಯಕ್ಕೆ ಸರಿಯಾಗಿ ಕಾಶೀಪಟ್ಟಣದ ಧರ್ಮದಾತಮಹಾಂದಾತನ ಸಾಕಿದಂತಹಧನಪಾಲಶೆಟ್ಟಿಯು ಬಂದನು. ಈ ವೈಭವವನ್ನು ದೇವಲೋಕದಲ್ಲಿ ನಾರದ ಮಹರ್ಷಿಗಳು ಕಂಡು ಕಾಶೀಪಟ್ಟಣದ ಮಹಾಂದಾತಘಾಟಿಗೆ ಬಂದರವೆಂತೆನೆ.

### ರಾಗ–ಏಕತಾಳ

ಋಷಿರಾಜನಾರದ | ಕುಷಿಯಾಗಿ ಬಂದನು | ತೃಷಿಯುಳ್ಳ ಶನಿಕಾಟ ಹರಿಸಲು ತಾನು ||೧|| ಸಿರಿ-ಶನಿ ನೋಡಿದರು | ನಾರದಗೆ ವಂದಿಸಿ | ಪರಿಹರಿಸುನಮ್ಮನ್ಯಾಯ | ಯೆಂದುಕೇಳಿದರೂ ||೨|| ಭಾರಿಬಳಗವನೋಡಿ | ಹರುಷತಾಳಿದ ಮುನಿಯು | ಹರಸಿಆಶೀರ್ವಾದ ಕೊಟ್ಟ ಆ ಜನಕೇ || ೩ ||

**ವಚನ||** ಈ ಪ್ರಕಾರವಾಗಿ ನಾರದ ಮುನಿಗಳು ಬಂದದ್ದನ್ನು ನೋಡಿ ಸರ್ವರೂ ಆನಂದದಿಂದ ಅಭಿವಂದಿಸಿದ ತರುವಾಯ ಶನಿ-ಲಕ್ಷ್ಮಿಯರು ತಮ್ಮ ತಮ್ಮ ನ್ಯಾಯವನ್ನು ಬಗೆಹರಿಸಿ ಹೋಗಬೇಕೆಂದು ಕೇಳಲು ಸರ್ವ ಸಭಾಸ್ಥಾನದಲ್ಲಿ ನಾರದ ಮಹರ್ಷಿಗಳು ಅಗ್ರಸ್ಥಾನವನ್ನುವಹಿಸಿ ಶೀಘ್ರದಲ್ಲಿ ಅವರ ನ್ಯಾಯವನ್ನು ಬಗೆಹರಿಸುತಿರ್ದರವೆಂತೆನೆ

### ರಾಗ—ಅಟತಾಳ

ಗರ್ವತರಿಸುವ ಲಕ್ಷ್ಮೀದೇವಿಯು | ಗರ್ವಕಳೆಯುವ ಶನಿಯುದೇವನು| ಸರ್ವಕಾಲದಿಯಿದ್ದು ಧರೆಯನು | ಪಾಲಿಪ್ಪುದು ನೀವೂ || ೧ || ಹಗಲು ರಾತ್ರಿಗಳಿರುವಪರಿಯಲಿ | ಜಗದಿನಿಮ್ಮಯ ಸರಿಸಮಾನವು | ಕಾಗಿವಾಹನ ಬಂದ

ನೆಂದರೆ ಲಕ್ಷ್ಮಿ ನೀ ತೊಲಗು ॥೨॥ ಲಕ್ಷ್ಮಿ ಬಂದವಳು ನೆಂದ ಕೂಡ | ತಕ್ಷಣವೆ ನೀ ಹೊರಡು ಎಂದನೆ | ಪಕ್ಷದೀ ನೀ ಉಭಯರೊಂದೇ | ಸ್ಥಳದಿ ಇರಬ್ಯಾಡೀ ॥ ೩ ॥ ಪೂರ್ಣರು ಗರ್ವಿಷ್ಟರಾಗಲು | ಶನಿಯು ಗರ್ವವಹರಿಸಿ ಧರ್ಮವ ಮನಕೆ ಸಾಕ್ಷಿಯು ಮಾಡಿ ಜಗದೊಳು | ನಡೆಯಬೇಕೆಂದಾ ॥ ೪ ॥ ಒಂದು ಬಗೆಯಲಿ ಪೂರ್ವಕರ್ಮವ | ಒಂದು ಬಗೆಯಲಿ ಇಹದ ಕರ್ಮವ | ಸಂದು ಗೊಡವೆ ಕಾಟಕೊಡು ಶನಿ | ಧಾತ್ರಿಯ ಜನಕೇ ॥ ೫ ॥ ದುಡಿದು ಧರೆಯನು ಸೇವೆ ಮಾಡುವ | ಬಡವನಾದರು ಲಕ್ಷ್ಮಿ ಆಪನಿಗೆ | ಬಿಡದೆ ವಲಿಯುವುದೆಂದ ನಾರದ ಅಲ್ಲಿ ತಾನಿನ್ನೂ ॥ ೬ ॥

**ವಚನ**॥ ಈ ಪ್ರಕಾರವಾಗಿ ನಾರದಮಹರ್ಷಿಯು ಶನಿ-ಲಕ್ಷ್ಮಿಯರ ನ್ಯಾಯವನ್ನು ಬಗೆಹರಿಸಿ ಇನ್ನುಳಿದ ರಾಜಪ್ರಜರನ್ನು ಕುರಿತು ಏನನ್ನುತಿರ್ದನದೆಂತೆನೆ.

ರಾಗ—ಝಂಪೆ

ದೇವದೇವರದೇವ || ದೇವಸೃಷ್ಟಿಕರ್ತ | ನವಗ್ರಹಾಸೂತ್ರದಲಿ | ಭುವನಪಾಲಿಪನೂ ॥೧॥ ಕಾಟಕರ್ಮವು ರೋಗ | ಮಾಟ ಮದ್ದು ವೈರ | ಕುಟಿಲತನ ಬಿಳಿವಾಗ | ದಿಟವು ಗ್ರಹಪೂಜೇ ॥೨॥ ರವಿಚಂದ್ರಕುಜಬುಧರ | ಹವ್ಯಕವ್ಯದ ಗುರುವು | ದಿವ ಮಾನಿಯುಶಿತನು | ರಾಹು ಕೇತುಗಳೂ ॥೩॥ ನವಗ್ರಹಮಂಡಲದಿ| ಶಿವನಪೂಜಿಸುನವಗೇ| ಭುವನದಾರಿದ್ರ ಗಳು| ತೊಲಗಿ ಹೋಗುವವು ॥ ೪ ॥ ಮಾಂಧಾತ್ರ ಮಹಾರಾಜಾ | ಇಂದು ನೀ ಪ್ರೋಗಿನ್ನು| ಸಾಂದ್ರಾಪ್ಯೈಭವದಿಂದ| ಗ್ರಹಪೂಜೆಮಾಡು ॥ ೫ ॥ ಯಾರು ಈ ಚರಿತೆಯನೂ ಹರಸಿ ಓದುವರವರೂ | ಧರೆಯಲ್ಲಿ ಸುಖವಾಗಿ | ಬಾಳುವರು ಎಂದಾ ॥ ೬ ॥

**ವಚನ**॥ ಈ ಪ್ರಕಾರವಾಗಿ ನಾರದಮುನಿಗಳು ಶನಿಸಮೇತ, ಗ್ರಹಮಂಡಲ ಪೂಜಾ ಮಹಿಮೆಯನ್ನು ಹೇಳಲು, ನೆರೆದಿದ್ದ ರಾಜಪ್ರಜೆರೆಲ್ಲರು, ಶನಿ ನಾರದ ಮತ್ತು ಲಕ್ಷ್ಮೀಯರಿಗೆ ನಮಸ್ಕಾರವಂಮಾಡಿ ಕ್ಷಮೆ ಬೇಡಲು ಈ ಮೂವರೂ ಅಂತರಿಕ್ಷದಲ್ಲಿ ಅದೃಶ್ಯರಾಗಿಹೋದರು. ತರುವಾಯ ಮಾಂಧಾತ್ರ ಚಕ್ರವರ್ತಿಯ ಸಾಮಂತ ರಾಜನಾದ ಕಾಶೀನಗರದ ವಸುಮತಿರಾಜನು ಬಂದು ತನ್ನ ಅಪರಾಧ ಕ್ಷಮೆಯನ್ನು ಬೇಡಲು ಚಕ್ರವರ್ತಿ ಏನೆನ್ನುತಿರ್ದನದೆಂತೆನೆ.

### ರಾಗ—ಏಕತಾಳ

ಯಾರೇನುಮಾಡಿಲ್ಲ | ಯಾರು ವೈರಿಗಳಿಲ್ಲ | ಮೀರಿದ ಶನಿಕಾಟ | ಬಂದೀತುಯೆನಗೇ | ಸಾಮಂತರಾಜರೇ | ಸುಮ್ಮನೆ ರಾಜ್ಯವ ಉಮ್ಮಯದಿಮಾಳುತ್ತ | ಇರುವದು ಸೇವು ||೩|| ಹೆದರಿಕೆ ಬಿದರಿಕೆ | ಮಾಂಪಾತ್ರ ಮಾಡಸು | ಏಧಿಪರಿತ ರಾಜ್ಯವ | ಪಾಲಿಸಿರಿ ಸೇವು ||೪|| ವಾಮವಸುಮತಿ ರಾಜ | ನೋವಹೇಳಲುಬೇಡ | ಭುವನಾದಿ ನಿನ್ನಯ | ಆಳಿಯೆನಾನಾದೆ | ನನ್ನ ನಗರದಜನಕೆ | ಇನ್ನು ಮುತುಕಿದ ನಿನಗೆ | ಚಿನ್ನುಬಸುರೆನ್ನುತ | ನಂಬಿ ಕೊಂಡಿರುವೆ ||೫||

**ವಚನ**|| ಈ ಪ್ರಕಾರವಾಗಿ ಮಹಾಂದಾತ ಚಕ್ರವರ್ತಿಯು ಸರ್ವರನ್ನು ದ್ವೇಶಿಸಿ ಹೇಳುತ್ತಾ, ಆದಿದೇವನಾದ ಕಾಶಿ ವಿಶ್ವನಾಥನ ದರ್ಶನಕ್ಕೆ ಪೋದನೆಂದು ಧೌಮ್ಯಋಷಿಗಳು ಧರ್ಮರಾಜನಿಗೆ ಹೇಳಿದ ಸಂವಾದವನ್ನೆ ಕಲಿಯುಗದಲ್ಲಿ ಶನಿಪರಾಯಣಮಾಡುವ ದೇವಣ್ಣಾದಿ ಋತ್ವಿಜರು ವಿಧಿಮಹಿಮೆಯನ್ನು ಏನೆಂದು ಕೊಂಡಾಡುತಿರ್ದರೆಂತೆನೆ. -

### ರಾಗ–ಜಂಪೆತಾಳ

ಪೂರ್ವಾರ್ಜಿತಂಗಳನು ಮೀರಿಬಾಳುವರಾರು |
ಪಾರ್ವತಿರಮಣಭಿಕ್ಷವಬೇಡಿ ತಿರಿದುಂಡ |
ಗೀರ್ವಾಣಋಷಿಸುರರಬಿಡದೆ ಕಾಡುವವಿಧಿ ಯಾವದೇವರು
ಗೆಲ್ವರೈಯ್ಯ ಹರಿಹರಅಜದೇವಾ ||೧||

ಹರಿಯು ಅವತಾರಗಳ ಬಲುವಾಗಿ ಎತ್ತಿದನು |
ಸರಸಿಜೋದ್ಭವ ಶಿರವಪೋಗಾಡಿಕೊಂಡನು |
ಸುರಪತಿಗೆ ಶಾಪದಿಂ ಯೋನಿಮಯ ದುಮು ದೇಹ ಶರಧಿಯನು
ಋಷಿನುಂಗಿದಾ ಹರಿಹರಾಜಜದೇವಾ ||೨||

ಶರಭಾವತಾರಯೋಗದಲಿ ದಕ್ಷನ ಶಿರವೈರದಿಂ ಛೇದಿಸಲುಮಳು |
ಶಿರವ ಪೊತ್ತಿಸಲು ಶರದೋಳೆಚ್ಚನು ಕ್ರಿಷ್ಣನಂಗಾಲ |
ಸಂಹರಿಸಲಾರು ವಿಧಿಯಾ ಹರಿಹರಾ ಅಜದೇವಾ ||೩||

ನಾರಾಯಣನವಾಹನಕೆ ನಾಸಿಕವುಡೊಂಕಾಯ್ತು ।
ನಾರದಾಋಷಿಯು ಸ್ತ್ರೀಜನ್ಮಗಳನೆತ್ತಿ ತೊಳಲಿದನು ।
ಮಾರುತನತನಯ ಬಾಲವನುಡಿಸಿಕೊಂಡನು ।
ನಾರೇರಿಗೊಳಗಾದ ಶೃಂಗಮುನಿಯೂ ಹರಿಹರಾತ್ಮಜದೇವಾ ॥ ೪ ॥

ಹೋಮವನುಬಲುಮಾಡಿ ಸರ್ಪನಾದನುನಹುಷ ।
ನೇಮಧರ್ಮಜರಾಯ ಕಂಕನಾದನು ।
ಭೀಮಬಾಣಸಿಯಾದ ಪಾರ್ಥ ಹೆಣ್ಣಾದನೂ ।
ಆಮಹಾಸಹದೇವ ತುರುಗರಕ್ಷಕರಾದರೂ ಹರಿಹರಾತ್ಮಜದೇವಾ ॥ ೫ ॥

ಭೂಮಿಜೆಯುಸಹಿತ ಶ್ರೀರಾಮವನದೊಳಗಿತ್ತ ।
ಕಾಮಿಸಿ ಸೀತೆಯನು ರಾವಣನು ಕೊಂಡೊಯ್ಯೆ ।
ವಾಮನಾವತಾರದಲಿ । ಬಲಿಗೆ ಬಂಧನವಾಯ್ತು ।
ನಿರ್ಧೂಮವಾದನು ವಾಲಿಯೂ ಹರಿಹರಾತ್ಮಜದೇವಾ ॥ ೬ ॥

ಪ್ರಾಣವನು ಯೋಗಾಡಿಕೊಂಡನಾಗಾರ್ಜುನನು ।
ವೇಣಾಂಕವೀರದೊಳು ಶ್ರೀಹರಿಗಳೊಪ್ಪಿದುವು ।
ಕ್ಷೋಣಿಯೊಳುಮಾಂಡವ್ಯ ಶೂಲವನು ಯೇರಿದನು ।
ಕಾಣಬಾರದನಯನ ಧೃತರಾಷ್ಟ್ರಗೇ ಹರಿಹರಾತ್ಮಜದೇವಾ ॥ ೭ ॥

ಸ್ಮಶಾನವನು ಕಾಯ್ದ ಹರಿಶ್ಚಂದ್ರ ಚಂದ್ರಾವತಿಯು ।
ಶಿಶುಸಹಿತ ಕಾಲಕೌಶಿಕಗೆ ತೊತ್ತಾದಳೂ ।
ಪಶುಪತಿಯ ಉರಿಗಣ್ಣಿನೋಳ್ ಭಸ್ಮವಾದನುಮದನು ।
ವಸುದೇವಸತಿಸಹಿತ ಸೆರೆಯೊಳಿರ್ದ ಹರಿಹರಾತ್ಮಜದೇವಾ ॥ ೮ ॥

ಮಕಳಿಗಜವಂಗಿಯನು ಹಿಡಿದು ಬಲು ಬಾಧಿಸಲು ।
ಶಶಿಧರನಸತಿ ಸಹಸ್ರಜನ್ಮಗಳನೆತ್ತಿ ತೊಳಲಿದಳು ಆಮಹಾ ।
ಋಷಿಸುತಗೆ ಮದುವೆಯಿಲ್ಲದೆಹೋಯ್ತು ।
ಶಶಿಗೆಸ್ವೈರದಿರಾಹುತುಡುಕಿತಾಕ್ಷಣದಿ ಹರಿಹರಾತ್ಮಜದೇವಾ ॥ ೯ ॥

ನಾಗಪತಿತನಯ ಭರದಿರಥಿಯುಪ್ರೋಕ್ಷ ।
ಆಗ ಜೌವನದಿ ಬಹುಕಾಲನಿಗ್ರಹಿಸಿದಳು ।

ಮೃಗಮದಹೀಂಟೆಯಬಲಿಗೆ ಸಿಕ್ಕಿದಳು ದಮಯಂತಿ ।
ಅಜ್ಞಾತವಾದ ನಳನೂ ಹರಿಹರಾತ್ಮಜದೇವಾ ॥೧೦॥
ಕೂಸಸರಳಮಂಚದೊಳ್ ಮಲಗಿದನು ಭೀಷ್ಮನು ।
ಹುಸಿಯುದೂರ್ವಾಸನಿಗೆ ಅಪನಿಂದ್ಯಬರಬಹುದೆ ।
ಅಶನವಸನಗಳಿಂದಬಳಲಿದನು ಯಮತನೂಜನು ।
ವಸುಧೆಯೊಳು ಅಹಲ್ಯೆಶಿಲೆಯಾದಳು ಹರಿಹರಾತ್ಮಜದೇವಾ ॥೧೧॥
ಘಾತಕನು ದುಶ್ಯಾಸನೃಪಾತ್ಮಜೆಯನೆಳೆದ ।
ಸೀತೆಗೋಸ್ಕರವಾಗಿ ರಾವಣನು ಹತನಾದ ।
ಕಾತುರದಿದ್ರೌಪದಿಗೆಅಳುಪಿ ಕೀಚಕನಳಿದ ।
ಮಾತೆಯಶಿರವರಿದಾಪರಶುರಾಮಾ ಹರಿಹರಾತ್ಮಜದೇವಾ ॥೧೨॥
ರೇಣುಕಾದೇವಿ ಅರಸನಕೊರಳಕೊಯ್ಸಿದಳು।
ತಪ್ರಣವಿಲ್ಲದೆಸರು ನಾವ್ಯಗ ಕಟ್ಟಿನೊಳಗಾಯ್ತು ।
ದ್ರೋಣಸುರ ವ್ಯಾಧಿಯಲಿ ಬಹುಕಷ್ಟಪಟ್ಟ ಹರಿಹರಾತ್ಮಜದೇವಾ ॥೧೩॥

ವಚನ॥ ಮಹೇಂದ್ರಾತ ಚಕ್ರವರ್ತಿಯು, ಪತ್ನಿ-ಪುತ್ರ ಬಂಧು-ಬಾಂಧವ ಭಾದಿಯಾಗಿ ಇಷ್ಟಮಿತ್ರರೊಡನೆ ಕಾಶಿ ವಿಶ್ವನಾಥನನ್ನು ಭಜಿಸಿ ತನ್ನ ಮಾವ ವಸುಮತಿರಾಜನ ಅರಮನೆಗೆ ಹೋಗಿ ಕೆಲವು ದಿನಗಳಿದ್ದು, ಕಾಶಿಗೆ ಉತ್ತರಕ್ಕಿರುವ ಕೇದಾರಖಂಡದಲ್ಲಿನ ತನ್ನ ರಾಜಧಾನಿಯಾದ ಧಾತ್ರಿ ಪಟ್ಟಣವಂ ಕುರಿತು ಸಕಲವೈಭವದಿಂದ ತೆರಳುತಿರ್ದನದೆಂತೆನೆ.

## ರಾಗ-ತ್ರಿವುಡೆ

ತನ್ನ ದೇಶವ ಕುರಿತುಹೊರಟನು । ಇನ್ನು ಮಹೇಂದ್ರಾತಾದಿರಾಜನು । ಮುನಿಯು ಮದಮತಿಯು ಸತಿಯು. ಪುತ್ರರ ಕೂಡಿತಾನಿನ್ನೂ ।೧। ಧನಕನಕ ಧನಪಾಲಿಸಿಟ್ಟಯ । ವಿನಯಕೇಳುತ ಹೊರಟನಾಗಲೆ । ಕನಕಗಜತುರಗಾದಿಕೊಟ್ಟನು । ಕಾಶಿತಲರಾಜ ।೨। ಅಳಿಯ ಮಗಳಿಗೆ ಬಳಲಿಕೊಟ್ಟನು । ಇಳೆಯಪಾಲಕ ಕಾಶಿರಾಜನು । ಹೊಳಪಿನಿಂತಾ ಹೊರಟ ಮುಂದಕೆ । ರಾಜಪುತ್ರರದಕೇ ।೩। ಧಾತ್ರಿಪುರಪೂಬಂದಿತಾಗಲೆ । ಧಾತ್ರಿಜನರೂ ನೆರೆದು

ನಂತರು । ಶ್ರೋತ್ರಿಯರೊಡಗೂಡಿ ಅರಮನೆ । ರಾಜ ಸೇರಿದನು ॥ ೪ ॥
ಶಾಸ್ತ್ರರ ನವಗ್ರಹಪೂಜೆಮಾಡಲು । ಊರಪುರೋಹಿತರ ಕರೆಸಿದ । ದೊಡೆ ನವ
ಗ್ರಹ ಪೂಜಾಕೈಂಕರ್ಯಗಳು । ಸುರುವು ಮಾಡಿದನು ॥ ೫ ॥

## ಭಾಮಿನೀ ಪದ್ಯ

ಯಾರು ರೋಹಿಣಿ ಶಕಟ ಶನಿಯ । ಪಾರಾಯಣವ ಮಾಡಲು ।
ಘೋರ ಕಂಟಕ ಹರಿದು ಅವರಿಗೆ ಸುಖವು ಲಭಿಸುವದು ॥
ಮೆರೆವ ದ್ಯಾಮಾನಹಳ್ಳಿ ಪುರವರ । ಊರಗಧರತಾ ಬ್ರಹ್ಮಲಿಂಗನ ।
ಸ್ಮರಿಸಿ ಲಿಖಿಸಿದ ಶೀವಣ್ಣಾಕವಿ ಶನಿಯ ಮಹಿಮೆಯನು ॥ ೧ ॥

ಇತಿ ಹರಿಹರಪರ ಪರಾಯಣಪಯಃ ಪಾರಾವಾರಾರಾಕಾ ಸುಧಾಕರಾಯ
ಮಾನ ದ್ಯಾಮಾನಹಳ್ಳಿ ಬ್ರಹ್ಮತೀರ್ಥಾಶ್ರಮನಿವಾಸಿಗಳಾದ ಜ್ಯೋತಿಷ
ರಮಲ ದೈವಜ್ಞ ಕವಿ ಪಂಡಿತ ಶ್ರೀ ಶೀವಣ್ಣಯೋಗೀ ಕೃತ
ರೋಹಿಣಿ-ಶಕಟ ಶನಿಮಹಾಪುರಾಣದಲ್ಲಿ ತೃತಿಯ ಸಂಧಿ
ಪರಿ ಸಮಾಪ್ತಾಯಾಂ. ಶ್ರೀ ಶ್ರೀ ಶ್ರೀ

ಅಂತು ಸಂಧಿ ೩ಕ್ಕಂ ಪದನೂ ೧೫೩ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

## ನಾಲ್ಕನೇ ಸಂಧಿ ಪ್ರಾರಂಭಃ

ಪೀಟಿಕಾ ಪದ್ಯ॥ ಜಯನಮೋ ಜಗದಾದಿದೇವನೆ ।
ಜಯನಮೋ ಸುರವೃಂದವಂದ್ಯನೇ ।
ಜಯನಮೋ ಶನಿದೇವಪಾಲಿಸು ಎನ್ನ ಈ ಜಗದೀ
ಜಯನಮೋ ಜಯುಗರ್ವಮರ್ದನ ।
ಜಯನಮೋ ದುರಿತಾದಿಭಾಸ್ಕರ ।
ಜಯನಮೋ ಜಗಶಿಕ್ಷರಕ್ಷಕ ಜಯತುಶನಿದೇವಾ॥

ವಚನ॥ ಇಂತೆಂದು ಮಹಾಂದಾತ ಚಕ್ರವರ್ತಿಯು ನವಗ್ರಹಪೂಜೆಯನ್ನು ಮಾಡಿಸುತಿರ್ದನದೆಂತೆನೆ. [ ನವಗ್ರಹಮಂಡಲವನ್ನು ರಂಗೋಲಿ ಹಿಟ್ಟಿನಿಂದ ನೆಲಸಾರಣೆಮಾಡಿದ ನೆಲದಲ್ಲಿ ಈ ಕೆಳಗಿನಂತೆ ಮಂಡಲ ವನ್ನು ರಚಿಸಿ ಆಯಾಯ ಗ್ರಹಗಳನ್ನು ಪೂಜಿಸಿ ದಾನ-ಧರ್ಮಗಳನ್ನು ಕೊಟ್ಟಲ್ಲಿ ನರರಿಗೆ ಬಂದ ಯಾವ ಕಾಟನಾದರೂ ತಪ್ಪಿಹೋಗುವದು.]

# ನವಗ್ರಹಾ ಪೂಜಾ ಸಂಕಲ್ಪವು

○○

ಆಚಮ್ಯುಃ ಪ್ರಣವಸ್ಯ ಪರಬ್ರಹ್ಮಋಷಿಃ ಪರಮಾತ್ಮದೇವತಾ ದೈವೀಗಾಯಿತ್ರಿ ಛಂದಃಪ್ರಾಣಾಯಾಮೇ ವಿನಿಯೋಗಃ ಓಂ ಭೂಃ ಓಂಭುವಃ ಓಂ ಸುವಃ ಓಂಮಹಃ ಓಂಜನಃ ಓಂತಪಃ ಓಂಸತ್ಯಂ ಓಂತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹಿಃ ಧಿಯೋಯೋನಃ ಪ್ರಚೋದಯಾತ್ ಓಂಮಾಪು ಜೋತಿ ರಸೋಅಮೃತಂ ಬ್ರಹ್ಮ ಭೂರ್ಭುವಸ್ಸುವರೋಂಶುಭತಿಥೌ ಶೋಭನೆ ಮುಹೂರ್ತೇ ಆದ್ಯಬ್ರಹ್ಮಣಃ ದ್ವಿತೀಯ ಪರಾರ್ಧೇಶ್ವೇತವರಾಹಾ ಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬುದ್ವೀಪೆ ಭರತ ವರ್ಷೇ ಭರತಖಂಡೇ ದಂಡಕಾರಣ್ಯೇ ಗೋದಾವರ್ಯಾಃ ದಕ್ಷಿಣೇತೀರೇ ಶಾಲಿವಾಹನ ಶಕ ಬೌದ್ಧಾವತಾರೇ ರಾಮಕ್ಷೇತ್ರೇ ಅಸ್ಮಿನ್ ವರ್ತಮಾನೇ ವ್ಯವಹಾರಿಕೆ ಚಾಂದ್ರಮಾನೇನ ಪ್ರಭವಾದಿ ಷಷ್ಟಿ ಸಂವತ್ಸರಾಣಾಂ ಮಧ್ಯೆ [ ನಡೆಯುವ ಸಂವತ್ಸರ, ಅಯನ, ಋತು. ಮಾಸ, ಪಕ್ಷ, ತಿಥಿ, ವಾರವಂ ಹೇಳತಕ್ಕದ್ದು ] ಸುಮರೋಗ ಶತೃ ಪಾಪ ಕಂಟಕ ನಿವಾರಣಾರ್ಥಂ ಮಮ ಭಿಷ್ಟ ಫಲಸಿದ್ಧ್ಯರ್ಥ್ಯಂ ಸೂರ್ಯಾದಿ ನವಗ್ರಹ ಪೂಜಾಂಕರಿಷ್ಯತಿಃ ಹೀಗೆ ಸಂಕಲ್ಪವನ್ನು ಹೇಳಿದ ನಂತರ ಸೂರ್ಯಗ್ರಹಾ ಶಾಂತಿಯನ್ನು ಮಾಡತಕ್ಕದ್ದು

●●

## ಸೂರ್ಯಗ್ರಹಾ ಶಾಂತಿ

ಹಿಂದಿನ ಗ್ರಹಾಮಂಡಲ ಚಕ್ರದಲ್ಲಿ ನಡುಮಧ್ಯಕ್ಕೆ ದುಂಡಾಕಾರವಾಗಿ ಗೋಧಿಯಿಂದ ಮಂಡಲವನ್ನು ಹಾಕಿ, ಕೆಂಪುವಸ್ತ್ರ, ಗೋಧಿ, ಭಂಗಾರದ ಚೂರು, ದಕ್ಷಿಣೆ ಚಂದನಗಂಧ, ಕೆಂಪು ಪುಷ್ಪಗಳನ್ನು ಸಮರ್ಪಿಸಿ ನವ ಗ್ರಹಮಂಡಲದಲ್ಲಿನ ರವಿ ಶ್ಲೋಕವನ್ನು ಹೇಳಬೇಕು.

ಶ್ಲೋಕ॥ ವಾಗೀಶಃ ಮಂದ ಭೌಮಶ್ಚ ಘೋರರೂಪೋ ನಿಶಾಕರಃ।
ಬೋಧನಶ್ಚ ಜಗಚ್ಚಕ್ಷು ದೈತ್ಯಪೂಜ್ಯ ವಿದಂಶುದಃ ॥

ಅಥ ರವಿಸ್ತೋತ್ರ.

ಯನ್ಮಂಡಲಂ ದೀಪ್ತಿಕರಂ ರತ್ನಪ್ರಭಂತೀ ವ್ರಮನಾದಿರೂಪಮ | ದಾರಿದ್ರದುಃಖ ಕ್ಷಯಕಾರಣಂಚ ಪುನಾತುಮಾಂತತ್ಸವಿತುರ್ವರೇಣ್ಯಂ ॥೧॥ ಯನ್ಮಂಡಲಂ ದೇವಗಣೈಃ ಸುಪೂಜಿತಂನಿಪ್ರೈಃಸ್ತುತಂಭಾವನಮುಕ್ತಿಕೋವಿದಂ | ತಂದೇವ ದೇವಂ ಪ್ರಣಮಾಮಿ ಸೂರ್ಯಂ ಪುನಾತುಮಾಂತತ್ಸವಿತುರ್ವರೇಣ್ಯಂ॥೨॥ ಯನ್ಮಂಡಲಂಜ್ಞಾನಮಯಂತ್ವಗಮ್ಯಂ ತ್ರೈಲೋಕ್ಯಪೂಜ್ಯಂ ತ್ರಿಗುಣಾತ್ಮರೂಪಂ | ಸಮಸ್ತ ತೇಜೋಮಯದಿವ್ಯರೂಪಂ ಪುನಾತುಮಾಂತತ್ಸವಿತುರ್ವರೇಣ್ಯಂ ॥

ಯನ್ಮಂಡಲಗೂಡಮತಿ ಪ್ರಭೋದಂಧರ್ಮಸ್ಯವೃದ್ಧಿಂ ಕುರುತೇಜನಾನಾಂ ।
ತತ್ಸರ್ವಪಾಪಕ್ಷಯಕಾರಣಂ ಚ ಪುನಾತುಮಾಂತತ್ಸವಿತುರ್ವರೇಣ್ಯಂ ॥ ೪ ॥
ಯನ್ಮಂಡಲಂವ್ಯಾದಿವಿನಾಶದಕ್ಷಂ ಯದ್ರುಗ್ಯಜುಃ ಸಾಮಸುಸಂಪ್ರಗೀತಂ ।
ಪ್ರಕಾಶಿತಂಯೇನಚ ಭೂರ್ಭುವಸ್ವಃ ಪುನಾತುಮಾಂತತ್ಸವಿತುರ್ವರೇಣ್ಯಂ॥
ಯನ್ಮಂಡಲಂ ವೇದವಿದೋವದಂತಿ ಗಾಯಂತಿಯಚಾರಣ ಸಿದ್ಧಸಂಘಾಃ ।
ಯದ್ಯೋಗಿನೋಯೋಗಜುಷಾಂಚಸಂಘಾಃಪುನಾತುಮಾಂತತ್ಸವಿತುರ್ವರೇಣ್ಯಂ
ಯನ್ಮಂಡಲಸರ್ವಜನೇಷು ಪೂಜಿತಂ ಜ್ಯೋತಿಷ್ಯಕುರ್ಯಾದಿಹಮರ್ತ್ಯಲೋಕೇ ।
ಯತ್ಕಾಲಕಾಲಾದಿ ರೂಪಂ ಪುನಾತುಮಾಂ ತತ್ಸವಿತುರ್ವರೇಣ್ಯಂ॥ ೭ ॥
ಯನ್ಮಂಡಲಂವಿಷ್ಣು ಚತುರ್ಮುಖಾಖ್ಯಂಯದಕ್ಷರಂ ಪಾಪಹರಂಜನಾನಾಂ ।

ಯತ್ಕಾಲಕಲ್ಪಕ್ಷಯ ಕಾರಣಾಂಚ ಪ್ರನಾತುಮಾಂ ತತ್ಸವಿತುರ್ವರೇಣ್ಯಂ ॥
ಯನ್ಮಂಡಲಂ ವಿಶ್ವಸೃಜಾಂ ಪ್ರಸಿದ್ಧ ಮುತ್ಪತ್ತಿರಕ್ಷಾಪ್ರಲಯ ಪ್ರಗಲ್ಭಂ ।
ಯಸ್ಮಿನ್‌ಜಗತ್ಸಂಹರತೇಖಿಲಂಚ ಪುನಾತುಮಾಂತತ್ಸವಿತುರ್ವರೇಣ್ಯಂ ॥೯॥
ಯನ್ಮಂಡಲಂ ಸರ್ವಗತಸ್ಯ ವಿಷ್ಣೋರಾತ್ಮಾಪಂಥಾಪುವಿಶುದ್ಧ ತತ್ವಂ ।
ಸೂಕ್ಷ್ಮಾಂತರೈರ್ಯೋಗಪಥಾನುಗಮ್ಯಂಪುನಾತು ಮಾಂತತ್ಸವಿತುರ್ವರೇಣ್ಯಂ ॥೧೦॥ ಯನ್ಮಂಡಲಂ ವೇದವಿದೋಪಗೀತಂ ಯದ್ಯೋಗಿನಾಂ ಯೋಪ ಪಥಾನುಗಮ್ಯಂ । ತತ್ಸರ್ವವೇದಂ ಪ್ರಣಮಾಮಿಸೂರ್ಯಂ ಪುನಾತುಮಾಂತತ್ಸ ವಿತುರ್ವರೇಣ್ಯಂ ॥ ೧೧ ॥ ಮಂಗಲಾಖ್ಯಯಿದಂ ಪುಣ್ಯಂಯಃಪಠೇತ್ಸತಂನರಃ ಸರ್ವಪಾಪವಿಶುದ್ಧಾತ್ಮಾ ಸೂರ್ಯಲೋಕೇ ಮಹಿಯತೇ ॥೧೨॥
ಈ ಪ್ರಕಾರವಾಗಿ ಸ್ತೋತ್ರಮಾಡಿದನಂತರ ಮಂತ್ರನ್ಯಾಸವನ್ನು ಮಾಡಬೇಕು

॥ ಅಥಮಂತ್ರ ॥

ಓಂ ಅಸ್ಯಶ್ರೀ ಸೂರ್ಯಗ್ರಹಮಂತ್ರಸ್ಯ ಹಿರಣ್ಯಸ್ತುಪಾಂಗೀರಸ ಋಷಿಃ ಸೂರ್ಯೋ ದೇವತಾ । ತ್ರಿಷ್ಟುಪ್ ಚಂದಃ ಸೂರ್ಯಮಂತ್ರೇಜಪೇವಿನಿಯೋಗಃ । ಓಂ ಐಂ ಹ್ರೀಂ ಕ್ಲೀಂ ಸಃ ಓಂ ಭೂರ್ಭುವಃ ಸ್ವಃ ಅಥಸೂರ್ಯಮೂಲ ಬೀಜಾ ಕ್ಷರಮಂತ್ರಃ ಓಂ ಸ್ವಃ ಭುವಃ ಭೂ ಓಂ ಸಃ ಕ್ಲೀಂ ಹ್ರೀಂ ಐಂ ಓಂ ಸೂರ್ಯಾ ಯನಮಃ ಹೀಗೆಂದು ತನ್ನ ಶಕ್ತ್ಯಾನುಸಾರ ಜಪವಂ ಮಾಡಿದ ತರುವಾಯ ನವಗ್ರಹಾ ಪೂಜೆ ಮುಗಿದನಂತರ ಮಂತ್ರವಿಸರ್ಜನೆಯಿಂದ ಪೂಜ್ಯರಿಗೆ ಈ ಸೂರ್ಯ ಸಂಬಂಧ ವಸ್ತುಗಳನ್ನು ದಾನಕೊಡತಕ್ಕದ್ದು,

॥ ದಾನಕೊಡುವ ಮಂತ್ರ

ಓಂ ಆಕಷ್ಣೇನರಜಸಾವರ್ತಮಾನೋ ನಿವೇಶಯನ್ನ ಮೃತಂ ಮ ರ್ತ್ಯಂಚ ಹಿರಣ್ಯಯೇನ ಸವಿತಾರಥೇನಾದೇವೋಜ್ಯಾತಿ ಭುವನಾದಿ ಪಶ್ಯ ಹೀಗೆಂದು ಹೇಳಿ ಎತ್ತಿ ದಾನವನ್ನು ಕೊಟ್ಟರೂ ಸರಿಯೇ, ಇಲ್ಲವೆ ದಾನ ತೆಗೆದುಕೊಳ್ಳುವವರು ಇಲ್ಲದಿದ್ದರೆ ಪುಟ್ಟಿಗಾದರೂ ಬಳಿದು ತುಂಬಬೇಕು.

## ಚಂದ್ರಗ್ರಹಾಶಾಂತಿ

ನವಗ್ರಹಮಂಡಲ ಚಕ್ರದ ಅಗ್ನಿದಿಕ್ಕಿನಲ್ಲಿ ಚೌಕಾಕಾರವಾಗಿ ಅಕ್ಕಿಯಿಂದ ಮಂಡಲವನ್ನು ಹಾಕಿ ಬಿಳೀವಸ್ತ್ರ, ಅಕ್ಕಿ, ಬೆಳ್ಳಿಚೂರು, ಮುತ್ತುಗದ ಪುಷ್ಪ

ವನ್ನು ಸಮರ್ಪಿಸಿ, ನವಗ್ರಹ ಮಂಡಲದಲ್ಲಿನ ಚಂದ್ರಗ್ರಹಾ ಶ್ಲೋಕವನ್ನು ಹೇಳಬೇಕು.

**ಶ್ಲೋಕ॥ ಅಪ್ಸುಜಃರಾಹುಸ್ಸವಿತಾ ಸೂರ್ಯಪುತ್ರೋಧರಾಸುತಃ ।**
**ವಾಚಸ್ಪತಿ ಶಶಾಂಕಶ್ಚಸೋಮಪುತ್ರೋಸುಕೇತನಃ ॥**

ಅಥ ಚಂದ್ರ ಸ್ತೋತ್ರ

ನಮಶ್ಚಂದ್ರಾಯಶಶಿನೇ ನಮಸ್ತೇ ತಾರಕಾಧಿಪ । ಔಷಧೀಶಾಯ ಚನಮಃ ಶರ್ವರೀಪತಯೇ ನಮಃ ॥ ೧ ॥ ಆಜಚಂದ್ರ ನಮಸ್ತುಭ್ಯಂ ನಮಸ್ತೇಶಿವರೂಪಿಣೇ । ಸೋಮಾಯ ಸೌಮ್ಯರೂಪಾಯ ನಮಸ್ತೇ ಮೃತರೂಪಿಣೇ ॥೨॥ ಅತ್ರಿಪುತ್ರಾಯಾಬ್ಜಜಾಯದ್ವಿಜರಾಜ ನಮೋಸ್ತುತೇ । ಯಾಮಿನೀಶಾಯ ಪುಣ್ಯಾಯ ಕಲಾತೀತಾಯತೇ ನಮಃ ॥೩॥ ಕಾಲಾಯಕಾಲ ರೂಪಾಯ ನಮಸ್ತೇ ಕಾಲಸಾಕ್ಷಿಣೇ । ಕಾಲಂಗಾಯ ನಮಸ್ತುಭ್ಯಂ ಕಾಲಕರ್ತೇ ನಮೋನಮಃ ॥ ೪ ॥ ತಮೋವಾಯ ತಮಸೇತವಿಸ್ರಪತಯೇ ನಮಃ । ನಮಸ್ತೇ ದಕ್ಷಗುರುವೇ ಕಾಮಮಿತ್ರಾಯತೇ ನಮಃ ॥ ೫ ॥ ಕುಮುದ್ವನ ಪ್ರಮೋದಾಯ ದಕ್ಷಾಯಚ ನಮೋನಮಃ । ಮೃಗಾಂಕಾಯಚ ಕ್ಷೇತ್ರಾಯ ಕ್ಷೇತ್ರಾಧೀಶಾಯತೇ ನಮಃ ॥ ೬ ॥ ಸಾಗರಾಯ ನಮಸ್ತುಭ್ಯಂ ನಮಸ್ತೇ ಸಾಗರಾತ್ಮಜ । ಏವಂ ಕೃತ್ವಾಸ್ತುತಿಂ ಭಕ್ತ್ಯಾದಂಡವತ್ಪ್ರಣಮೇದ್ಬುಧಿ ॥ ೭ ॥ ಪ್ರಾಂಜಲಿಃ ಪುನರುತ್ಥಾಯ ವಾರಂವಾರಂ ನಮೋತ್ಸುಧೀಃ । ಇತೀದಂಚ ದ್ರಮಾಸ್ತೋತ್ರಂ ಸರ್ವಕಾಮಫಲ ಪ್ರದಂ ॥ ೮ ॥ ....ಈ ಪ್ರಕಾರವಾಗಿ ಸ್ತೋತ್ರಮಾಡಿದನಂತರ ಮಂತ್ರನ್ಯಾಸವನ್ನು ಮಾಡಬೇಕು.

॥ ಅಥ ಮಂತ್ರಃ ॥

ಓಂ ಅಸ್ಯಶ್ರೀ ಚಂದ್ರಗ್ರಹಮಂತ್ರಸ್ಯವರುಣಋಷಿಃ ಸೋಮೋದೇವತಾ ಗಾಯತ್ರೀಛಂದಃ ಸೋಮಂತ್ರಜಪೇವಿನಿಯೋಗಃ ಓಂ ಶ್ರಾಂಶ್ರೀಂಶ್ರೌಂ ಸಃ ಓಂ ಭೂರ್ಭುವಃಸ್ವಃ ಅಥಃ ಚಂದ್ರಮೂಲಬೀಜಾಕ್ಷರಮಂತ್ರಃ ಓಂಸ್ವಃಭುವಃ ಭೂಃ ಓಂಸಃ ಶ್ರಾಂ ಶ್ರೀಂ ಶ್ರಾಂ ಓಂ ಸೋಮಾಯನಮಃ ॥ ....ಈ ಮಂತ್ರವನ್ನು ತನ್ನ ಶಕ್ತ್ಯಾನುಸಾರ ಜಪವಂಮಾಡಿದ ಮೇಲೆ ನವಗ್ರಹಪೂಜೆ ಮುಗಿದನಂತರ ಈ ಕೆಳಗಿನ ಮಂತ್ರದಿಂದ ಪೂಜ್ಯರಿಗೆ ದಾನಕೊಡುವುದಾಗಲೀ ಅಥವ ಪುಟ್ಟಿಗೆ ತುಂಬುವುದಾಗಲೀ ಮಾಡಬೇಕು. ಇದೇ ವಿಸರ್ಜನಮಂತ್ರವು.

ಓಂ ಇಮಂದೇವಾ ಅಸಪತ್ನಗ್ಂ ಸುವಧ್ವಮಹತೇ ಜ್ಯೇಷ್ಠ್ಯಾಯ ಮಹತೆ ಜಾನರಾಜ್ಯಾಯೇಂದ್ರಸ್ಯೇಂದ್ರಿಯಾಯ। ಇಮಮಮುಷ್ಯಪುತ್ರ ಮಮುಷ್ಯೈಪುತ್ರಮಸ್ಯೈವ್ವಿಶಾಏಷವೋಮಿ ರಾಜಾಸೋಮೋಸ್ಮಾಕಂ ಬ್ರಾಹ್ಮಣಾನಾಗ್ಂರಾಜಾ ॥ ಈ ಮಂತ್ರದಿಂದ ವಿಸರ್ಜಿಸತಕ್ಕದ್ದು.

## ಮಂಗಳಗ್ರಹ ಶಾಂತಿ

ನವಗ್ರಹ ಮಂಡಲದ ದಕ್ಷಿಣ ದಿಕ್ಕಿನಲ್ಲಿ ತ್ರಿಕೋಣಾಕಾರವಾಗಿ ತೊಗರಿಯಿಂದ ಮಂಡಲವನ್ನು ಹಾಕಿ, ಕೆಂಪುವಸ್ತ್ರ. ತೊಗರಿ, ಹವಳ, ತಾಮ್ರದ ಚೂರು ಹಾಕಿ ಕೆಂಪುಗಂಧ, ಕೆಂಪುಕಣಗಲ ಹೂವುಗಳಿಂದ ಪೂಜಿಸಿದ ನಂತರ ನವಗ್ರಹ ಮಂಡಲದಲ್ಲಿನ ಮಂಗಳಗ್ರಹ ಶ್ಲೋಕವನ್ನು ಹೇಳಬೇಕು.

**ಶ್ಲೋಕ॥ ಬುಧಶ್ಚ ಕೇತು ಸೋಮಶ್ಚ ಬಹುರೂಪದ್ಯತೋರವಿಃ ।**
**ಭೃಗುಪುತ್ರೋ ರೋಹಿತಾಂಗ ವಾಚಸ್ಪತೀ ಶನೈಶ್ಚರಃ ॥**

ಮಂಗಳಗ್ರಹ ಸ್ತೋತ್ರ

ಮಂಗಲೋ-ಭೂಮಿ ಪುತ್ರಶ್ಚ ಋಣಹರ್ತಾ ಧನಪ್ರದಃ ।
ಸ್ಥಿರಾಸನೋ ಮಹಾಕಾಯಃ ಸರ್ವಕಾಮ ವಿರೋಧಕಃ ॥ ೧ ॥
ಲೋಹಿತೋ ಲೋಹಿತಾಕ್ಷಶ್ಚ ಸಾಮಗಾನಾಂ ಕೃಪಾಕರಃ
ಧರಾತ್ಮಜಃ ಕುಜೋಭೌಮೋ ಭೂತಿದೋ ಭೂಮಿನಂದನಃ ॥ ೨ ॥

ಅಂಗಾರಕೋ ಯಮಶ್ಚೈವ ಸರ್ವರೋಗಾಪಹಾರಕಃ ।
ವೃಷ್ಟೇಃ ಕರ್ತಾಪಹರ್ತಾ ಚ ಸರ್ವಕಾಮಫಲಪ್ರದಃ ॥ ೩ ॥

ಏತಾನಿ ಕುಜನಾಮಾನಿ ನಿತ್ಯಂ
ಯಃ ಶ್ರದ್ಧಯಾ ಪಠೇತ್ ।
ಋಣಂ ನ ಜಾಯತೇ ತಸ್ಯ ಧನಂ
ಶೀಘ್ರಮವಾಪ್ನುಯಾತ್ ॥೪॥
ಧರಣೀಗರ್ಭಸಂಭೂತಂ ವಿದ್ಯು
ತ್ಕಾಂತಿ ಸಮಪ್ರಭಂ । ಕುಮಾ
ರಂ ಶಕ್ತಿಹಸ್ತಂಚ ಮಂಗಲಂ
ಪ್ರಣಮಾಮ್ಯಹಂ ॥೫॥ಸ್ತೋತ್ರ
ಮಂಗಾರಕಸ್ಯೈತತ್ಪಠನೀಯಂ
ಸದಾನೃಭಿಃ । ನತೇಷಾಂ ಭೌ
ಮಜಾ ಪೀಡಾಸ್ವಲ್ಪಾಪಿ ಭವತಿ
ಕ್ವಚಿತ್ ॥೬॥ ಅಂಗಾರಕ ಮ
ಹಾಭಾಗ ಭಗವನ್ಭಕ್ತವತ್ಸಲ ।

ತ್ವಾಂನಮಾಮಿ ಮಮಾಶೇಷಮೃಣಮಾಶು ವಿನಾಶಯ ॥ ೭ ॥
ಋಣರೋಗಾದಿ ದಾರಿದ್ರ್ಯಂ ಯೇ ಚಾನ್ಯೇ ಹ್ಯಪಮೃತ್ಯವಃ ।
ಭಯಕ್ಲೇಶ ಮನಸ್ತಾಪಾ ನಶ್ಯಂತು ಮಮ ಸರ್ವದಾ ॥ ೮ ॥
ಅತಿವಕ್ರ ದುರಾರಾಧ್ಯ ಭೋಗಮುಕ್ತ ಜಿತಾತ್ಮನಃ ।
ತುಷ್ಟೋದದಾಸಿ ಸಾಮ್ರಾಜ್ಯಂ ರುಷ್ಟೋಹರಸಿ ತತ್ಕ್ಷಣಾತ್ ॥ ೯ ॥
ವಿರಂಚಿಶಕ್ರ ವಿಷ್ಣೂನಾಂ ಮನುಷ್ಯಾಣಾಂ ತು ಕಾ ಕಥಾ ।
ತೇನತ್ವಂ ಸರ್ವಸತ್ವೇನ ಗ್ರಹರಾಜೋಮಹಾಬಲಃ ॥ ೧೦ ॥
ಪುತ್ರಾಂದೇಹಿ ಧನಂದೇಹಿ ತ್ವಾಮಸ್ಮಿ ಶರಣಂ ಗತಃ ।
ಋಣದಾರಿದ್ರ್ಯದುಃಖೇನಾಶತ್ರೂಣಾಂ ಚ ಭಯಾತ್ತತಃ ॥ ೧೧ ॥

ಏತಾನ್ಯಷ್ಟದಶಾಭಿಃ ಶ್ಲೋಕೈರ್ಯಸ್ತುಪಠೇತಿ ಧರಾಸುತಂ ।
ಮಹತೀಂ ಶ್ರೀ ಯಮವಾಪ್ನೋತಿ ಹ್ಯಪರೋಧನದೋ ಯುವಾ ॥ ೧೨ ॥
[ಇತಿ ಸ್ಕಾಂದಪುರಾಣೇ ಭಾರ್ಗವಪ್ರೋಕ್ತಂ ಭೌಮಸ್ತೋತ್ರಂ ಸಂಪೂರ್ಣಂ]
—ಈ ಪ್ರಕಾರ ಸ್ತೋತ್ರಪಠಾದಿವನಂತರ ಮಂತ್ರನ್ಯಾಸ ಮಾಡಬೇಕು.

॥ ಅಥ ಮಂತ್ರ ॥

ಓಂ ಅಸ್ಯಶ್ರೀ ಭೌಮಗ್ರಹಮಂತ್ರಸ್ಯ ವಿರೂಪಾಂಗೀರಸ ಋಷಿಃ ಅಗ್ನಿ ದೇವತಾ। ಗಾಯಿತ್ರಿಛಂದಃ ಭೌಮಮಂತ್ರ ಜಪೇವಿನಿಯೋಗಃ ! ಓಂ ಕ್ರಾಂ ಕ್ರೀಂ ಕ್ರೌಂ ಸಃ ಓಂ ಭೂರ್ಭುವಃ ಸ್ವಃ ಅಥ ಮಂಗಳಗ್ರಹಾ ಮೂಲಬೀಜಾಕ್ಷರ ಮಂತ್ರಃ ॥ ಓಂ ಸ್ವಃ ಭುವಃ ಭೂ ಓಂ ಸ್ವ ಕ್ರಾಂ ಕ್ರೀಂ ಕ್ರೌಂ ಓಂ ಭೌಮಾಯನಮಃ ॥ —ಈ ಮಂತ್ರವನ್ನು ತನ್ನ ಶಕ್ತ್ಯಾನುಸಾರ ಜಪವಂ ಮಾಡಿದನಂತರ ನವಗ್ರಹ ಪೂಜೆ ಮುಗಿದನಂತರ ಪೂಜ್ಯರಿಗೆ ದಾನಕೊಡಬೇಕಾದರೂ ಅಥವಾ ಪುಟ್ಟಿಗೆ ತುಂಬಬೇಕಾದರೂ ಈ ಕೆಳಗಿನ ಮಂತ್ರವನ್ನು ವಿಸರ್ಜಿಸಬೇಕು.

॥ ಮಂತ್ರ ॥

ಓಂ ಅಗ್ನಿಮೂರ್ಧಾದಿವಃ ಕಕುತ್ಪತಿಃ ಪೃಥಿವ್ಯಾ ಅಯಂ ।
ಅಪಾಂ ರೇತಾಂಸಿ ಜಿನ್ವತಿ ॥
—ಈ ಮಂತ್ರದಿಂದ ಮಂಗಳಗ್ರಹ ಕಾರ್ಯವನ್ನು ಪೂರೈಸಬೇಕು.

## ಬುಧಗ್ರಹ ಶಾಂತಿ

ನವಗ್ರಹ ಮಂಡಲದ ಈಶಾನ್ಯ ದಿಕ್ಕಿನಲ್ಲಿ, ತ್ರಿಶೂಲಾಕಾರವಾಗಿ ಹೆಸರು ಧಾನ್ಯದಿಂದ ಮಂಡಲವನ್ನು ಹಾಕಿ ಹಸರುಬಣ್ಣದ ವಸ್ತ್ರ, ಹೆಸರು, ಬಂಗಾರ ಕಂಚು, ದಕ್ಷಿಣೆ ಇರಿಸಿ ಉತ್ತರಾಣೀಯೇ ಮೊದಲಾದ ಸಮಸ್ತ ಪುಷ್ಪಗಳಿಂದ ಪೂಜಿಸಿದ ನಂತರ ನವಗ್ರಹಮಂಡಲದಲ್ಲಿನ ಬುಧಗ್ರಹ ಶ್ಲೋಕ ಹೇಳಬೇಕು.

**ಶ್ಲೋಕ॥ ಸಂಹಿತೇಯು ರವೀಶಾವ್ಯ ವಸುಧಾಪುತ್ರೋ ಬೃಹಸ್ಪತಿಃ ।**
**ತೀಕ್ಷ್ಣಾಂಶುಜ್ಜನಿತೋ ಹೇಮಘೋರರೂಪೋ ನಿಶಾಕರಃ ॥**

## ಅಥ ಬುಧಗ್ರಹ ಸ್ತೋತ್ರಂ

ಪ್ರಿಯಂಗು ಕಲಿಕಾಶ್ಯಾಮಂ ರೂಪೇಣಾಂ ಪ್ರತಿಮಂ ಬುಧಂ |
ಸೌಮ್ಯಂ ಸೌಮ್ಯಗುಣೋಪೇತಂ ತಂ ಬುಧಂ ಪ್ರಣಮಾಮ್ಯಹಂ ॥ ೧ ॥

ಉತ್ಪಾತರೂಪಿ ಜಗತಾಂ ಚಂದ್ರ ಪುತ್ರೋ ಮಹಾದ್ಯುತಿಃ | ಸೂರ್ಯ ಪ್ರಿಯಕರೋ ವಿದ್ವಾನ್ ಪೀಡಾಂ ಹರತಮೇ ಬುಧಃ ॥ ೨ ॥ ಶಿರೀಷ ಪುಷ್ಪ ಸಂಕಾಶ ಕಪಿಶಿಲೋಥ ವಾ ಪುನಃ | ಸೋಮಪುತ್ರೋ ಬುಧ ಶ್ಚೈವಸದಾಶಾಂತಿಂ ಪ್ರಯಚ್ಛತು ಶಾಮಶಿರಾಲಕ್ಷ್ಯ ಕಲಾನಿಧಿಜ್ಞಃ ಕೌತೂಹಲೀಕೋಮಲ ವಾಗ್ವಿಲಾ ಸೀರಜೋಧಿಕೋ ಮಧ್ಯಮರೂಪ ದೃಗ್ ಸ್ಯಾದುತ್ತಮಪ್ರನೇತ್ರೋದ್ವಿಜ ರಾಜಪುತ್ರಃ ॥೪॥ ಬುದಂಬುದ್ಧಿಪ್ರ ದಾತಾರಂಸೂರ್ಯರಶ್ಮಿಸಮನ್ವಿತಂ

ಯಜಮಾನಹಿತಾರ್ಥಾಯ ಬುಧಮಾವಾಹಯಾಮ್ಯಹಂ ॥ ೫ ॥

ಅಹೋಚಂದ್ರಸುತಃ ಶ್ರೀಮಾನ್ ಜಗದಾಖ್ಯ ಸಮುದ್ಭವಃ |
ಅತ್ರಿಗೋತ್ರಶ್ಚತುರ್ಭುಜಃ ಖಡ್ಗಖೇಟಕಧಾರಕಃ ॥ ೬ ॥
ಗಧಾಧರೋನೃಸಿಂಹಸ್ಥಃ ಸ್ವರ್ಣನಾಭಃ ಸಮನ್ವಿತಃ |
ಕೃಷ್ಣವೃಕ್ಷಸ್ಯಪತ್ರೇಷು ಇಂದ್ರವಿಷ್ಣುಪ್ರಪೂಜಿತಃ ॥ ೭ ॥
ಜ್ಞೇಯೊಬುಧಃ ಪಂಡಿತಶ್ಚರೌಹಿಣೇಯಶ್ಚಸೋಮಜಃ |
ಕುಮಾರೋರಾಜ ಪುತ್ರಶ್ಚ ಶೈಶವಃ ಶಶಿನಂದನಃ ॥ ೮ ॥
ಗುರುಪುತ್ರಶ್ಚತಾರೇಯೋವಿಬುಧೋ ಬೋಧನಸ್ತಥಾ |
ಸೌಮ್ಯಃ ಸರ್ವಗುಣೋಪೇತೊ ರತ್ನದಾನ ಫಲಪ್ರದಃ ॥ ೯ ॥

ಏತಾನಿ ಬುಧನಾಮಾನಿ ಪ್ರಾತಃ ಕಾಲೇಪಠೇನ್ನರಃ ।
ಬುದ್ಧಿರ್ವಿವೃದ್ಧಿತಾಂಯಾತಿ ಬುಧಪೀಡಾನ ಜಾಯತೇ ॥ ೧೦ ॥
ಈ ಪ್ರಕಾರವಾಗಿ ಸ್ತೋತ್ರಮಾಡಿದನಂತರ ಬುಧಮಂತ್ರನ್ಯಾಸ ಮಾಡಬೇಕು

॥ ಅಥ ಮಂತ್ರ ॥

ಓಂ ಅಸ್ಯಶ್ರೀ ಬುಧಗ್ರಹಮಂತ್ರಸ್ಯ ಪರಮೇಷ್ಟಿರುಷಿಃ ಬುಧೋದೇವತಾ । ತ್ರಿಷ್ಟುಪ್ ಛಂದಃ । ಸೌಮ್ಯಮಂತ್ರಜಪೇವಿನಿಯೋಗಃ ಓಂ ಬ್ರಾಂ ಬ್ರೀಂ ಬ್ರೌಂ ಸಃ ಓಂ ಭೂರ್ಭುವಃ । ಅಥಬುಧಗ್ರಹಮೂಲಬೀಜಾಕ್ಷರ ಮಂತ್ರಃ ಓಂ ಸ್ವಃ ಭುವಃ ಭೂಃ ಓಂ ಸಃ ಬ್ರೌಂ ಬ್ರೀಂ ಬ್ರಾಂ ಓಂ ಸೌಮ್ಯಾಯನಮಃ — ಈ ಮಂತ್ರವನ್ನು ತನ್ನ ಶಕ್ತ್ಯಾನುಸಾರ ಜಪವಂ ಮಾಡಿದನಂತರ ನವಗ್ರಹಪೂಜೆ ಮುಗಿದಮೇಲೆ ಪೂಜ್ಯರಿಗೆ ದಾನಕೊಡಬೇಕಾದರೂ ಅಥವಾ ಪುಟ್ಟಿಯಲ್ಲಿ ತುಂಬಬೇಕಾದರೂ ಈ ಕೆಳಗಿನ ಮಂತ್ರದಿಂದ ವಿಸರ್ಜಿಸಬೇಕು.

॥ ಮಂತ್ರ ॥

ಓಂ ಉದ್ಬುದ್ಧ್ಯಸ್ವಾಗ್ನೇ ಪ್ರತಿಜಾಗ್ರಹಿತ್ವಾಮಿಷ್ಟಾಪೂರ್ತೇಸಗ್ಂಸೃಜೇಥಾಮಯಂಚ । ಅಸ್ಮಿಂತ್ಸದಸ್ಥೆ ಅಧ್ಯುತ್ತರಸ್ಮಿನ್ವಿಶ್ವೆ ದೇವಾಯಜಮಾನಶ್ಚ ಸೀದತಃ॥ —ಈ ಮಂತ್ರದಿಂದ ಬುಧಗ್ರಹಕ್ರಮವನ್ನು ಮುಗಿಸಬೇಕು.

## ಗುರುಗ್ರಹ ಶಾಂತಿ

ನವಗ್ರಹಮಂಡಲದ ಉತ್ತರದಿಕ್ಕಿನಲ್ಲಿ ಚೌಕಾಕಾರವಾಗಿ ಹಸಿಕಡಲೆಯಿಂದ ಮಂಡಲವನ್ನು ಹಾಕಿ. ಹಳದಿಬಣ್ಣದ ವಸ್ತ್ರದಲ್ಲಿ ಕಡಲೆ, ಭಂಗಾರದ ಚೂರು ದಕ್ಷಿಣೆ ಹಾಕಿ ಅರಳೀ ಚಿಗುರು, ಜಾಜಿ ಹೂವುಗಳಿಂದ ಪೂಜಿಸಿದನಂತರ ನವಗ್ರಹ ಮಂಡಲದಲ್ಲಿನ ಗುರುಶ್ಲೋಕವನ್ನು ಹೇಳತಕ್ಕದ್ದು.

**ಶ್ಲೋಕ॥ ಬಹುರೂಪದ್ಯುತಸ್ಸೋಮ ಶೀತಾಂಶುಜ್ಞಾತಭಾಸ್ಕರಃ ।**
**ಕಾವ್ಯದಾಹುರ್ಗುರುಶ್ಚೈವ ಛಾಯಾಪುತ್ರೋಥರಾಹುತಃ ॥**

॥ ಅಥ ಗುರುಗ್ರಹಾ ಸ್ತೋತ್ರ ॥

ನಮಃಸುರೇಶ ವಂದ್ಯಾಯಜೀವಾಚಾರ್ಯಾಯತೇ ನಮಃ ।
ನಮಸ್ತೇನಂತ ಸಾಮರ್ಥ್ಯವೇದ ಸಿದ್ಧಾಂತ ಪಾರಗ ॥ ೧ ॥

ಸದಾನಂದ ನಮಸ್ತೇಸ್ತು ನಮಃ
ಪೀಡಾಕರಾಯಚ । ನಮೋ
ವಾಚಸ್ಪತೇ ಶುಭ್ಯಂ ನಮಸ್ತೇ
ಪೀತವಾಸನೇ ॥ ೨ ॥ ನಮೋ
ದ್ವಿತೀಯ ರೂಪಾಯಲಂಬಕೂ
ರ್ಚಾಯತೇನಮಃ । ನಮಃ
ಪ್ರಹೃಷ್ಟ ನೇತ್ರಾಯ ವಿಪ್ರಾ
ಣಾಂ ಪತಯೇ ನಮಃ ॥ ೩ ॥
ನಮೋ ಭಾರ್ಗವಶಿಷ್ಯಾಯ ವಿ
ಪನ್ನ ಹಿತಕಾರಕಾಃ । ನಮಸ್ತೇ
ಸುರಸೈನ್ಯಾಯ ವಿಪನ್ನ
ತ್ರಾಣ ಹೇತವೇ ॥ ಬೃಹಸ್ಪ
ತಿಃ ಸೂರಾಚಾರ್ಯೋದಯಾ
ವಾನ್ ಶುಭ ಲಕ್ಷಣಃ ।
ಲೋಕತ್ರಯ ಗುರುಃ ಶ್ರೀಮಾನ್ ಸರ್ವಜ್ಞಃ ಸರ್ವತೋವಿಭುವಃ ॥ ೫ ॥
ಸರ್ವೇಶಃ ಸರ್ವದಾತುಷ್ಟಃ ಸರ್ವಗಃ ಸರ್ವಪೂಜಿತಃ ।
ಅಕ್ರೋಧನೋ ಮುನಿಶ್ರೇಷ್ಠೋ ನೀತಿಕರ್ತಾ ಜಗತ್ಪಿತಾ ॥ ೬ ॥
ವಿಧಾತ್ಮಾ ವಿಶ್ವಕರ್ತಾಚ ವಿಶ್ವಯೋನೀ ರಯೋನಿಜಃ ।
ಭೂರ್ಭುವೋಧನದಾತಾಚ ಭರ್ತಾಜೀವೋ ಮಹಾಬಲಃ ॥ ೭ ॥
ಪಂಚವಿಂಶಂತಿ ನಾಮಾನಿ ಪುಣ್ಯಾನಿಶುಭದಾನಿಚ ।
ಪ್ರಾತರುತ್ಥಾಯ ಯೋನಿತ್ಯಂ ಪಠೇದ್ವಾಸುಸಮಾಹಿತಃ ॥ ೮ ॥
ವಿಪರೀತೋಪಿ ಭವಾನ್ ಸುಪ್ರೀತಃ ಸ್ಯಾದ್ಬೃಹಸ್ಪತಿಃ ।
ನಂದಗೋಪಾಲ ಪುತ್ರೇಣ ವಿಷ್ಣುನಾಕೀರ್ತಿತಾನಿಚ ॥ ೯ ॥

ಅಭೀಷ್ಟ ಫಲದಾಃ ಶ್ರೀಮಾನ್ ಶುಭಗ್ರಹ ನಮೋಽಸ್ತುತೇ ।
ಉದಯೇಽಸ್ತೇ ಚ ಮಧ್ಯಾಹ್ನೇ ಪಠೇನ್ನಿತ್ಯಂ ಸಮಾಹಿತಃ ॥ ೧೦ ॥
ಪಂಚವಿಂಶಂತಿ ನಾಮಾನಿಯಃ ಪಠೇತ್ಫಲಧಾನಿತು ।
ನಬಾಧಕಾಗ್ರಹಾಸ್ತಸ್ಯಸ್ವಯಂ ದೇವೋ ಪಿರಕ್ಷಿತಾ ॥ ೧೧ ॥
ಕರೋತಿ ವಿಪುಲಾಂ ಶಾಂತಿಂ ಸರ್ವಪಾಪ ಪ್ರಮೋಚನಮ್ ।
ಪ್ರಭುಃ ಪಂಡಿತ ರಾಜೇಂದ್ರ ಗುರುಸ್ತೋತ್ರಂ ಚ ಕಾರಸಃ ॥ ೧೨ ॥
ಯಸ್ಮಿತ್ವಂ ಕುಪಿತೋದೇವೋ ಗ್ರಹರಾಜ ಮಹಾಬಲ ।
ರಾಜ್ಯಂ ಸಮೃದ್ಧಿಃ ಸೌಖ್ಯಂ ಚ ತಸ್ಯನಶ್ಯತಿ ತತ್ಕ್ಷಣಾತ್ ॥ ೧೩ ॥
ಯಃ ಪಠೇತ್ ಪ್ರಯತಃ ಸ್ತೋತ್ರಂ ತಸ್ಯೈತತ್ಪ್ರಮಾಣು ವಿಚ್ಯಸಿ ।
ಪಶ್ಯತಾಂದೇವಾ ದೈತ್ಯಾನಾಂ ವಿರುದ್ಧಸ್ಯ ಶುಭಂ ಫಲಂ ॥ ೧೪ ॥
ಸಶೈಲ ಸಾಗರಾಯಾಂತು ಪೃಥುವ್ಯಾಂ ಪರಮೇಶ್ವರಃ ।
ದೇವಾಸುರ ಮನುಷ್ಯಾಣಾಂ ವಿರುದ್ಧೋಽಸಿಕ್ಷಯಂಕರಃ ॥ ೧೫ ॥
ತ್ವಯಿಕ್ರುದ್ಧೇ ಬಲಿರ್ವೀರೋರಾಜಾ ವೇನೋಽಸಿಪಾತಿತಃ ।
ಹತೋಽಭೀಷ್ಟಸ್ತ್ವಯಿಕ್ರುದ್ಧೇ ರಾಜಾದುರ್ಯೋಧನೋಹತಃ ॥ ೧೬ ॥
ಸುರಾಸ್ಸರ್ವೈಃ ಸುರೇಂದ್ರೇಣ ಪೂಜಿತೋಽಸಿಸದಾನಘೈಃ ।
ಕಮಲೈಃ ಶತಪತ್ರೈಶ್ಚಪಾದ ಪದ್ಮಂ ಪ್ರಯತಃ ॥ ೧೭ ॥
ತೇಶಾಂ ನಾನಾವಿಧಂ ಸೌಖ್ಯಂ ಯೇಷಾಂ ತ್ವಮ್ಮೋಽಸಿ ತತ್ಕ್ಷಣಾತ್ ।
ಜಗಚ್ಚರಾಚರಂ ಪೂಜಾಂ ವಿದಧಾತಿಸದೈವಹು ॥ ೧೮ ॥
ಯ ಇದಂ ಶೃಣುಯಾನ್ನಿತ್ಯಂ ಪಠೇದ್ವಾಪಿ ಸಮಾಹಿತಃ ।
ಬೃಹಸ್ಪತಿ ಕೃತಾಪೀಡಾ ತಸ್ಯನಸ್ಯಾ ತ್ಕದಾಚನ ॥ ೧೯ ॥

—( ಇತಿ ಪ್ರಭು ಪಂಡಿತ ವಿರಚಿತಂ ಗುರುಸ್ತೋತ್ರಂ. )—

ಈ ಪ್ರಕಾರವಾಗಿ ಸ್ತೋತ್ರ ಮಾಡಿದನಂತರ ಗುರುಮಂತ್ರ ಪಠಿಸತಕ್ಕದ್ದು.

॥ ಅಥ ಮಂತ್ರ ॥

ಓಂ ಅಸ್ಯ ಶ್ರೀಗುರು ಗ್ರಹಮಂತ್ರಸ್ಯ ಗೃತ್ಸಮದಋಷಿಃ । ಬ್ರಹ್ಮಾ ದೇವತಾ ತ್ರಿಷ್ಟುಪ್ ಛಂದಃ ಬಾಹ್ರಸ್ಪತ್ಯಾ ಮಂತ್ರಜಪೇ ವಿನಿಯೋಗಃ । ಓಂ ಹ್ರಾಂ ಹ್ರೀಂ ಹ್ರೌಂ ಸಃ ಓಂ ಭೂರ್ಭುವಃ ಸ್ವಃ ॥ ಅಥ ಗುರುಗ್ರಹ

ಮೂಲಬೀಜಾಕ್ಷರಮಂತ್ರ ॥ ಓಂ ಸ್ವಃ ಭುವಃ ಭೂಃ ಸಃ ಹ್ರೌಂ ಹ್ರೀಂ ಹ್ರಾಂ ಓಂ ಬೃಹಸ್ಪತಯೇ ನಮಃ॥ — ಈ ಮಂತ್ರವನ್ನು ತನ್ನ ಶಕ್ತ್ಯಾನುಸಾರ ಜಪವಂ ಮಾಡಿದನಂತರ ನವಗ್ರಹ ಪೂಜೆ ಮುಗಿದಮೇಲೆ ಪೂಜ್ಯರಿಗೆ ದಾನಕೊಡುವಾಗ ಈ ಕೆಳಗಿನ ಮಂತ್ರವನ್ನು ಹೇಳಿ ಕೊಡಿಸತಕ್ಕದ್ದು.

॥ ಮಂತ್ರ ॥

ಓಂ ಬೃಹಸ್ಪತೆ ಅತಿಯದರ್ಯೋ ಅರ್ಹಾದ್ಯುಮದ್ವಿಭಾತಿ ಕ್ರತುಮಜ್ಜನೇಷು
ಯದ್ದಿದಯಚ್ಛವಸಋತ ಪ್ರಜಾತತದಸ್ಮಾಸು ದ್ರಾವಿಣಂ ದೇಹಿಚಿತ್ರಂ ॥
....ಈ ಮಂತ್ರದಿಂದ ಗುರುಗ್ರಹ ಕ್ರಮವನ್ನು ಮುಗಿಸತಕ್ಕದ್ದು.

## ಶುಕ್ರಗ್ರಹಾ ಶಾಂತಿ

ನವಗ್ರಹ ಮಂಡಲದ ಪೂರ್ವದಿಕ್ಕಿನಲ್ಲಿ ಶುಕ್ರನಿಗೆ ಪಟ್ಕೋಣಾಕಾರವಾಗಿ ಅವರೇ ಧಾನ್ಯದಿಂದ ಮಂಡಲವನ್ನು ಬರೆದು, ಬಿಳೀವಸ್ತ್ರದಲ್ಲಿ ಅವರೆ ಬೆಳ್ಳಿಚೂರು, ಭಂಗಾರದಚೂರು ದಕ್ಷಿಣೆಹಾಕಿ ಬಿಳೀ ಪುಷ್ಪಗಳಿಂದ ಪೂಜಿಸಿದ ನಂತರ ನವಗ್ರಹದಲ್ಲಿನ ಶುಕ್ರಗ್ರಹ ಶ್ಲೋಕವನ್ನು ಹೇಳತಕ್ಕದ್ದು.

**ಶ್ಲೋಕ॥ ಕೃಷ್ಣಸ್ಯ ಭೂಮಿಪುತ್ರಸ್ಯ ದಾಹಸ್ಯತಿ ನಿಶಾಕರಾಃ ।**
**ಬಂದಸ್ಯ ಘೋರರೂಪಸ್ಯ ಶಾನ್ಯ ಸ್ವರ್ಭಾನುಭಾಸ್ಕರಃ ॥**

॥ ಅಥ ಶುಕ್ರಗ್ರಹಾ ಸ್ತೋತ್ರ ॥

ನಮಸ್ತೇ ಭಾರ್ಗವಶ್ರೇಷ್ಠ ದೇವದಾನವ ಪೂಜಿತ ।
ವೃಷ್ಟಿರೋಧ ಪ್ರಕರ್ತ್ರೇ ಚ ವೃಷ್ಟಿಕರ್ತ್ರೇ ನಮೋನಮಃ ॥ ೧ ॥
ದೇವಯಾನಿ ಪಿತಸ್ತುಭ್ಯಂ ವೇದ ವೇದಾಂಗ ಪಾರಗ ।
ಪರೇಣತಪಸಾ ಶುದ್ಧಶಂಕರಾ ಲ್ಲೋಕ ಶಂಕರಾತ್ ॥ ೨ ॥
ಪ್ರಾಪ್ತೋವಿದ್ಯಾಂ ಜೀವನಾಖ್ಯಾಂ ತಸ್ಮೈಶುಕ್ರಾತ್ಮನೇನಮಃ ।
ನಮ ತಸ್ಮೈ ಭಗವತೇ ಭೃಗು ಪುತ್ರಾಯವೇಧಸೇ ॥ ೩ ॥
ತಾರಾಮಂಡಲ ಮಧ್ಯಸ್ಥ ಸ್ವಭಾಸಾಭಾಸಿತಾಂ ಬರ ।

ಯಸ್ಯೋದಯೇ ಜಗತ್ಸರ್ವಂ ಮಂಗಲಾರ್ಹಂಭವೇದಿಹ ॥ ೪ ॥
ಅಸ್ತಂಯಾತೇಹ್ಯರಿಷ್ಟಂಸ್ಯಾತ್ತಸ್ಮೈಮಂಗಲರೂಪಿಣೇ ।
ತ್ರಿಪುರವಾಸಿನೋ ದೈತ್ಯಾನ್ ಶಿವಬಾಣಪ್ರಪೀಡಿತಾನ್ ॥ ೫ ॥

ವಿದ್ಯಯಾಜೀವಯ ಚ್ಛುಕ್ರೋನ
ಮಸ್ತೇಭೃಗುನಂದನ। ಯಯಾತಿ
ಗುರವೇತುಭ್ಯಂ ನಮಸ್ತೇ ಕವಿ
ನಂದನ ॥೬॥ ಬಲಿರಾಜ ಪ್ರಮೋ
ಜೀವಸ್ತಸ್ಮೈಜೀವಾತ್ಮನೇ ನಮಃ
ಭಾರ್ಗವಾಯನಮಸ್ತುಭ್ಯಂ ಪೂರ್ವ
ಗೀರ್ವಾಣವಂದಿತ ॥ ೭ ॥ ಜೀವ
ಪುತ್ರಾಯಯೋವಿದ್ಯಾಂಪ್ರದಾತ್ತ
ಸ್ಮೈ ನಮೋ ನಮಃ । ನಮೋ
ಶುಕ್ರಾಯ ಕಾವ್ಯಾಯ ಭೃಗುಪು
ತ್ರಾಯಧೀಮಹಿ ।೮। ನಮಃ
ಕಾರಣರೂಪಾಯ ನಮಸ್ತೇಕಾರ
ಣಾತ್ಮನೇ । ಸ್ತವರಾಜಮಿಮಂ
ಪುಣ್ಯಂಭಾರ್ಗವಸ್ಯ ಮಹಾತ್ಮನಃ।

ಯಃಪಠೇಚ್ಛೃಣುಯಾದ್ವಾಪಿಲಭೇತೇವಾಂಛಿತಂ ಫಲಂ ।
ಪುತ್ರಕಾಮೋಲಭೇತ್ಪುತ್ರಾನ್ ಶ್ರೀಕಾಮೋಲಭತೇಶ್ರಿಯಂ ॥ ೧೦ ॥
ರಾಜ್ಯಕಾಮೋಲಭೇದ್ರಾಜ್ಯಂ ಸ್ತ್ರೀಕಾಮೋಸ್ತ್ರಿಯಮುತ್ತಮಾಂ ।
ಭೃಗುವಾರೇಪ್ರಯತ್ನೇನ ಪಠಿತವ್ಯಂ ಸಮಾಹಿತಂ ॥ ೧೧ ॥
ಅನ್ಯವಾರೇತುಹೋರಾಯಾಂ ಪೂಜಯೇದ್ಭೃಗುನಂದನಂ ।
ರೋಗಾರ್ತೋಮುಚ್ಯತೇ ರೋಗಾದ್ಭಯಾರ್ತೋಮುಚ್ಯತೇಭಯಾತ್ ॥
ಯದ್ಯತ್ಪ್ರಾರ್ಥಯತೇಜಂತುಸ್ತತ್ತತ್ಪ್ರಾಪ್ನೋತಿ ಸರ್ವದಾ ।
ಪ್ರಾತಃಕಾಲೇಪ್ರಕರ್ತವ್ಯಾಂ ಭೃಗುಪೂಜಾ ಪ್ರಯತ್ನತಃ ॥ ೧೨ ॥

ಸರ್ವಪಾಪವಿನಿರ್ಮುಕ್ತಃ ಪ್ರಾಪ್ನುಯಾಚ್ಛಿವ ಸನ್ನಿಧಿಂ ]

[ ಇತಿ ಸ್ಕಾಂದ ಪುರಾಣೇ ಶುಕ್ರ ಸ್ತೋತ್ರಂ ]

ಈ ಪ್ರಕಾರವಾಗಿ ಸ್ತೋತ್ರಮಾಡಿದ ನಂತರ ಗುರುಮಂತ್ರವನ್ನು ಹೇಳಬೇಕು.

॥ ಅಥ ಮಂತ್ರಃ ॥

ಓಂ ಅಸ್ಯ ಶ್ರೀ ಶುಕ್ರಗ್ರಹಮಂತ್ರಸ್ಯ ಪ್ರಜಾಪತಿ ಋಷಿಃ । ಅಸ್ಮೈ ಸರಸ್ವತೀಂದ್ರಾ ದೇವತಾ । ಜಗತೀಛಂದಃ ಶುಕ್ರಮಂತ್ರಜಪೇ ವಿನಿಯೋಗಃ ಓಂ ದ್ರಾಂ ದ್ರೀಂ ದ್ರೌಂ ಸಃ ಭೂರ್ಭುವಃ ಸ್ವಃ ಅಥಮೂಲಬೀಜಾಕ್ಷರ ಮಂತ್ರಃ ಓಂ ಸ್ವಃ ಭುವಃ ಓಂ ಸಃ ದ್ರೌಂ ದ್ರೀಂ ದ್ರಾಂ ಓಂ ಶುಕ್ರಾಯನಮಃ — ಈ ಮಂತ್ರವನ್ನು ತನ್ನ ಶಕ್ತ್ಯಾನುಸಾರ ಜಪವಂ ಮಾಡಿದನಂತರ ನವಗ್ರಹಪೂಜೆ ಮುಗಿದಮೇಲೆ ಪೂಜ್ಯರಿಗೆ ದಾನಕೊಡುವಾಗ ಈ ಕೆಳಗಿನ ಮಂತ್ರ ಹೇಳಿ ಕೊಡಿಸತಕ್ಕದ್ದು.

॥ ಮಂತ್ರ ॥

ಓಂ ಅನ್ನಾತ್ಪರಿಸ್ರುತೋ ರಸಂ ಬ್ರಹ್ಮಣಾವ್ಯಪಿಬತ್ಕ್ಷತ್ರಂ ಪಯಃ ಸೋಮಂ ಪ್ರಜಾಪತಿಃ । ಋತೇನಸತ್ಯಮಿಂದ್ರಿಯಂ ವಿಪಾನಗ್ಂ ಶುಕ್ರಮಂಧಸ ಇಂದ್ರಸ್ಯೇಂದ್ರಿಯ ಮಿದಂಪಯೋಽಮೃತಂಮಧು ॥— ಈ ಮಂತ್ರದಿಂದ ಶುಕ್ರಗ್ರಹ ಕ್ರಮವನ್ನು ಮುಗಿಸಬೇಕು.

# ಅಥ ಶನಿಗ್ರಹ ಶಾಂತಿ

ನವಗ್ರಹ ಮಂಡಲದ ಪಶ್ಚಿಮ ದಿಕ್ಕಿನಲ್ಲಿ ಶನಿಗೆ ಎಳ್ಳಿನಿಂದ ಧನುರಾಕಾರವಾಗಿ ಮಂಡಲವನ್ನು ಬರೆದು ಕಪ್ಪು ವಸ್ತ್ರದಲ್ಲಿ ಎಳ್ಳು, ಕಬ್ಬಿಣದ ಚೂರು, ದಕ್ಷಿಣೆ ಹಾಕಿ ಬನ್ನಿಪತ್ರಿಯಿಂದ ಪೂಜಿಸಿದನಂತರ ನವಗ್ರಹ ಮಂಡಲದಲ್ಲಿನ ಶನಿಗ್ರಹ ಶ್ಲೋಕವನ್ನು ಹೇಳತಕ್ಕದ್ದು.

ಶ್ಲೋಕ॥ ಉಡುನಾಥ ಬುಧೋತ್ಪತ್ತೇ ದೈತ್ಯಪೂಜ್ಯ ವಿಧುಂತುದಃ ।
ದಿವಾಕರಛಾಯಾ ಪುತ್ರೋ ಧರಾಸುತಃ ಬೃಹಸ್ಪತಿಃ ॥

## ಅಥ ಶನಿಸ್ತೋತ್ರಃ

ಓಂ ಅಸ್ಯ ಶ್ರೀ ಶನೈಶ್ಚರ ಸ್ತೋತ್ರಸ್ಯ ದಶರಥ ಋಷಿಃ ಶನೈಶ್ಚರೋ ದೇವತಾ । ತ್ರಿಷ್ಟುಪ್ ಛಂದಃ । ಶನೈಶ್ಚರೋ ಪ್ರೀತ್ಯರ್ಥೇ ಜಪೇ ವಿನಿಯೋಗಃ ॥ ದಶರಥ ಉವಾಚ ॥

ಕೋಣೋಂತಕೋ ರೌದ್ರಾಯ ಮೋಥ ಬಭ್ರುಃ ಕೃಷ್ಣಃ ಶನಿಃ ಪಿಂಗಲಮಂದ ಶೌರಿಃ । ನಿತ್ಯಂ ಸ್ಮೃತೋ ಯೋಹರತೇಚ ಪೀಡಾಂ ತಸ್ಮೈನಮಃ ಶ್ರೀ ರವಿನಂದನಾಯ ॥೧॥ ಸುರಾಸುರಾಃ ಕಿಂ ಪುರುಷೋರಗೇಂದ್ರಾ ಗಂಧರ್ವ ವಿದ್ಯಾಧರ ಪನ್ನಗಾಶ್ಚ । ಪೀಡಂತಿ ಸರ್ವೇವಿಷಮುಸ್ಥಿತೇನತಸ್ಮೈ ನಮಃ ಶ್ರೀ ರವಿನಂದನಾಯ ॥ ನರಾನರೇಂದ್ರಾಃ ಪಶವೋಮೃಗೇಂದ್ರಾ ವನ್ಯಾಶ್ಚಯೇ ಕೀಟ ಪತಂಗ ಭೃಂಗಾಃ ।
ಪೀಡ್ಯಂತಿ ಸರ್ವೇವಿಷಮಸ್ಥಿತೇನ ತಸ್ಮೈನಮಃ ಶ್ರೀರವಿನಂದನಾಯ ॥ ೩ ॥
ದೇಶಾಶ್ಚದುರ್ಗಾಣಿವನಾನಿಯತ್ರ ಸೇನಾನಿವೇಶಾಃ ಪುರಪತ್ತನಾನಿ ।
ತಿಲಯೈರ್ಯವೈರ್ಮಾಷಗುಡಾನ್ನದಾನ್ಯೈರ್ಲೋಹೇನ ನೀಲಾಂಬರ ದಾನತೋವಾ
ಪ್ರೀಣಾತಿಮಂತ್ರೈರ್ನಿಜವಾಸರೇಚ ತಸ್ಮೈನಮಃ ಶ್ರೀರವಿನಂದನಾಯ ॥೪॥
ಪ್ರಯಾಗಕೂಲೇ ಯಮುನಾತಟೇಚ ಸರಸ್ವತೀ ಪುಣ್ಯಜಲೇಗುಹಾಯಾಮ್ ।
ಯೋಯೋಗಿನಾಂ ಧ್ಯಾನಗತೋಪಿ ಸೂಕ್ಷ್ಮಸ್ತಸ್ಮೈನಮಃ ಶ್ರೀರವಿನಂದನಾಯ
ಅನ್ಯಪ್ರದೇಶಾತ್ಸ್ವಗೃಹಂ ಪ್ರವಿಷ್ಟಸ್ತದೀಯವಾರೇಸನರಃ ಸುಖೀಸ್ಯಾತ್ ।
ಗೃಹದ್ಗತೋಯೋನಪುನಃ ಪ್ರಯಾತಿತಸ್ಮೈನಮಃ ಶ್ರೀರವಿನಂದನಾಯ ॥

ಸ್ರಷ್ಟಾ ಸ್ವಯಂಭೂರ್ಭುವನತ್ರಯಸ್ಯತ್ರಾಂ ತಾ ಹರೀಶೋ ಹರತೇ ಪಿನಾಕೀ |
ಏಕಸ್ತ್ರಿಧಾಋಗ್ಯಜುಃಸಾಮಮೂರ್ತಿಸ್ತಸ್ಮೈನಮಃ ಶ್ರೀರವಿನಂದನಾಯ ||

ಶನ್ಯಷ್ಟಕಂ ಯಃಪ್ರಯತಃ ಪ್ರಭಾತೇ ನಿತ್ಯಂ ಸುಪುತ್ರೈ ಪಶುಬಾಂಧವೈಶ್ಚ |
ಪಠೇತ್ ಸೌಖ್ಯಂ ಭುವಿಭೋಗಯುಕ್ತ ಪ್ರಾಪ್ನೋತಿನಿರ್ವಾಣಪದಂ ತಮಂತೇ||

ಕೋಣಸ್ಥಃ ಪಿಂಗಲೋಬಬ್ರುಃ ಕೃಷ್ಣೋ ರೌದ್ರಾಂತಕೋ ಯಮಃ |
ಶೌರಿಃ ಶನೇಶ್ವರೋ ಮಂದಃ ಪಿಪ್ಪಲಾದೇನ ಸಂಸ್ತುತಃ || ೧೧ ||

ಏತಾನಿ ದಶನಾಮಾನಿ ಪ್ರಾತರುತ್ಥಾಯ ಯಃಪಠೇತ್ |
ಶನೈಶ್ಚರ ಕೃತಾಪೀಡಾನ ಕದಾಪಿ ಭವಿಷ್ಯತಿ | ೧೧ |

....ಈ ಪ್ರಕಾರವಾಗಿ ಸ್ತೋತ್ರಮಾಡಿದನಂತರ ನವಗ್ರಹ ಮಂಡಲದಲ್ಲಿನ ಶನಿ ಗ್ರಹ ಮಂತ್ರವನ್ನು ಹೇಳತಕ್ಕದ್ದು.

|| ಮಂತ್ರ ||

ಓಂ ಅಸ್ಯಶ್ರೀ ಶನಿಗ್ರಹ ಮಂತ್ರ ಸ್ಯ ದಧ್ಯಂಗ ಥರ್ವಣ ಋಷಿಃ | ಆಪ್ತೋ ದೇವತಾ ಗಾಯಿತ್ರೀಛಂದಃ | ಶನೇಶ್ವರ ಮಂತ್ರಜಪೇ ವಿನಿಯೋಗಃ ಓಂಖಾಂ ಖೀಂ ಖೌಂ ಸಃ ಓಂ ಭೂರ್ಭುವಃ ಸ್ವಃ | ಅಥಮೂಲ ಬೀಜಾಕ್ಷರ ಮಂತ್ರಃ ಓಂ ಸ್ವಃ ಭುವಃ ಭೂಃ ಓಂ ಸಃ ಖೌಂ ಖೀಂ ಖಾಂ ಓಂ ಶನೇಶ್ವರಾಯನಮಃ
....ಈ ಮಂತ್ರವನ್ನು ತನ್ನ ಶಕ್ತ್ಯಾನುಸಾರವಾಗಿ ಜಪವಂ ಮಾಡಿದ ನಂತರ ನವಗ್ರಹ ಪೂಜೆ ಮುಗಿದ ಮೇಲೆ ಈ ಕೆಳಗಿನ ಮಂತ್ರದಿಂದ ಪೂಜ್ಯನಿಗೆ ಶನಿ ಸಂಬಂಧ ಎಳ್ಳು, ಮುಂತಾದವನ್ನು ದಾನ ಕೊಡಿಸಬೇಕು.

|| ಮಂತ್ರ ||

ಓಂ ಶನ್ನೋದೇವೀರಭಿಷ್ಟಯ ಆಪೋಭವಂತು ಪೀತಯೇಶಂಯ್ಯೋರಭಿ ಸ್ರವಂತುನಃ ||- ಈ ಮಂತ್ರದಿಂದ ಶನಿಗ್ರಹ ಕ್ರಮವನ್ನು ಮುಗಿಸಬೇಕು.

## ಅಥ ರಾಹುಗ್ರಹ ಶಾಂತಿ

ನವಗ್ರಹ ಮಂಡಲದ ನೈರುತ್ಯದಿಕ್ಕಿನಲ್ಲಿ ರಾಹುವಿಗೆ ಸರ್ಪಾಕಾರವಾಗಿ ಉದ್ದು ಧಾನ್ಯದಿಂದ ಮಂಡಲವನ್ನು ಬರೆದು ಕಪ್ಪುವಸ್ತ್ರದಲ್ಲಿ ಉದ್ದು, ನೀಲ

ಮಣಿ ದಕ್ಷಿಣೆ ಇಟ್ಟು ಕರಿಕೆಪತ್ರಿಯಿಂದ ಪೂಜಿಸಿದನಂತರ ನವಗ್ರಹ ಮಂಡಲ ದಲ್ಲಿನ ರಾಹುಗ್ರಹ ಶ್ಲೋಕವನ್ನು ಪಠಿಸತಕ್ಕದ್ದು.

**ಶ್ಲೋಕ॥ ರೋಹಿತಾಂಗೋ ಗುರುಸ್ಸೌರಿ ಸೌಮ್ಯಕೇತು ನಿಶಾಕರಃ।**
**ಭುಜಾಂಗಾಖ್ಯ ಜಗಚ್ಚಕ್ಷು ದೈತ್ಯಪೂಜ್ಯ ಮಿತಿಸ್ಮೃತಃ ॥**

॥ ರಾಹು ಸ್ತೋತ್ರ ॥

ಸಿಂಹಿಕೇಯಸ್ತು ರಾಹುಃ ಕಜ್ಜಲಾಚಲ ಸನ್ನಿಭಃ ।
ಯಃ ಪರ್ವಣಿ ಮಹಾಕಾಯೋಗ್ರಸತೇ ಚಂದ್ರಭಾಸ್ಕರೌ ॥ ೧॥

ವಿಷ್ಣುನಾಯಸ್ಯಮೂರ್ಧಾನ್ವೈಛಿನ್ನೋಭಕ್ಷಯತೋ ಮೃತಂ । ಯೋಜಿತೋ ಗ್ರಹಾ ಭಾವೇನ ತ್ವಾಮಹಂ ಶರಣಂಗತಃ ॥ ೨॥ ಏತಂರಾಹು ಸ್ತುತಿಂ ಚೈವಯಃ ಪಠೇಚ್ಚದ್ವಿಜೋತ್ತಮಃ । ನಥ ಪೇಕ್ಷದ್ಭುವಾ ಪೀಡಾತಸ್ಯಾಯಃ ಶ್ವಪ್ರವರ್ದತೇ ॥ ೩ ॥ ....ಈ ಪ್ರಕಾರವಾಗಿ ಸ್ತೋತ್ರಮಾಡಿದ ನಂತರ ರಾಹು ಮಂತ್ರವನ್ನು ಹೇಳಬೇಕು.

॥ ರಾಹು ಮಂತ್ರ ॥

ಓಂ ಅಸ್ಯ ಶ್ರೀ ರಾಹು ಗ್ರಹ ಮಂತ್ರಸ್ಯ ವಾಮದೇವ ಋಷಿಃ ರಾಹುರ್ದೇವತಾ । ಗಾಯತ್ರಿ ಛಂದಃ । ರಾಹುಮಂತ್ರ ಜಪೇವಿನಿಯೋಗಃ ಓಂ ಬ್ರಾಂ ಭ್ರೀಂ ಭ್ರೌಂ ಸಃ ಭೂರ್ಭುವಃ ಸ್ವಃ ಅಥ ರಾಹು ಮೂಲ ಬೀಜಾಕ್ಷರಮಂತ್ರಃ ಓಂ ಸ್ವಃ ಭುವಃ ಭೂಃ ಓಂ ಸಃ ಭ್ರೌಂಭ್ರೀಂಭ್ರಾಂ ಓಂ ರಾಹುವೇ ನಮಃ ॥ –ಈ ಮಂತ್ರವನ್ನು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಜಪ ಮಾಡಿದ ಮೇಲೆ ಪೂಜ್ಯರಿಗೆ ದಾನಕೊಡಬೇಕಾದಾಗ ಕೆಳಗಿನ ಮಂತ್ರದಿಂದ ಕೊಡಿಸತಕ್ಕದ್ದು.

|| ಮಂತ್ರ ||

ಓಂ ಕಯಾನಶ್ಚಿತ್ರ ಅಭುವದೂತೀ ಸದಾವೃದಗ್ಂಸಖಾ | ಕಯಾಶಚಿಷ್ಟಯಾವೃತಾ || — ಈ ಮಂತ್ರದಿಂದ ರಾಹುಗ್ರಹ ಕ್ರಮವನ್ನು ಮುಗಿಸಬೇಕು.

## ಅಥ ಕೇತುಗ್ರಹ ಶಾಂತಿ

ನವಗ್ರಹ ಮಂಡಲದ ವಾಯುವ್ಯ ದಿಕ್ಕಿನಲ್ಲಿ ಕೇತುವಿಗೆ ಧ್ವಜಾಕಾರವಾಗಿ ಹುರುಳಿಕಾಳಿನಿಂದ ಮಂಡಲವನ್ನು ಬರೆದು ಚಿತ್ರ ವಸ್ತ್ರದಲ್ಲಿ ಹುರುಳಿ ದಕ್ಷಿಣೆ ಹಾಕಿ ದರ್ಭೆಪತ್ರಿ ನೀಲಿ ಹೂವುಗಳಿಂದ ಪೂಜಿಸಿದ ನಂತರ ನವಗ್ರಹದಲ್ಲಿನ ಕೇತುಗ್ರಹ ಶ್ಲೋಕವನ್ನು ಹೇಳತಕ್ಕದ್ದು.

ಶ್ಲೋಕ|| ರವಿಶುಕ್ರಶ್ಚ ರಾಹುಶ್ಚ ಅಂಗೀರಸ ಛಾಯಾಸುತಃ |
ಮಹಿಪುತ್ರೋಶಿರೋಹೀನಃ ಶೀತಾಂಶುಶ್ಚಂದ್ರಮಾಸುತ ||

|| ಕೇತುಗ್ರಹ ಸ್ತೋತ್ರ ||

ಮೃತ್ಯುಪುತ್ರ ಶಿಖಿಕೇತುಶ್ಚಾನ ಲೋಕಪ್ಲಾತರೂಪಧೃಕ್ | ಬಹುರೂಪಶ್ಚ ಧೂಮ್ರಾಭಃ ಶ್ವೇತ ಕೃಷ್ಣಶ್ಚ ಪೀತಭೃತ್ || ೧ ||
ಛಾಯಾರೂಪೋದ್ವಜಃ ಪುಚ್ಛೋ ಜಗತ್ಪ್ರಲಯ ಕೃತ್ಸದಾ | ಅದೃಷ್ಟರೂಪೋ ದೃಷ್ಟಶ್ಚೇಜ್ಜಂ ತೂನಾಂಭಯಕಾರಕಃ || ೨ ||
ನಾಮಾನ್ಯೇತಾನಿ ಕೇತೋಶ್ಚ ನಿತ್ಯಂಯಃ ಪ್ರಯತಃಪಠೇತ್ | ಕೇತು ಪೀಡಾನ ತಸ್ಯಾಸ್ತಿ ಸರ್ಪ ಚೋರಾಗ್ನಿತೋಭಯಂ ||೩||
ಮಾನಂದದ್ಯಾದ್ಗ್ರಹಜ್ಞಾಯ ವೈಢೂರಂ ಕೇತವೇತದಾ |

ಯಃ ಪಠೇತ್ಪ್ರಯತೋ ನಿತ್ಯಂ ಪಕ್ಷಂಪಕ್ಷಾರ್ಧಮೇವವಾ ।
ಮುಕ್ತಃ ಸರ್ವಭಯೋಭ್ಯೋಽಪಿ ಸರ್ವಾನ್ ಕಾಮಾನವಾಪ್ನುಯಾತ್ ॥೪॥
—ಈ ಪ್ರಕಾರವಾಗಿ ಕೇತುಗ್ರಹ ಸ್ತೋತ್ರವನ್ನು ಮಾಡಿದ ನಂತರ ಕೇತು ಮಂತ್ರವನ್ನು ಹೇಳತಕ್ಕದ್ದು.

॥ ಮಂತ್ರ ॥

ಓಂ ಅಸ್ಯ ಶ್ರೀ ಕೇತುಗ್ರಹ ಮಂತ್ರಸ್ಯ ಮಧುಚ್ಛಂದಾಋಷಿಃ ಕೇತು ರ್ದೇವತಾ ಗಾಯತ್ರೀಛಂದಃ ಕೇತು ಮಂತ್ರ ಜಪೇ ವಿನಿಯೋಗಃ ಓಂ ಪ್ರಾಂ ಪ್ರೀಂ ಪ್ರೌಂ ಸಃ ಓಂ ಭೂರ್ಭುವಃ ಸ್ವಃ ಪ್ರೌಂ ಪ್ರೀಂ ಪ್ರಾಂ ಓಂ ಕೇತುವೇ ನಮಃ ॥ —ಈ ಮಂತ್ರವನ್ನು ತಮ್ಮ ಶಕ್ತ್ಯಾನುಸಾರವಾಗಿ ಜಪಿಸಿದ ನಂತರ ತಮ್ಮ ತಮ್ಮ ಧರ್ಮಗುರುಗಳಿಗೆ ಈ ಕೆಳಗಿನ ಮಂತ್ರದಿಂದ ಕೇತು ಗ್ರಹ ಶಾಂತ್ಯಾರ್ಥ ದಾನವನ್ನು ಕೊಡತಕ್ಕದ್ದು.

॥ ಮಂತ್ರ ॥

ಓಂ ಕೇತುಂ ಕೃಣ್ವನ್ನ ಕೇತವೇ ಪೇಶೌಮರ್ಯಾಗ್ಂ ಅಪೇಶಸೇ ಸಮುಷದ್ಭಿರಜಾಯಥಾ ॥ —ಈ ಮಂತ್ರದಿಂದ ಕೇತುಗ್ರಹ ಕ್ರಮವನ್ನು ಮುಗಿಸತಕ್ಕದ್ದು.

# ಮಂಗಳಾರತಿ

ಆರುತಿಯ ಬೆಳಗುವೆನು ಬನ್ನಿರಿ । ಭಾನುಸುತ ಶನಿದೇವನಿಗೆ ॥
ಮೀರಿದವರ ಸೊಕ್ಕು ಮುರಿಯುವ । ಧೀರ ಕಲಿ ಶನಿದೇವಗೇ ॥ಪ॥

ದೇವದೇವರ ಕಾಡಿದಾತಗೆ । ಭುವನ ಮಾನ್ಯವರೆಲ್ಲರು ॥
ಭಾವಭಕ್ತಿಯಲಿಂದ ಬೆಳಗಿರಿ । ಕೋವಿದಾ ಶನಿದೇವಗೇ ॥೧॥

ದೊರೆಗಳೆಲ್ಲರ ಪಿಡಿದು ಜ್ಞಾನವ ಧರೆಗೆ ಬುದ್ಧಿಯ ಕಲಿಸಿದ ॥
ಕ್ರೂರಭಾಸ್ಕರ ಛಾಯತನುಜಗೆ । ಸೇರಿನಾರಿಯರೆಲ್ಲರೂ ॥೨॥

ಸ್ಮರಿಸಿದವರಿಗೆ ಸರ್ವಸಂಪದ । ವರವನೀಯುವದೇವಗೇ ॥
ಘೋರಕರ್ಮವನೀಗಿ ಮನುಜರ । ಪಾರುಗಾಣಿಸ ಮಂದಗೇ ॥೩॥

# ಗ್ರಂಥ ಪರಿಸಮಾಪ್ತ ವಿಜ್ಞಾಪನೆ

ಸಲಿವಶಕೆ ಹದಿನೆಂಟು ಶತಕದ |
ವರುಷ ಎಂಭತ್ತರ ವಿಳಂಬಿಯು |
ಬರುವ ಪ್ರತಿಪದ ಚೈತ್ರ ಮಾಸದಿ ಮುಗಿದುದೀ ಕೃತಿಯೂ ||
ಬರೆದು ಪಠಿಸಿವ ಜನಗಳೆಲ್ಲರ |
ಹರುಷ ಸಂಪದ ಸರ್ವಸೌಖ್ಯದಿ |
ಕರುಣದಿಂ ಪೊರೆಯೆಂದು ಬೇಡಿದ ಕವಿಯು ರೇವಣನೂ ||

ಅಂತು ಸಂಧಿ ನಾಲ್ಕಕ್ಕಂ ಪರಿಸಮಾಪ್ತಾಯಾಂ

|| ಭದ್ರಂ ಭೂಯಾತ್. ||

S.H.P.
PRESS D.V.G.

ಶ್ರೀ ಶಾಲಸಿದ್ಧೇಶ್ವರ ಪ್ರೆಸ್, ದಾವಣಗೆರೆ.

# ಜ್ಯೋತಿಷ್ಯ ಸರ್ವವಿಷಯಾಮೃತ

ನಾರಕಂತೆ ಮಠಾಧ್ಯಕ್ಷ ವೇ|| ಕಂತಪ್ಪಶಾಸ್ತ್ರಿಗಳವರಿಂದ ರಚಿಸಲ್ಪಟ್ಟ




ಆಸ್ತಿಕರಾದ ಆಬಾಲವೃದ್ಧರಿಗೂ ಜ್ಯೋತಿಶ್ಶಾಸ್ತ್ರವು ಅತ್ಯವಶ್ಯಕವಾದುದು ಮವಷ್ಟೆ! ಮೇಲ್ಕಂಡ ಪುಸ್ತಕವನ್ನು ಕನ್ನಡಿಗರ ಉಪಯೋಗಾರ್ಥವಾಗಿಯೇ ಸಂಗ್ರಹಿಸಿ ಸರಳವಾದ ಕನ್ನಡಭಾಷೆಯಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಪ್ರತ್ಯೇಕವಾಗಿ ವಿವಾಹಾದಿಗಳಲ್ಲಿ ನಕ್ಷತ್ರಸಾಮ್ಯವನ್ನು ನೋಡಿಕೊಳ್ಳುವ ಕ್ರಮವೂ, ಬಾಲಗ್ರಹ ನಿವಾರಣೆ ಮಾಡುವುದೂ, ಅನೇಕ ರೋಗಗಳಿಗೂ ಭೂತಗಳಿಗೂ ಉಚ್ಚಾಟನಕರವಾದ ಯಂತ್ರಗಳೂ, ಮಂತ್ರಗಳೂ, ಶಕುನಗಳ ಫಲಾಫಲಗಳೂ, ಸ್ತ್ರೀವಶ್ಯ, ರತ್ನವಶ್ಯ ಮೊದಲಾದ ವಶ್ಯಗಳ ಯಂತ್ರಗಳೂ, ಅವುಗಳ ಕ್ರಮಗಳೂ, ಘಾತಚಂದ್ರ, ಲಾಭಾಲಾಭ ಇವುಗಳ ಯಂತ್ರಗಳೂ, ಸಾಮುದ್ರಿಕ ಶಾಸ್ತ್ರ, ಅಸ್ತ್ರಾದಿಗಳ ಪರೀಕ್ಷಾಕ್ರಮವೂ, ಪುರುಷಲಕ್ಷಣಗಳೂ, ಸುಮಂಗಲಿ, ವಿಧವೆ, ಪತಿವ್ರತೆ, ಜಾರಿಣಿ ಇವರ ಲಕ್ಷಣಗಳೂ, ಸಂಕ್ರಾಂತಿ, ತಿಥಿಸಂಕ್ರಾಂತಿ, ನಕ್ಷತ್ರಸಂಕ್ರಾಂತಿ ಇವುಗಳ ಫಲಾಫಲಗಳು ಪ್ರಯಾಣ, ಕ್ಷೌರ, ಉಪನಯನ, ವಿವಾಹ, ಗರ್ಭಾದಾನಾದಿ ಸರ್ವಗಳಿಗೆ ದಿನಶುದ್ಧಿಯನ್ನು ನೋಡುವ ಕ್ರಮವೂ, ಗೌರೀಪಂಚಾಂಗವೂ, ನಿಸಿಂದವರೇ ಕಾಲವನ್ನು ತಿಳಿಯುವ ಕ್ರಮವೂ, ಇನ್ನೂ ಮೊದಲಾದ ಉಪಯುಕ್ತ ವಿಷಯಗಳು ಅಡಕವಾಗಿವೆ. ಈ ಪುಸ್ತಕವೊಂದಿದ್ದರೆ ಜ್ಯೋತಿಷ್ಯರನ್ನು, ಪುರೋಹಿತರನ್ನು ಆಶ್ರಯಿಸುವ ಆವಶ್ಯಕವಿಲ್ಲ ಮೂರುವರೆ ರೂಪಾಯಿನ್ನು ಕೊಟ್ಟು ಇದನ್ನು ಕೊಂಡವರು ಖಂಡಿತವಾಗಿಯೂ ಮೂರುವರೆ ಸಾವಿರ ರೂಪಾಯಿನ ಫಲವನ್ನು ಹೊಂದುವುದು. ಧರ್ಮಶಾಸ್ತ್ರ, ಸ್ವರಶಾಸ್ತ್ರ, ಶಿಲ್ಪಶಾಸ್ತ್ರ, ವಾಸ್ತುಶಾಸ್ತ್ರ, ಸಾಮುದ್ರಿಕಶಾಸ್ತ್ರ, ವೈದ್ಯಚಾರ, ಪುರಾಣೇತಿಹಾಸ ಇವುಗಳೆಲ್ಲಾ ಇದರಲ್ಲಿ ಗರ್ಭಿತವಾಗಿವೆ.

ಪುಟ ೩೨೪] ಅಂಚೆ ವೆಚ್ಚ ಪ್ರತ್ಯೇಕ. [ಬೆಲೆ ೩-೫೦

ದೊರೆಯುವ ಸ್ಥಳ:

**ಶ್ರೀ ವಾಲೇಶ ಬುಕ್ ಡಿಪೋ, ದಾವಣಗೆರೆ ೩ಟಿ.**